ಪುಸ್ತಕ ಪ್ರಪಂಚ

ನವೆಂಬರ್-೧೯೭೮



೧೯೦೫-೧೯೭೮

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಗಣ್ಯರಿಗೆ
ಸಂಪಾದಕ ಮಂಡಳಿಯ ಹಾರ್ದಿಕ ಅಭಿನಂದನೆಗಳು

ಪುಸ್ತಕ ಪ್ರಪಂಚ

ಸಂಪುಟ ೪೯ ಸಂಚಿಕೆ ೨ ನವೆಂಬರ್ ೧೯೯೮

ಪರಿವಿಡಿ

ರಕ್ಷಾಪುಟ ಚಿತ್ರಗಳು :
ಪುತಿನ
ತ. ಸು. ಶಾಮರಾವ್
(ಕೃಪೆ : ಎಸ್. ತಿಪ್ಪೇಸ್ವಾಮಿ)

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ಮರೆಯಲಾಗದ ಕವಿ ಪುತಿನ ಅವರು

೧೩-೧೦-೯೮ ರಂದು ತಮ್ಮ ತೊಂಬತ್ತನಾಲ್ಕನೆಯ ವಯಸ್ಸಿನಲ್ಲಿ ಡಾ. ಪುತಿನ ಅವರು ನಿಧನಹೊಂದಲಾಗಿ ನವೋದಯ ಯುಗಕ್ಕೆ, ಆಧುನಿಕ ಕನ್ನಡ ಸಾಹಿತ್ಯದ ಸುವರ್ಣ ಯುಗಕ್ಕೆ ಮಂಗಳ ಹಾಡಿದಂತಾಗಿದೆ. ಕನ್ನಡ ಸಾಹಿತ್ಯ ವೈವಿಧ್ಯಮಯವಾಗಿ, ಲೋಕೋತ್ತರವಾಗಿ, ಓಜಸ್ಸಮೃದ್ಧವಾಗಿ, ವಿನೂತನವಾಗಿ, ಸರ್ವಾಂಗಸುಂದರವಾಗಿ ಜಗತ್ತಿನ ಸಾಹಿತ್ಯದ ಮಟ್ಟವನ್ನೆ ಎತ್ತರಿಸುವ ರೀತಿಯಲ್ಲಿ ಬೆಳೆಸಿದ ಸರಸ್ವತೀ ಚೇತನಗಳಲ್ಲಿ ಅವರೊಬ್ಬರು. ಇಪ್ಪತ್ತನೆಯ ಶತಮಾನದ ಜಾಗತಿಕ ಸಾಹಿತ್ಯಶಕ್ತಿಯೆಲ್ಲ ಒಟ್ಟುಗೂಡಿ ಕನ್ನಡನಾಡಿನಲ್ಲಿ ಮಹಾಪೂರವಾಗಿ ಪ್ರವಹಿಸಿತೇನೋ ಎಂಬ ಭಾವನೆ ಮೂಡುವಂತೆ, ಸರಸ್ವತೀ ಶಕ್ತಿಯನ್ನು ಹಂಚಿಕೊಂಡು ಜನ್ಮಧಾರಣೆ ಮಾಡಿದ ಅದ್ವಿತೀಯ ಪ್ರತಿಭಾವಂತರಲ್ಲಿ ಅವರೊಬ್ಬರು.

ತಮ್ಮ ಜಾಯಮಾನ ಹಾಗೂ ಪ್ರವೃತ್ತಿಗೆ ಹೊಂದದ ವೃತ್ತಿಯಿಂದ ಜೀವನಯಾಪನೆ ಮಾಡಬೇಕಾದ ಸನ್ನಿವೇಶದಲ್ಲಿ ಸಿಕ್ಕಿಹಾಕಿಕೊಂಡಿದ್ದರೂ, ಅವರು ಅಧ್ಯಾತ್ಮಕ್ಷೇತ್ರದಲ್ಲಿ ಏರಿದ ಎತ್ತರ ಎಂಥ ಶ್ರೇಷ್ಠ ಸಂತನ ಮಟ್ಟಕ್ಕಾದರೂ ಎಣೆಯಾಗುವಂಥದು; ಸಾಹಿತ್ಯ ಕ್ಷೇತ್ರದಲ್ಲಿ ಸಾಧಿಸಿದ ಸಿದ್ಧಿ ಯಾವ ನೊಬೆಲ್ ಪಾರಿತೋಷಕ ವಿಜೇತನ ಸಿದ್ಧಿಗಿಂತಲೂ ಕಡಮೆಯಾದದ್ದಲ್ಲ, ಹಲವು ನೊಬೆಲ್ ಪಾರಿತೋಷಕ ವಿಜೇತರ ಸಿದ್ಧಿಗಿಂತ ಮಿಗಿಲಾದದ್ದೆಂದರೂ ಅತಿಶಯೋಕ್ತಿಯಾಗಲಾರದು. ಅವರ ಆ ಯಶಸ್ಸಿಗೆ ಸತತಾಭ್ಯಾಸ ಮತ್ತು ಬಹುಮುಖ ಪ್ರತಿಭೆ ಕಾರಣವಾದರೂ, ವಿಧಿಶಕ್ತಿಯ ಪ್ರತೀಕದಂತಿರುವ ಪವಿತ್ರ ಜನ್ಮವಾತಾವರಣವೇ ಅಸಾಧಾರಣ ಸ್ಫೂರ್ತಿಯ ಸೆಲೆಯೆಂದು ಹೇಳಬೇಕು. ತಂದೆ ತಿರುನಾರಾಯಣ ಅಯ್ಯಂಗಾರ್ ಅವರ ಪ್ರಥಮ ಗುರುವಾದರೂ ಭಾಗವತದ ಶ್ರೀಕೃಷ್ಣ ಅರ್ಥಾತ್ ಚೆಲುವನಾರಾಯಣ ಸ್ವಾಮಿ ಅವರ ಅನಾದಿನಿತ್ಯ ಗುರು. ಅವರ ಭಕ್ತಿ ಕರ್ಮಜ್ಞಾನಗಳ, ಸಂಸಾರ ಕಾವ್ಯಯೋಗಗಳ, ಧ್ಯಾನ ತಪಸ್ಸುಗಳ ಮೂಲಮಾರ್ಗಗಂತವ್ಯಗಳೆಲ್ಲ ಅವನೇ. ನರಸಿಂಹಾಚಾರ್ಯರ ದೃಷ್ಟಿಯಲ್ಲಿ ಚೆಲುವನಾರಾಯಣಸ್ವಾಮಿ ಎಂದರೆ ಮೇಲುಕೋಟೆ; ತಮಗೂ ಅದಕ್ಕೂ ಅವಿನಾಭಾವ ಸಂಬಂಧ. ಮೇಲುಕೋಟೆಯೊಳಗೆ ಪುತಿನ ಅವರೊ, ಅವರೊಳಗೆ ಮೇಲುಕೋಟೆಯೊ ಎನ್ನುವಂಥ ಆಧ್ಯಾತ್ಮಿಕ ಸಂಬಂಧವದು. ಅವರ ಪಾಲಿಗದು ಬರಿಯ ಮೃಣ್ಮಯ ಶೈಲವಲ್ಲ; ಚಿನ್ಮಯ ವಿಲಾಸ. ಅವರ ಚಿತ್ಕೋಶ ಅಂತರಂಗವನ್ನೆಂತೋ ಅವರ ಕಾವ್ಯವನ್ನೆಲ್ಲ ಆ ವಿಲಾಸ ಆವರಿಸಿಕೊಂಡಿದೆ. ಶ್ರೀರಾಮಾನುಜಾಚಾರ್ಯರ ಚರಣಧೂಳಿಯ ಸಂಸ್ಪರ್ಶದಿಂದ ಮೇಲುಕೋಟೆ ಪಾವನವಾಯಿತು; ವೈಕುಂಠವಾಯಿತು, ಪುತಿನ ಅವರ ಸಂಪರ್ಕದಿಂದ ಅದರ ಕೀರ್ತಿ ಅಜರಾಮರವಾಯಿತು; ಅವರ ಸಾಹಿತ್ಯ ಸರ್ವಸ್ವ ಅದರ ದಿವ್ಯ ಅವ್ಯಕ್ತ ಸಂದೇಶಕ್ಕೊಂದು ಮಾಧ್ಯಮವಾಯಿತು.

ನರಸಿಂಹಾಚಾರ್ಯರು ಸಂಪ್ರದಾಯದ ಕುಟುಂಬದಲ್ಲಿ ಹುಟ್ಟಿದರೂ ಆಧುನಿಕತೆಯನ್ನು ತಿರಸ್ಕರಿಸಲಿಲ್ಲ; ಅಧ್ಯಾತ್ಮದಲ್ಲಿ ಮುಳುಗಿದರೂ ವೈಚಾರಿಕತೆಯನ್ನು ನಿರ್ಲಕ್ಷಿಸಲಿಲ್ಲ; ಧ್ಯಾನ ತಪಸ್ಸುಗಳಿಂದ ಅವರು ಪುಷ್ಟಿ ಪಡೆದರೂ ಸಮಾಜಕ್ಕೆ ಅಂಟಿಯೂ ಅಂಟದಂತಿದ್ದರೂ, ಲೋಕಾನುಭವ ಸಂಪತ್ತಿಗೆ ಎರವಾದವರಲ್ಲ; ಮತೀಯಾಚರಣೆಗಳಲ್ಲಿ ಕಠೋರ ನಿಷ್ಠೆಯಿದ್ದರೂ ಮಾನವೀಯತೆಯನ್ನು ಮರೆಯಲಿಲ್ಲ. ವಿಜ್ಞಾನ ಕಲ್ಪನೆ ಸಂಗೀತ ಚಿಂತನೆ ಭಕ್ತಿ-ಇವುಗಳ ಸುಂದರ ರಸಪಾಕ ಅವರ ಸಾಹಿತ್ಯ.ಸಂಸ್ಕೃತದ ಮಾರ್ಗತವಿಳಿನ ಮೂಲಸೆಲೆ ಇಂಗ್ಲಿಷಿನ ವಿಶ್ವವಿಶಾಲತೆ, ಕನ್ನಡದ ದೇಶಿ ಪುತಿನ ಅವರ ಶೈಲಿಯ ಲಕ್ಷಣ. ಆ ಯುಗದ ಮಹಾಸಾಹಿತಿಗಳಂತೆ ಅವರು ಕನ್ನಡ ಭಾಷೆಗೆ ನೀಡಿರುವ ಓಜಸ್ಸು ಅಸಾಧಾರಣವಾದದ್ದು. ಅವರ ಬದುಕಿನಲ್ಲಂತೂ ಅವರ ಸಾಹಿತ್ಯದಲ್ಲಿ ಸನಾತನತೆ ನೂತನತೆಗಳ ಸಂಗಮವನ್ನು ಕಾಣಬಹುದು. ಅವರು ಪ್ರಧಾನವಾಗಿ ಕವಿಯಾದರೂ,ಮಲೆದೇಗುಲ ಶ್ರೀಹರಿಚರಿತೆಯಂಥ ಶ್ರೇಷ್ಠ ಕಾವ್ಯಗಳನ್ನು ರಚನೆಗೈದಿದ್ದರೂ,ಅಭಿಜಾತಶೈಲಿಯ ಅಹಲ್ಯೆಯಂಥ ಶ್ರೇಷ್ಠ ನಾಟಕಗಳನ್ನು ಸಹ ಸೃಷ್ಟಿಸಿದ್ದಾರೆ. ವಿಕಟಕವಿ ವಿಜಯ ಅವರ ಲೋಕಾನುಭವಕ್ಕೂ ಸಾಕ್ಷೀ ಪ್ರಜ್ಞೆಗೂ ನಿದರ್ಶನವಾಗಿದೆ. ಗೋಕುಲ ನಿರ್ಗಮನದಂಥ ಅಪೂರ್ವ ವಿಶಿಷ್ಟ ಗೀತನಾಟಕಗಳನ್ನು ರಚಿಸಿದವರಲ್ಲಿ ಅವರು ಅಗ್ರಗಣ್ಯರು. ಅವರು ಅಷ್ಟನ್ನೇ ಬರೆದಿದ್ದರೂ ಅವರ ಕೀರ್ತಿ ಮುಕ್ಕಾಗುತ್ತಿರಲಿಲ್ಲ. ಅವು ಯಾವ ಭಾಷೆಗಾದರೂ ಭೂಷಣ. ಕನ್ನಡ ಸಾಹಿತ್ಯದ ಕೀರ್ತಿ ಪತಾಕೆಯನ್ನು ನಭಶ್ಚುಂಬಿಯಾಗಿ ಮೆರೆಸುವಲ್ಲಿ ಅವುಗಳ ಸಾಫಲ್ಯವಿದೆ. ಕಥೆ, ಪ್ರಬಂಧ, ಕಾವ್ಯಮೀಮಾಂಸೆಗಳ ರಚನೆಯಲ್ಲಿಯೂ ಅವರು ಸಿದ್ಧಹಸ್ತರು. ಯಾವ ಭಾಷೆಯಲ್ಲಾದರೂ ಸರಿಯೆ, ರಾಮಾನುಜೀಯ ಸಂಪ್ರದಾಯದ ಸಾಹಿತಿಗಳು ಪುತಿನ ಅವರ ಎತ್ತರಕ್ಕೆ ಏರಲಾರರೇನೊ ಎಂದೆನಿಸುತ್ತದೆ.

ಕುವೆಂಪು ಬೇಂದ್ರೆ ಕಾರಂತ ಮಾಸ್ತಿ ಪುತಿನ ಅನಕೃ ಕಟ್ಟಿಮನಿ ಕನ್ನಡ ಸಾಹಿತ್ಯವನ್ನು ವಿಶ್ವ ವಿಶಾಲವಾಗಿ ಬೆಳೆಸಿದ್ದು ಮಾತ್ರವಲ್ಲ, ನೂರಾರು ಸಾಹಿತಿಗಳ ಉದಯಕ್ಕೆ ಕಾರಣರಾಗುತ್ತಾರೆ. ಪ್ರತ್ಯಕ್ಷವಾಗಿಯೊ ಪರೋಕ್ಷವಾಗಿಯೊ ಅವರ ವ್ಯಕ್ತಿತ್ವದ ಪ್ರಭಾವಕ್ಕೊಳಗಾಗದವರಿಲ್ಲ; ಅವರ ಸಾಹಿತ್ಯದಿಂದ ಸ್ಫೂರ್ತಿ ಪ್ರೇರಣೆಗಳನ್ನು ಪಡೆಯದವರಿಲ್ಲ; ಅವರ ಚಾಳಿ ಚರ್ಯೆ ನಡಾವಳಿಗಳನ್ನು ಅನುಸರಿಸದವರಿಲ್ಲ. ಅನೇಕರಿಗೆ ಅವರ ಕೃತಿಗಳು ಮಾದರಿಯಾಗುತ್ತವೆ; ಅವರ ಸಂಪರ್ಕಕ್ಕೆ ಸಂದವರು, ಅವರ ಪ್ರಭಾವಳಿಯೊಳಗೆ ಸೇರಿದವರು ನಾನಾ ರೀತಿಯಲ್ಲಿ ಉದ್ಧಾರವನ್ನು ಕಂಡುಕೊಂಡದ್ದುಂಟು. ಆ ಹಿರಿಯರು ಬರೆಯುತ್ತಿದ್ದರೆಂದೇ ಹಲವರು ಬರಹಕ್ಕೆ ಕೈಹಾಕಿದ್ದುಂಟು. ಅವರು ಕರ್ನಾಟಕದಲ್ಲಿ ವಿನೂತನ ಮಹೋಜ್ವಲ ಸಾಹಿತ್ಯಿಕ ಸಾಂಸ್ಕೃತಿಕ ವಾತಾವರಣವನ್ನು ಸೃಷ್ಟಿಸಿದರೆಂಬುದು ಹೆಮ್ಮೆಯ ಸಂಗತಿ. ಅವರು ಹೋದಲ್ಲಿ ಬಂದಲ್ಲಿ ಜಾತಿ ಕುಲ ಲಿಂಗವೃತ್ತಿ ಭೇದವಿಲ್ಲದೆ, ಶ್ರೀ ಸಾಮಾನ್ಯರು ಮೊದಲುಗೊಂಡು ರಾಜಕಾರಣಿಗಳೆ ಕೊನೆಯಾಗಿ, ಅವರ ಸಂದರ್ಶನಾರ್ಥವಾಗಿ; ಅವರ ಉಪದೇಶ ಶ್ರವಣಾರ್ಥವಾಗಿ ಕಿಕ್ಕಿರಿ

ಯುತ್ತಿದ್ದುದುಂಟು. ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅಚ್ಚಳಿಯದ ಮುದ್ರೆಯೊತ್ತಿದ್ದಾರೆಂದೇ ಹೇಳಬಹುದು. ಈ ಎಲ್ಲ ದೃಷ್ಟಿಗಳಿಂದ ಪುತಿನ ಸರ್ವ ಗೌರವ ಭಾಜನರಾಗಿದ್ದಾರೆ.

ಗುಂಪುಗುಳಿತನಕ್ಕೂ ಪುತಿನ ಅವರಿಗೂ ಗಾವುದ ಗಾವುದ ದೂರ. ಸಾಹಿತಿಗಳ ಸಮೂಹದಲ್ಲಿ ಅಂಥ ಸಜ್ಜನರು ಹಾಗೂ ಸಾತ್ವಿಕರು ವಿರಳ. ಮದಮಾತ್ಸರ್ಯ ಪ್ರತೀಕಾರ ಮನೋಭಾವ, ಅಹಂಭಾವ ಚಾಡಿಕೋರತನ ಅವರಲ್ಲಿಲ್ಲವೇ ಇಲ್ಲ. ಅವರ ಜಾತಕದಲ್ಲಿ ಕಾಠಿನ್ಯವೆಂಬುದೇ ಇಲ್ಲ. ದೌರ್ಬಲ್ಯವೆನ್ನುವಷ್ಟರಮಟ್ಟಿಗೆ ಮಾರ್ದವತೆ ಅವರ ಧಮನಿ ಧಮನಿಗಳಲ್ಲಿ ಹರಿಯುತ್ತದೆ. ಅಪ್ರಿಯವಾದ ಸತ್ಯವನ್ನು ಹೇಳಬಾರದೆಂಬುದೇ ಅವರ ವ್ರತ. ದೌಷ್ಟ್ಯವನ್ನು ಅನೀತಿಯನ್ನು ಅನ್ಯಾಯವನ್ನು ಕಂಡಾಗ ಓಟಕೀಳುತ್ತಾರೆಯೇ ಹೊರತು ಸೆಟೆದು ನಿಲ್ಲಲಾರರು. ಸಾಹಿತ್ಯದಲ್ಲಿಯೂ ದೌಷ್ಟ್ಯದ ಬಗ್ಗೆ ಕಠೋರವನ್ನು ವ್ಯಕ್ತಪಡಿಸಲು ಹಿಂಜರಿಯುತ್ತಾರೆ. ಖಾಸಗಿ ಸಂವಾದದಲ್ಲಿಯೂ ಪರರನ್ನು ಮರೆತೂ ನಿಂದಿಸಲಾರರು. ಅಕಸ್ಮಾತ್ತಾಗಿ, ಅವರಿಗರಿವಿಲ್ಲದೆಯೆ ಇತರರ ಪ್ರಸ್ತಾಪ ಬಂದು, ಟೀಕೆ ಮಾಡಿದ್ದಾದರೆ, ಒಡನೆಯೇ ಮೈಮೇಲೆ ಚೇಳು ಬಿದ್ದವರಂತೆ ಚಡಪಡಿಸುತ್ತಾರೆ. ಆ ಮಾತು ನಾನು ಹೇಳಬಾರದಿತ್ತು, ಅದನ್ನಿಲ್ಲೇ ಮರೆತುಬಿಡಿ ಎಂದವರು ಎದುರಿದ್ದವರನ್ನು ಕೇಳಿಕೊಳ್ಳುತ್ತಾರೆ.

ಪುತಿನ ಅವರು ಸ್ವಭಾವತಃ ಸಂಕೋಚ ಪ್ರವೃತ್ತಿಯವರು. ತಾವಾಗಿ ಮೇಲೆ ಬಿದ್ದು ಯಾರನ್ನು ಮಾತಾಡಿಸುವುದಿಲ್ಲ. ತಮ್ಮ ಬಳಿಗೆ ಹೋದವರನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಮೊದಮೊದಲು ಸಾರ್ವಜನಿಕ ವೇದಿಕೆಯ ಮೇಲೆ ಬರಲು ಹಿಂಜರಿಯುತ್ತಿದ್ದರು. ಆದರೆ ಖಾಸಗಿ ಕೂಟಗಳಲ್ಲಿ ಅವಿರತವಾಗಿ ಮಾತಾಡಬಲ್ಲರು. ಅವರ ಸಂಕೋಚ ಸ್ವಭಾವವನ್ನು ಮುರಿದು ಸಾರ್ವಜನಿಕ ವೇದಿಕೆಗಳ ಮೇಲೆ ಬರಲು ಧೈರ್ಯ ತುಂಬಿದವರು ತೀನಂಶ್ರೀಯವರು. ಅವರು ಬರೆದದ್ದನ್ನು ಆಗಾಗ್ಗೆ ತಾವೇ ಸಂಘಟಿಸಿದ ಗೆಳೆಯರ ಬಳಗದಲ್ಲಿ ಓದಿಸಿ, ವ್ಯಾಖ್ಯಾನಮಾಡಿ, ಅವರ ಬೆನ್ನು ತಟ್ಟುತ್ತಿದ್ದುದಲ್ಲದೆ, ಹೋದೆಡೆಯಲ್ಲೆಲ್ಲ ಅವರ ಸಾಹಿತ್ಯವನ್ನು ಪ್ರಚಾರ ಪಡಿಸುತ್ತಾರೆ. 'ತೀನಂಶ್ರೀ ನನ್ನ ಸಾಹಿತ್ಯದ ಸಾಕುತಾಯಿ" ಎಂದು ಪುತಿನ ಅವರೇ ಹೇಳಿಕೊಂಡದ್ದುಂಟು. ಸಹೃದಯರಿಲ್ಲದೆ ಸೊರಗಿ ಹೋಗಬಹುದಾಗಿದ್ದ ಒಬ್ಬ ಶ್ರೇಷ್ಠ ಸಂತಕವಿಯನ್ನು ಗುರುತಿಸಿದ, ರೂಪಿಸಿದ, ಬೆಳಕಿಗೆ ತಂದ ಕೀರ್ತಿ ಗುರು ತೀನಂಶ್ರೀ ಅವರಿಗೆ ಸಲ್ಲಬೇಕು. ಈ ಕವಿ ಋಷಿ ಸಂತರ ಆಶೀರ್ವಾದ ಸದಾ ಕರ್ನಾಟಕಕ್ಕೆ ರಕ್ಷೆಯಾಗಿರಲಿ, ಭಾರತಕ್ಕೆ ಬೆಳಕಾಗಿರಲಿ, ವಿಶ್ವಕ್ಕೆ ಶಾಂತಿಯನ್ನು ನೀಡಲಿ!

ಬಿಹಾರದ ಹಗರಣ

ಬುದ್ಧ ಮಹಾವೀರರು ಸಂಚರಿಸಿದ, ಅಶೋಕನ ರಾಜಧಾನಿಯಿದ್ದ, ರಾಜೇಂದ್ರ ಪ್ರಸಾದ್ ಜಯಪ್ರಕಾಶ್ ನಾರಾಯಣರೇ ಮೊದಲಾದ ಸಾತ್ವಿಕರು ಜನ್ಮತಳೆದ ಬಿಹಾರ ವಿಂದು ಏನಾಗಿದೆ? ಆ ಮಹಾವ್ಯಕ್ತಿಗಳು ಬದುಕಿದ ನಾಡಿನಲ್ಲಿ ಅನೀತಿ ಅನ್ಯಾಯ ಅಧರ್ಮ ಕೊಲೆ ದರೋಡೆ ಅದಕ್ಷತೆ ಭೀತಿ ಭ್ರಷ್ಟಾಚಾರ ತುಂಬಿ ತುಳುಕಾಡುತ್ತವೆ ಎಂದು ಮೂವತ್ತು–ನಲವತ್ತು ವರ್ಷಗಳ ಹಿಂದೆ ಯಾರಾದರೂ ನಿರೀಕ್ಷಿಸಿದ್ದರೆ? ಅನ್ಯಾಯದ ಅತಿರೇಕ, ಭ್ರಷ್ಟಾಚಾರದ ಅಭಿಷೇಕ ನಿನ್ನೆ ಮೊನ್ನೆಯದಲ್ಲ, ಹತ್ತಾರು ವರ್ಷಗಳಿಂದ ಅರ್ಬುದ ವ್ರಣದಂತೆ ಬೆಳೆಯುತ್ತಿದೆ. ಅಲ್ಲಿ ಮೇವು ಹಗರಣವಿದೆ, ಸ್ವಜಾತಿ ಸ್ವಬಂಧು ಪಕ್ಷಪಾತ ನಡೆದಿದೆ, ನೀತಿ ನಡೆವಳಿಗಳು ಅಧೋಮಾರ್ಗ ಹಿಡಿದಿವೆ, ನಿಜ. ಅವುಗಳನ್ನು ಪತ್ತೆ ಹಚ್ಚಲು ಭಾಜಪ ಸರ್ಕಾರ ನೇಮಿಸಿದ ರಾಜ್ಯಪಾಲರೇ ಬರಬೇಕಾಗುತ್ತದೆ.

ರಾಜ್ಯಪಾಲರು ರಾಷ್ಟ್ರಪತಿಗಳಿಗೆ ಪತ್ರ ಬರೆದು, ಬಿಹಾರದಲ್ಲಿ ರಾಜ್ಯಯಂತ್ರ ಸಂಪೂರ್ಣವಾಗಿ ಹದಗೆಟ್ಟಿರುವುದರಿಂದ, ಅಲ್ಲಿಯ ಸರ್ಕಾರವನ್ನು ವಜಾಮಾಡಬೇಕು, ರಾಷ್ಟ್ರಪತಿ ಸರ್ಕಾರವನ್ನು ಜಾರಿಗೆ ತರಬೇಕೆಂದು ಒತ್ತಾಯಪಡಿಸಿದ್ದಾರೆ. ತಮ್ಮ ನಿಲವನ್ನು ಸಮರ್ಥಿಸಿಕೊಳ್ಳಲು ಅವರು ಕೊಡುವ ಕಾರಣಗಳಿವು: ಹಣಕಾಸಿನ ದುರ್ವ್ಯವಹಾರ, ನಿರಂತರವಾಗಿ ನಡೆಯುತ್ತಿರುವ ಕೊಲೆಗಳು, ಮೇವು ಹಗರಣದ ಸಾಕ್ಷಿಗಳ ನಿರ್ನಾಮ, ಶಾಸನ ಸಭೆಯ ಗಲಭೆಗಳು, ಕಾನೂನು ಮುರಿತ, ಭ್ರಷ್ಟಾಚಾರದ ನಗ್ನನರ್ತನ, ರಾಜಕೀಯಾಧಿಕಾರದ ದುರುಪಯೋಗ, ಇತ್ಯಾದಿ.

ರಾಜ್ಯಪಾಲರು ಮುಂದಲಿಗೆಯ ಕೆಳಗೆ ನುಸಿದರೆ, ರಾಜಕೀಯ ಚಾಣಾಕ್ಷ ಲಾಲೂ ಪ್ರಸಾದ್ ಯಾದವ್ ರಂಗೋಲಿಯ ಕೆಳಗೆ ನುಸುಳುತ್ತಾರೆ. ಅವರು ಹುಟ್ಟು ರಾಜಕಾರಣಿ. ಆ ಕ್ಷೇತ್ರದಲ್ಲಿಯ ಹಳೆಯ ಲಾಗಪಟ್ಟುಗಳಿಗವರು ಅಂಟಿಕೊಂಡಿಲ್ಲ; ಹೊಸ ಹೊಸ ಪಟ್ಟುಗಳನ್ನು ಸೃಷ್ಟಿಸುತ್ತಾರೆ. ಮೇವು ಹಗರಣದ ಸಂದರ್ಭದಲ್ಲಿ ಸೆರೆಮನೆಗೆ—(ಅವರ ಮಟ್ಟಿಗೆ ಅದೇ ಅರಮನೆ)—ಹೋಗಬೇಕಾದ ಅನಿವಾರ್ಯತೆ ಯೊದಗಿದಾಗ, ಒಂದು ಕ್ಷಣವೂ ಪೋಲಾಗದಂತೆ ಅಡುಗೆ ಮನೆಯಲ್ಲಿ ರೊಟ್ಟಿ ತಟ್ಟುತ್ತಿದ್ದ ಪತ್ನಿ ರಾಬ್ಡಿದೇವಿಯನ್ನು ದರದರನೆ ಎಳೆತಂದು ತಾವು ಬಿಟ್ಟ ಗಾದಿಯ ಮೇಲೆ ಕೂರಿಸಿದ್ದು ಅವರ ಕುಶಾಗ್ರಮತಿಗೂ ಅಲ್ಲಿಯ ಜನರ ಅವಿಚಾರಮತಿಯ ಮುಗ್ಧ ವಿಧೇಯತೆಗೂ ಸಾಕ್ಷಿಯಾಗಿದೆ. ವಾಸ್ತವವಾಗಿ ಲಾಲೂ ಅವರೇ ಮುಖ್ಯಮಂತ್ರಿ; ರಾಬ್ಡಿದೇವಿ ಅವರ ನೆರಳು; ಸತಿಪತಿಗಳಿಂದ ಮೇಲೆ ಆ ಸಂಬಂಧ ಸರಿತಾನೆ? ರಾಜ್ಯಪಾಲರು ತಮ್ಮ ಶಿಫಾರಸಿನೊಡನೆ ದೆಹಲಿಯನ್ನು ತಲುಪುವ ಮೊದಲೇ ಬಿಹಾರ ಶಾಸನ ಸಭೆಯಲ್ಲಿ ವಿಶ್ವಾಸ ಮತ ಮಂಡಿಸಿ ಯಶಸ್ವಿಯಾದದ್ದು ಲಾಲೂ ಅವರ ಕೌಟಿಲ್ಯ ನೀತಿಗೆ ಮತ್ತೊಂದು ನಿದರ್ಶನ. ಮುಖ್ಯಮಂತ್ರಿ ರಾಬ್ಡಿದೇವಿಗೆ ಮುನ್ನ ಎಲ್ಲ ಸರ್ಕಾರಿ ಕಡತ ಗಳನ್ನು ಲಾಲೂ ಅವರೆ ನೋಡಿ, ಟಿಪ್ಪಣಿ ಬರೆದು ಕಳಿಸುತ್ತಾರೆಂದೂ, ಚುಕ್ಕಿಯಿಡುವ

ಕಡೆ ಪತಿವ್ರತಾ ಶಿರೋಮಣಿ ದೇವಿಯವರು ಸಹಿ ಹಾಕುತ್ತಾರೆಂದೂ ಪತ್ರಿಕೆಗಳು ಸಾರುತ್ತವೆ. ಪತ್ನಿ ಮುಖ್ಯಮಂತ್ರಿಯಾದರೇನು? ಗಂಡನಿಗೆ ವಿಧೇಯಳಾಗಿರಬೇಕಾದ್ದು ಮನುಸ್ಮೃತಿಯ ಪ್ರಕಾರ ಸಹಜವಲ್ಲವೆ? ಮುಖ್ಯಮಂತ್ರಿಯಾದ ಕೂಡಲೇ ಹೆಣ್ಣು ಪತ್ನಿತ್ವವನ್ನು ಕಳೆದುಕೊಳ್ಳುತ್ತಾಳೆಯೇ?

ದುರಾಡಳಿತ ವಿರೋಧಿಗಳೂ ಉತ್ಸಾಹಶೀಲರೂ ಆದ ಬಿಹಾರ ಮೂಲದ ಕೆಲವು ಮಂತ್ರಿಗಳ ಮತ್ತು ಗೃಹಸಚಿವರ ಒತ್ತಡದಿಂದಾಗಿ ಪ್ರಧಾನ ಮಂತ್ರಿಗಳು ರಾಜ್ಯಪಾಲರ ಶಿಫಾರಸು ಪತ್ರವನ್ನು ಸಚಿವ ಮಂಡಲಿಯ ಮುಂದಿಡುತ್ತಾರೆ. ಗೈರುಹಾಜರಿಯ ಮಂತ್ರಿಗಳು ಹೊರತಾಗಿ, ಎಲ್ಲರೂ ರಾಜ್ಯಪಾಲರ ಶಿಫಾರಸ್ಸನ್ನೊಪ್ಪಿಕೊಳ್ಳುತ್ತಾರೆ. ದೂರದಲ್ಲಿದ್ದುಕೊಂಡೆ ಕೆಲವರು ಮಂತ್ರಿಮಂಡಲದ ನಿರ್ಣಯವನ್ನು ವಿರೋಧಿಸುವ ಮೂಲಕ ತಮ್ಮ ದ್ವಂದ್ವ ಮನೋಧರ್ಮವನ್ನು ಪ್ರಕಟಿಸುತ್ತಾರೆ; ಆದರೆ ಲೋಕದ ದೃಷ್ಟಿಯಲ್ಲಿ ಅವರ ವಿರೋಧ ಸರಿಯೆನಿಸಿದರೂ, ಮಂತ್ರಿಮಂಡಲಿಗೆ ರಾಜೀನಾಮೆ ನೀಡುವ ಧೈರ್ಯವಾಗಲಿ, ಪ್ರಜ್ಞಾವಂತಿಕೆಯಾಗಲಿ ಅವರಲ್ಲಿಲ್ಲ. ಖೇದಾಶ್ಚರ್ಯದ ಸಂಗತಿಯೆಂದರೆ, ಮಂತ್ರಿಮಂಡಲಿಯ ನಿರ್ಣಯವನ್ನು ಟೀಕಿಸಿದವರೆ ಮತ್ತೆ ಅದೇ ನಿರ್ಣಯವನ್ನು ರಾಷ್ಟ್ರಪತಿ ಭವನಕ್ಕೆ ಹೊತ್ತುಹಾಕಬೇಕೆಂಬ ಸೂಚನೆಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದು.

ಪ್ರಾಯಶಃ ರಾಜೇಂದ್ರಪ್ರಸಾದರ ನಂತರ ರಾಷ್ಟ್ರಪತಿ ಸ್ಥಾನವನ್ನು ತುಂಬಿದ ನಿಷ್ಪಕ್ಷಪಾತ ದೃಷ್ಟಿಯ, ಪ್ರಜ್ಞಾವಂತಿಕೆಯ, ರಬ್ಬರ್ ಸ್ಟ್ಯಾಂಪ್ ಅಲ್ಲದ ಅಪರೂಪದ ವ್ಯಕ್ತಿ ಕೆ. ಆರ್. ನಾರಾಯಣ್. ಉತ್ತರ ಪ್ರದೇಶದ ಭಾರತೀಯ ಜನತಾ ಪಕ್ಷದ ಮಂತ್ರಿಮಂಡಲವನ್ನು ವಿಸರ್ಜಿಸುವಂತೆ ಗುಜ್ರಾಲ್‌ರ ಸಂಯುಕ್ತ ಸರ್ಕಾರ ಮಾಡಿದ ಶಿಫಾರಸನ್ನು ವಾಪಸು ಮಾಡಿದಾಗಲೇ ಅವರೆಂಥ ನ್ಯಾಯನಿಷ್ಠುರರು, ಜಿಗಟು ನೀತಿಯ ಧೀರರೆಂಬ ಸಂಗತಿ ಲೋಕವಿಶ್ರುತವಾಗಿತ್ತು. ಅದನ್ನು ಕಂಡೂ ಕಂಡೂ ಕಾಂಗ್ರೆಸ್ ಡಿಎಂಕೆ ಕಮ್ಯೂನಿಸ್ಟ್ ಮೊದಲಾದ ಪಕ್ಷಗಳ ವಿರೋಧದ ನಡುವೆಯೂ ಬೇಜಾಗೃತಿಯಿಂದ ವಾಜಪೇಯಿ ಸರ್ಕಾರ ಬಿಹಾರ ಸರ್ಕಾರದ ರದ್ದಿಯಾತಿ ಶಿಫಾರಸ್ಸನ್ನು ರಾಷ್ಟ್ರಪತಿಗೆ ಕಳಿಸಿದ್ದು ವಿಷಾದದ ಹಾಗೂ ಆಶ್ಚರ್ಯದ ಸಂಗತಿ. ರಾಷ್ಟ್ರಪತಿಯವರು ಶಿಫಾರಸ್ಸನ್ನು ವಾಪಸು ಮಾಡುವುದಾದರೆ, ಮತ್ತೆ ಅದನ್ನು ಹಿಂದಕ್ಕೆ ಕಳಿಸಲಾಗುತ್ತದೆ, ಆಗವರು ಅನಿವಾರ್ಯವಾಗಿ ಅನುಮೋದಿಸಬೇಕಾಗುತ್ತದೆಂದು ಒಬ್ಬಿಬ್ಬರು ಮಂತ್ರಿಗಳು ಅಶ್ಲೀಲ ದುಡುಕಿನಿಂದ, ಬಾಲಿಶ ರೀತಿಯಲ್ಲಿ ಬಹಿರಂಗವಾಗಿ ಹೇಳಿದ್ದಂತು ವಾಜಪೇಯಿಯವರ ಅಸಹಾಯಕ ಸ್ಥಿತಿಗೆ ನಿದರ್ಶನವಾಗಿದೆ. ಪ್ರಜಾಪ್ರಭುತ್ವ ಮಾರ್ಗದ ಉತ್ತಮ ಸಂಪ್ರದಾಯ ಸಂಯುಕ್ತ ರಂಗದಲ್ಲಿ ದೊರಕಲಾರದೇನೋ ಎಂಬ ಸಂದೇಹ ಬುದ್ಧಿಜೀವಿಗಳಲ್ಲಿ ಮೂಡುವಂತಿದೆ.

ನಾರಾಯಣರು ಯಾವ ರಾಜಕೀಯ ಪಕ್ಷಕ್ಕೂ ಸೇರಿದವರಲ್ಲವಾದ್ದರಿಂದ ಅವರಿಗೆ ಯಾರ ಮುಲಾಜೂ ಇಲ್ಲ; ಯಾರ ಕಡೆಗೂ ವಾಲಬೇಕಾದ್ದಿಲ್ಲ; ದೇಶದ ಹಿತದೃಷ್ಟಿಯೊಂದೇ ಅವರ ಮುಂದಿರುವ ಆದರ್ಶ. ಬಿಹಾರದ ರಾಜ್ಯಪಾಲರು ಭಾಜಪದವರಾದ್ದರಿಂದ ಎಂಥ ಅನಾರೋಗ್ಯ ಪರಿಸ್ಥಿತಿಯನ್ನವರು ಸೃಷ್ಟಿಸಿದರೆಂಬುದು ಸುಸ್ಪಷ್ಟ.

ಚರಿತ್ರೆಯ ಪುಟಗಳಲ್ಲಿಣುಕಿದ್ದಾದರೆ ಇಂಥ ಹಲವು ನಿದರ್ಶನಗಳು ದೊರಿಯುತ್ತವೆ. ಅಂಥ ಹುದ್ದೆಗಳಿಗೆ ರಾಜಕೀಯೇತರ ತಜ್ಞರನ್ನು ನೇಮಿಸುವುದಾದರೆ ಅನಾಹುತ ಕನಿಷ್ಠಪ್ರಮಾಣಕ್ಕಿಳಿದಾವು. ನಾರಾಯಣರು ಕಾನೂನಿನ ಕಸರತ್ತಿನಲ್ಲಿ ತಲ್ಲೀನರಾಗುತ್ತಾರೆ. ರಾಷ್ಟ್ರದ ಶ್ರೇಷ್ಠನ್ಯಾಯವಾದಿಗಳೊಡನೆ ಆಡಳಿತಗಾರರೊಡನೆ ಎರಡು ಮೂರು ದಿನ ಎಡೆಬಿಡದೆ ಚರ್ಚೆ ಸಮಾಲೋಚನೆ ನಡಸುತ್ತಾರೆ. ಸರ್ಕಾರಿಯಾ ವರದಿಯನ್ನೂ ವರಿಷ್ಠ ನ್ಯಾಯಾಲಯದ ಹಿಂದಿನ ತತ್ಸಂಬಂಧದ ತೀರ್ಪುಗಳನ್ನೂ ಅಧ್ಯಯನ ಮಾಡುತ್ತಾರೆ. ಶಾಸನ ಸಭೆಯಲ್ಲಿ ರಾಬ್ಡಿದೇವಿ ಸರ್ಕಾರದ ಪರವಾಗಿ ವಿಶ್ವಾಸನಿರ್ಣಯ ಅಂಗೀಕೃತಗೊಂಡ ಮೇಲೆ ರಾಷ್ಟ್ರಪತಿಯಾಗಲಿ ರಾಜ್ಯಪಾಲರಾಗಲಿ ಮಾಡುವುದೇನಿದೆ ?

ಎಲ್ಲ ರಾಜ್ಯಗಳಲ್ಲಿಯೂ ಕೊಲೆ ನಡೆಯುತ್ತವೆ; ಸರ್ಕಾರವೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಪರಿಸ್ಥಿತಿ ಹದಗೆಟ್ಟಿರುತ್ತದೆ. ಸರ್ಕಾರದ ಅತ್ಯುನ್ನತ ಸ್ಥಾನದಿಂದ ಹಿಡಿದು ಕನಿಷ್ಠ ಸ್ಥಾನದವರೆಗೂ ಲಂಚ ದೇವತೆಯ ಬೆತ್ತಲೆ ಕುಣಿತ ರಾಜಾರೋಷವಾಗಿ ಸಾಗುತ್ತದೆ. ಕ್ಲಿಂಟನ್‌ನನ್ನು ವಿಚಾರಿಸಿದವರೂ ಇದ್ದಾರೆ. ಆದರೂ ಪ್ರಥಮ ಪ್ರಯೋಗಕ್ಕೆ ಬಿಹಾರವನ್ನೆ ಆರಿಸಿಕೊಂಡದ್ದೇಕೆ ಎಂಬ ಪ್ರಶ್ನೆಯಂತು ಇದ್ದೇ ಇದೆ. ರಾಷ್ಟ್ರಪತಿಯನ್ನು ಮರೆಹೋಗುವ ಮುನ್ನ ಕೇಂದ್ರ ಮತ್ತು ರಾಜ್ಯಗಳ ನಡುವೆ ನಾನಾ ರೀತಿಯ ಸಂಧಾನ ಮಾರ್ಗಗಳನ್ನೂ, ಚರ್ಚೆಯನ್ನೂ, ಕೊನೆಗೆ ಎಚ್ಚರಿಕೆಯ ತಂತ್ರವನ್ನೂ ಪೂರೈಸಬೇಕಾಗುತ್ತದೆ. ಮುನ್ನೂರೈವತ್ತಾರನೆಯ ಅಸ್ತ್ರ ಕೊಟ್ಟಕೊನೆಯದಾಗಬೇಕು. ಇದು ಸರ್ಕಾರಿಯಾ ಆಯೋಗ ನೀಡಿರುವ ವಿವೇಕದ ಬುದ್ಧಿವಾದ.

ದುರ್ದೈವವೇನೆಂದರೆ, ಈ ಕೊನೆಯ ಅಸ್ತ್ರವನ್ನು ಅಂದಿನ ಸರ್ಕಾರಗಳು ಅಸಂಯಮದಿಂದ ಅವಿವೇಕದಿಂದ ಅಶ್ಲೀಲ ಆತುರದಿಂದ ಬಳಸಿದ್ದು ; ಬೆನ್ನುಮೂಳೆಯಿಲ್ಲದ ನರಸತ್ತ ರಾಷ್ಟ್ರಪತಿಗಳು ಸಚಿವ ಮಂಡಲಿಯ ಶಿಫಾರಸು ಬಂದ ಕೂಡಲೆ ತಲುವದಿ ತಡವರಿಸದೆ ರಬ್ಬರ್ ಸ್ಟಾಂಪ್ ಒತ್ತುತ್ತಿದ್ದದ್ದು. ೧೯೭೭–೧೯೮೦ರ ನಡುವಣ ಅವಧಿಯಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಾಗ, ಮತ್ತೆ ಪಡೆದಾಗ ಒಂಬತ್ತು ಸರ್ಕಾರಗಳನ್ನು ವಜಾ ಮಾಡಿದ್ದುಂಟು. ನೆಹ್ರೂ ಕಾಲದಲ್ಲಿಯೂ ಕೇರಳ ಸರ್ಕಾರವನ್ನು ರದ್ದುಗೊಳಿಸಲಿಲ್ಲವೆ ? ತುರ್ತು ಪರಿಸ್ಥಿತಿಯನ್ನೇರಲು ರಾಷ್ಟ್ರಪತಿಯ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಲಿಲ್ಲವೆ ? ಅಂಥ ಸಂದರ್ಭಗಳಲ್ಲೆಲ್ಲ ವಿರೋಧ ಪಕ್ಷಗಳು ಆಕಾಶ ಭೂಮಿ ಒಂದಾಗುವಷ್ಟರಮಟ್ಟಿಗೆ ಬೊಬ್ಬೆ ಹಾಕಿದ್ದುಂಟು ; ಶಾಸನ ಸಭೆಯ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಿದ್ದುಂಟು ; ಧರಣಿ ಮುಷ್ಕರ ಬಂಧ್‌ಗಳನ್ನು ನಡಸಿದ್ದುಂಟು ; ಹಿಂಸಾತ್ಮಕ ಚಳುವಳಿಯ ಲಾಂಗೂಲಕ್ಕೆ ಬೆಂಕಿ ಹಚ್ಚಿಬಿಟ್ಟದ್ದುಂಟು. ವಿರೋಧ ಪಕ್ಷಗಳು ಆಡಳಿತ ಪಕ್ಷಗಳಾಗಿ ಪರಿವರ್ತನೆಗೊಂಡಾಗಲೂ ಹಳೆಯ ತಂತ್ರವನ್ನೆ ಬಳಸುವುದಾದರೆ, ಒಮ್ಮೆ ಕಕ್ಕಿದ್ದನ್ನೆ ಮತ್ತೆ ತಿನ್ನುವುದಾದರೆ ನ್ಯಾಯನೀತಿಗಳಿಗೆ ಬೆಲೆ ಎಲ್ಲಿ ಬಂತು ? ಎಲ್ಲ ಪಕ್ಷಗಳ ಜಾಯಮಾನವೊಂದೆ ; ಅವುಗಳ ಏಕೈಕ ಗುರಿ ಅಧಿಕಾರ ಗ್ರಹಣ ಮತ್ತು ಅದರ ದುರುಪಯೋಗವೆಂಬುದು ಇದೀಗ ಸಾಬೀತಾಗದೆ. ◌ಃ

ಬುದ್ಧಿಜೀವಿಗಳ ನಿರೀಕ್ಷೆಯಂತೆ ರಾಷ್ಟ್ರಪತಿಗಳು ಸಚಿವ ಮಂಡಲಿಯ ಶಿಫಾರಸನ್ನು ವಾಪಸು ಮಾಡಿದ್ದಾರೆ. ಅದನ್ನು ಮರಳಿಸುವುದಾಗಿ ಹಾರಾಡಿದ ಮಂತ್ರಿಗಳು ಮೂಕರಾಗಿದ್ದಾರೆ. ಕಿಚಡಿ ಸರ್ಕಾರವಲ್ಲದೆ, ಸಂಸತ್‌ನಲ್ಲಿ ಭಾಜಪಕ್ಕೆ ಬಹುಮತವಿದ್ದಿದ್ದರೆ ಪರಿಸ್ಥಿತಿ ಬೇರೆಯಾಗುತ್ತಿತ್ತೆನ್ನುವುದು ನಿಸ್ಸಂದೇಹ. ಭಾಜಪಕ್ಕೀಗ ಮುಖಭಂಗವಾದರೂ, ವಾಜಪೇಯಿಯವರಿಗೆ ಕೆಲವು ಅನುಕೂಲಗಳು ಈ ಪ್ರಕರಣದಿಂದ ಪ್ರಾಪ್ತವಾಗಿವೆ. ಮಮತಾ ಲಲಿತಾ ಸಮತಾಗಳು ಬಾಲ ಮುದುರಿಕೊಂಡು ಬಿದ್ದಿರಬೇಕಾಗಿದೆ. ನಾರಾಯಣ್ ಪ್ರಧಾನಿಗಳಿಗೆ ಕರುಣಿಸಿದ ವರವಿದು. ವಾಜಪೇಯಿಯವರಿಗೀಗ ತಲೆನೋವು ತುಸು ಕಡಿಮೆಯಾದಂತಾಗಿದೆ; ರಾಷ್ಟ್ರಪತಿ ಸ್ಥಾನದ ಕೀರ್ತಿ ಹೆಚ್ಚಿದಂತಾಗಿದೆ.

ರಾಷ್ಟ್ರಪತಿಯವರ ವರಪ್ರಸಾದ ಲಾಭದಿಂದ ಉಲ್ಲಾಸಗೊಂಡ ಲಾಲೂ ಪ್ರಸಾದರು ರಾಬ್ಡಿ ದೇವಿ ಸಮೇತರಾಗಿ ನಾರಾಯಣ್‌ರಿಗೆ ವಂದನೆ ಸಲ್ಲಿಸುವ ಸಲುವಾಗಿ ಪಾಟ್ನಾದಿಂದ ಓಡೋಡಿ ದೆಹಲಿಗೆ ಬರುತ್ತಾರೆ. ಇಲ್ಲಿಯೂ ರಾಷ್ಟ್ರಪತಿಯವರು ತಮ್ಮ ವಿವೇಕವನ್ನು ಪ್ರದರ್ಶಿಸುತ್ತಾರೆ. ಒಂದೆರಡು ದಿನವಾದರೂ ಲಾಲೂ ರಾಬ್ಡಿಯರಿಗೆ ರಾಷ್ಟ್ರಪತಿಗಳ ಭೇಟಿಯ ಸುಯೋಗ ದೊರೆಯುವುದಿಲ್ಲ. ಬಂದ ದಾರಿಗೆ ಸುಂಕವಿಲ್ಲವೆಂದು, ದೆಹಲಿಯ ಜನ ಏಳುವ ಮುನ್ನವೇ ಯಾರ ಕಣ್ಣಿಗೂ ಬೀಳದೆ ರಾಜಧಾನಿಯಿಂದ ಓಡಿ ಹೋಗುತ್ತಾರೆ. ಮುಖ್ಯಮಂತ್ರಿಯೊಬ್ಬರೇ ಭೇಟಿಯನ್ನಪೇಕ್ಷಿಸಿದ್ದರೆ ದೊರಕುತ್ತಿತ್ತೋ ಏನೋ? ಎಂಥ ಸಂದರ್ಭದಲ್ಲಿಯೂ ಸತಿಪತಿಗಳು ಅಗಲಬಾರದು, ಸಬಲ ಪತಿ ಅಬಲೆಸತಿಗೆ ಯಾವಾಗಲೂ ಊರೆಯಾಗಿ ಉಸುರಾಗಿ ಊಳಿಗವಾಗಿ ಇದ್ದರೆ ಮಾತ್ರ ಇಬ್ಬರಿಗೂ ಮುಕ್ತಿಯೆನ್ನುವ ಸತ್ಯವೂ ಈ ಪ್ರಕರಣದಿಂದ ವ್ಯಕ್ತವಾಗುತ್ತದೆ.

ರಾಜಕೀಯ ಪಕ್ಷಗಳು ಅನುಕೂಲಸಿಂಧುಗಳಂತೆ, ಗಾಳಿ ದಿರುಗಗಳಂತೆ ಯಾವಾಗ ಯಾವ ಕಡೆ ಹೊರಳುತ್ತಾರೆಯೊ ತಿಳಿಯದು. ವೈರ ವೈಷಮ್ಯ ಮಾತ್ಸರ್ಯ ಪೂರ್ವಗ್ರಹಗಳಿಂದ ಅವು ಮುಕ್ತವಾಗಿಲ್ಲ. ಮುನ್ನೂರೈವತ್ತಾರನೆಯ ಅಸ್ತ್ರ ರಾಜ್ಯಾಂಗದಲ್ಲಿರಬೇಕೇ ಬೇಡವೇ ಎಂಬ ಬಗ್ಗೆ ಪುನರಾಲೋಚನೆ ಅನಾವಶ್ಯಕ. ರಾಜ್ಯಗಳಿಗೆ ಸ್ವಾಯತ್ತತೆ ಕೊಡಬೇಕು, ಇಡೀ ರಾಷ್ಟ್ರಕ್ಕೆ ಅನ್ವಯವಾಗುವಂತೆ ಲೋಕಪಾಲ ಹುದ್ದೆಯನ್ನು ಸೃಷ್ಟಿಸಬೇಕು, ಸಿಬಿಐ ಸರ್ಕಾರ ಮುಕ್ತ ಸ್ವಾತಂತ್ರ್ಯ ಸಂಸ್ಥೆಯಾಗಬೇಕು, ದಾರಿ ತಪ್ಪಿದ ಲೋಕಪಾಲ ಮತ್ತು ಸಿಬಿಐ ಅಧಿಕಾರಿಗಳನ್ನು ಸಂಸತ್ ಸದನ ಛೀಮಾರಿಮಾಡುವಂತಿರಬೇಕು, ೩೫೬ನೆಯ ಸೂತ್ರ ಖಂಡಿತವಾಗಿಯೂ ಉಳಿಯಬೇಕು; ಆದರೆ ಅದನ್ನು ಅಪರೂಪವಾಗಿ ಬಳಸಬೇಕು. ರಾಷ್ಟ್ರಪತಿ ಆಡಳಿತ ಆರು ತಿಂಗಳಿಗಿಂತ ಹೆಚ್ಚಾಗಿರಬಾರದು. ಬಿಹಾರ ಹಗರಣಕ್ಕೆ ಸಂಬಂಧಿಸಿದ ರಾಷ್ಟ್ರಪತಿಯ ಪ್ರಕ್ರಿಯೆ ರಾಷ್ಟ್ರೀಯ ಚರ್ಚೆಯ ವಸ್ತುವಾಗಬಾರದು. ವಾಜಪೇಯಿಯವರಂಥ ಸಮತೋಲನ ದೃಷ್ಟಿಯ, ಸಂಯಮಶೀಲರು ಅತಿರೇಕಕ್ಕವಕಾಶ ಕೊಡಬಾರದೆಂದು ನಂಬಬಹುದಾಗಿದೆ.

ಪರಮಾಣು ಪ್ರಯೋಗ—ಭಯೋತ್ಪಾದನೆಯ ಬಸುರಲ್ಲಿ

ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಪ್ರಪಂಚ ಸಂಸ್ಥೆಯ ಐವತ್ತಮೂರನೆಯ ಅಧಿವೇಶನವನ್ನುದ್ದೇಶಿಸಿ ಮಾತಾಡುತ್ತ, ದ್ವಿತೀಯ ಪೋಖ್ರಾನ್ ಪ್ರಯೋಗವನ್ನು ಸಮರ್ಥಿಸಿಕೊಂಡರಲ್ಲದೆ, ಮುಂದಿನ ಸೆಪ್ಟೆಂಬರ್ ಒಳಗಾಗಿ ಸೀಟಿಬೀಟಿಗೆ ಸಹಿ ಹಾಕುವುದಾಗಿ ಘೋಷಿಸಿದ್ದಾರೆ. ಸಹಿ ಹಾಕ ಹಾಕಬೇಕಾದರೆ ಕೆಲವು ಶರತ್ತುಗಳನ್ನು ಮೊದಲೇ ಪೂರೈಸಬೇಕಾಗುತ್ತದೆಂಬುವನ್ನೂ ಸ್ಪಷ್ಟಪಡಿಸಿದ್ದಾರೆ. ಅವರು ಅಲ್ಲಿ ಘೋಷಿಸಿದ ನಾಲ್ಕು ಪ್ರಮುಖ ಸೂತ್ರಗಳಿವು: ೧. ಇಂಡಿಯಾ ಪರಮಾಣು ದೇಶವೆಂಬುದನ್ನು ಮಾನ್ಯ ಮಾಡಬೇಕು. ೨. ಪರಮಾಣು ಪ್ರಯೋಗ ನಿಗ್ರಹ ಸಂಕಲ್ಪ. ೩. ಜಾಗತಿಕ ಪರಮಾಣು ನಿಯಂತ್ರಣ ಕಾರ್ಯಕ್ರಮದಲ್ಲಿ ಸಹಕಾರ ನೀಡುವುದು. ೪. ಸಂಪೂರ್ಣ ಪರಮಾಣು ನಿಶ್ಶಸ್ತ್ರೀಕರಣೋದ್ದೇಶ ಸಾಧನೆಯನ್ನು ಮುಂದುವರಿಸುವುದು. ಪರಮಾಣು ರಾಷ್ಟ್ರಗಳು ಈ ಶರತ್ತನ್ನೊಪ್ಪಿಕೊಳ್ಳುವುದಾದರೆ ಸಹೀಕರಣ ಅಸಾಧ್ಯವಾಗಲಾರದು.

ಇಂಡಿಯಾ ಸೀಟಿಬೀಟಿಗೆ ಸಹಿ ಹಾಕುವಲ್ಲಿ ಯಾವುದೇ ಸಮಸ್ಯೆಯಿಲ್ಲವೆಂದು ರಕ್ಷಣಾ ಸಚಿವಾಲಯದ ವೈಜ್ಞಾನಿಕ ಸಲಹೆಗಾರರಾದ ಡಾ|| ಅಬ್ದುಲ್ ಕಲಂ ಕೊಟ್ಟಿರುವ ಹೇಳಿಕೆಯಿಂದ ಇಂಡಿಯಾದ ಪರಮಾಣು ಸಾಧನೆಯ ಬಗ್ಗೆ ಅವರಿಗೆ ಸಂಪೂರ್ಣ ಆತ್ಮಪ್ರತ್ಯಯವಿದೆಯೆಂದು ಊಹಿಸಬಹುದು. ಪರಮಾಣು ಆಯುಧೀಕರಣದ ಹಾದಿಯಲ್ಲಿದ್ದ ವಿಘ್ನಗಳು ಹಾಗೂ ಪಾರಿಭಾಷಿಕ ಸಮಸ್ಯೆಗಳು ನಿವಾರಣೆಯಾಗಿರುವುದರಿಂದ, ಯಾವುದೇ ದೇಶದ ಬೆದರಿಕೆಗೆ ಜಗ್ಗಬೇಕಾಗಿಲ್ಲವೆಂಬುದು ಅವರ ಅಭಿಪ್ರಾಯವಿದ್ದಂತೆ ಕಾಣುತ್ತದೆ. ಆದ್ದರಿಂದಲೇ ಏಕಪಕ್ಷೀಯ ಪರಮಾಣು ಪ್ರಯೋಗ ವಿಲಂಬನ ನೀತಿಯನ್ನು ಘೋಷಿಸಿದ ಪ್ರಥಮ ರಾಷ್ಟ್ರಗಳಲ್ಲಿ ಇಂಡಿಯಾ ಒಂದೆಂದು ಅವರು ಹೆಮ್ಮೆಯಿಂದ ಹೇಳಿದ್ದು.

ನ್ಯೂಯಾರ್ಕ್‌ನಲ್ಲಿ ನಡೆದ ಭಾರತೀಯ ಸಂಜಾತರ ಸಭೆಯಲ್ಲಿ ವಾಜಪೇಯಿಯವರು ಪೋಖ್ರಾನ್ ವಿಜಯವನ್ನು ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತಾರೆ. ಸುತ್ತಮುತ್ತಣ ಹಾಗೂ ನೆರೆಹೊರೆಯ ರಾಷ್ಟ್ರಗಳು ಇಂಡಿಯಾದ ಮೇಲೆ ಕೆಂಡಕಾರುತ್ತಿರುವಾಗ, ಕೆಲವು ರಾಷ್ಟ್ರಗಳು ಪರಮಾಣು ಬಾಂಬುಗಳನ್ನು ಶೇಖರಿಸಿಕೊಂಡಿರುವಾಗ, ದೂರವಾಹಿನಿ ಕ್ಷಿಪಣಿಗಳ ಪ್ರಯೋಗ ನಡೆಸಿರುವಾಗ, ಸಂಪೂರ್ಣ ನಿಶ್ಶಸ್ತ್ರೀಕರಣಕ್ಕೆ ಪ್ರಬಲರಾಷ್ಟ್ರಗಳು ಸಿದ್ಧವಾಗಿಲ್ಲದಿರುವಾಗ, ಆತ್ಮರಕ್ಷಣೆಗಾಗಿ ಶಾಂತಿ ಕಾರ್ಯಗಳಿಗಾಗಿ ಇಂಡಿಯಾ ಪರಮಾಣು ಪ್ರಯೋಗ ನಡೆಸಿದ್ದು ತಪ್ಪೆ ಎಂದು ಪ್ರಧಾನಿಯವರು ಪ್ರಶ್ನಿಸಿದ್ದು ಸರಿಯೇ ಸರಿ. ಹಿರೋಷಿಮಾ ನಾಗಸಾಕಿಗಳ ಮೇಲೆ ರಾಷ್ಟ್ರವೊಂದು ಬಾಂಬು ಸುರಿಸಿದ್ದು ಸತ್ಯವಾದರೂ, ಅದರ ಔಚಿತ್ಯವನ್ನು ಪ್ರಸಕ್ತ ಪರಿಸ್ಥಿತಿಯಲ್ಲಿ ಪ್ರಸ್ತಾಪಿಸಬಾರದಿತ್ತೆನಿಸುತ್ತದೆ.

ಜಗತ್ತಿಂದು ಪರಮಾಣು ಬಾಂಬುಗಳ ರಾಶಿಯ ಮೇಲೆ ಕುಳಿತಿದೆ. ಯಾವ ಕ್ಷಣದಲ್ಲಿ ಏನಾಗುತ್ತದೆಯೊ ಹೇಳಲಾಗದು. ಬಾಂಬುಗಳ, ಆರ್ಥಿಕ ಉದಾರೀಕರಣದ ಹಾಗೂ ಬೌದ್ಧಿಕ ಸ್ವಾಮ್ಯದ ನೆಪದಲ್ಲಿ ನೂತನ ವಿಧಾನದ ವಸಾಹತು ಷಾಹಿ ಚಾಲ್ತಿಗೆ ಬರುತ್ತಿದೆ. ಅರಿತೋ ಅರಿಯದೆಯೋ,ಅಂಜಿಕೆಯಿಂದಲೋ,ಅಸಹಾಯಕತೆಯಿಂದಲೋ ಹಲವು ರಾಷ್ಟ್ರಗಳು ಈ ವಸಾಹತು ಷಾಹಿಯ ನೊಗಕ್ಕೆ ಹೆಗಲು ಕೊಡಲು ಸಿದ್ಧ ವಾಗಿವೆ.ಸ್ವಘೋಷಿತ ವಿಶೇಷ ಸಾರ್ವಭೌಮ ರಾಷ್ಟ್ರಗಳಾದ ಅಮೆರಿಕೆ ಚೀನಾ ರಷ್ಯಾ ಫ್ರಾನ್ಸ್ ಬ್ರಿಟನ್‌ಗಳು ಜಗತ್ತಿನ ಉಳಿದ ರಾಷ್ಟ್ರಗಳನ್ನು ತಮ್ಮ ಅಂಕೆಯಲ್ಲಿ ಅದುಮಿಟ್ಟು ಕೊಳ್ಳಲು ಪ್ರಯತ್ನಿಸುತ್ತಿವೆ. ಸೋವಿಯಟ್ ಯೂನಿಯನ್ ಒಡೆದುಹೋದ ನಂತರ ಮೂಗುದಾರ ಹಾಕಿ ಗೂಟಕ್ಕೆ ಕಟ್ಟದ ಹೋರಿಯಂತೆ ನಿಂತಲ್ಲೆ ಗುಟುರು ಹಾಕುತ್ತಿದೆ; ವಸಾಹತುಗಳನ್ನು ಕಳೆದುಕೊಂಡ ಬ್ರಿಟನ್ ಹಿಡಮಾಡಿದ ಗೂಳಿಯಂತೆ ಹಿಂದಿನ ಭೋಗ ವೈಭವವನ್ನು ನೆನೆಸಿಕೊಂಡು ಅಮೆರಿಕೆಯ ಬಾಲಂಗೋಚಿಯಾಗಿ ತೂರಾಡುತ್ತಿದೆ ; ಫ್ರಾನ್ಸ್ ಅಲ್ಲೂ ಇಲ್ಲ ಇಲ್ಲೂ ಇಲ್ಲ ಎನ್ನುವಂತೆ, ಅಡ್ಡ ಗೋಡೆಯ ದೀಪದಂತೆ ಅಲು ಗಾಡುತ್ತಿದೆ. ತನ್ನ ಹಿಡಿತಕ್ಕೆ ಒಳಗಾಗಿಲ್ಲವೆಂಬ ಅಹಂಭಾವದಿಂದ, ಒಂದು ಕಡೆ ರಷ್ಯಾಕ್ಕೆ, ಮತ್ತೊಂದು ಕಡೆ ಭಾರತಕ್ಕೆ ಉರುಳಾಗಲೆಂದು, ಏಷ್ಯಾದ ಪ್ರಬಲ ರಾಷ್ಟ್ರವೆಂದು ತಿಳಿದು ಅಮೆರಿಕೆ ಚೀನಾ ಸ್ನೇಹ ಬೆಳೆಸಲು ಹವಣಿಸುತ್ತಿದೆ. ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಮಹಾ ಶತ್ರುವಾಗಿದ್ದ ಜಪಾನ್‌ನೊಡನೆ ಇಂದು ಅಮೆರಿಕೆ ಸರಸವಾಡುತ್ತಿದೆ. ಬೆಳಕು ಗಾಳಿಗಳಿರುವ ಕಡೆಗೆ ಗಿಡಗಳು ಬಾಗುವಂತೆ ಹಣ ಆಯುಧಗಳಿರುವ ಕಡೆಗೆ ಅಮೆರಿಕೆ ವಾಲುತ್ತದೆ. ಬೇಶರತ್ತಾಗಿ ತನ್ನ ಯಾಜಮಾನ್ಯವನ್ನು ಯಾವ ದೇಶ ಒಪ್ಪಿ ಕೊಳ್ಳುತ್ತದೆಯೊ, ಯಾವ ದೇಶ ತನಗೆ ಕೈಗೊಂಬೆಯಾಗಲು ಸಿದ್ಧವೊ, ತನ್ನ ಸೇನಾ ನೆಲೆಗಳಿಗೆ ಯಾವ ದೇಶ ಜಾಗ ಕೊಡುತ್ತದೆಯೋ ಆ ದೇಶ ಅಮೆರಿಕೆಗೆ ಅಚ್ಚುಮೆಚ್ಚು. ಆತ್ಮರಕ್ಷಣೆಗಾಗಿ, ಆತ್ಮಗೌರವಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಟ ನಡಸುವ ದೇಶ ವನ್ನದು ಸಂದೇಹ ದೃಷ್ಟಿಯಿಂದ ನೋಡುತ್ತದೆ. ತನ್ನ ಅಪೇಕ್ಷೆಯಂತೆ ನಡೆಯಬೇಕು, ತಾನು ಹಾಕಿದ ಗೆರೆಯನ್ನು ದಾಟಬಾರದು ಎಂಬುದೇ ಅದರ ಸಂಕಲ್ಪ. ತಾನೊಂದು ಪೋಲೀಸ್ ರಾಷ್ಟ್ರವೆಂದು ತಿಳಿದು, ತನಗಾಗದ ರಾಷ್ಟ್ರಗಳಲ್ಲಿ ತಪ್ಪು ಹುಡುಕುವುದೇ ತನ್ನ ಕರ್ತವ್ಯವೆಂದು ಆ ದೇಶ ಭಾವಿಸಿಕೊಂಡಂತಿದೆ. ಜಗತ್ತಿನ ಯಾವ ಮೂಲೆಯಲ್ಲಿ ಕಲಹದ ಸೂಚನೆ ಕಂಡರೂ ಅಲ್ಲಿ ಅದು ಕೂಡಲೇ ತಲೆ ಹಾಕುತ್ತದೆ. ಅದಕ್ಕಾಗಿ ಸರ್ವಶಸ್ತ್ರ ಸಜ್ಜಿತವಾದ ಒಂದು ಲಕ್ಷ ಸೈನ್ಯವನ್ನದು ಯೂರೋಪಿನಲ್ಲಿಯೂ, ಮತ್ತೊಂದು ಲಕ್ಷ ಸೈನ್ಯವನ್ನು ಏಷಿಯಾದಲ್ಲಿಯೂ, ಇಪ್ಪತ್ತು ಸಹಸ್ರ ಸೈನ್ಯವನ್ನು ಪರ್ಷಿಯಾ ಕೊಲ್ಲಿಯಲ್ಲಿಯೂ ಜಮಾಯಿಸಿದೆ. ಶಾಂತಿ ಸ್ಥಾಪನೆಯೆ ತನ್ನ ಸೇನಾ ನೆಲೆಗಳ ಉದ್ದೇಶ ವೆಂದು ಅದು ಘೋಷಿಸುತ್ತಿದೆ. ಸೇನೆಗೂ ಶಾಂತಿ ಸ್ಥಾಪನೆಗೂ ಎಣ್ಣೆ ಸೀಗೆಗಳ ನಂಟಲ್ಲವೆ ?

ನಿಷ್ಪಕ್ಷಪಾತವಾಗಿ, ನೀತಿನಿಷ್ಠೆಯಿಂದ, ಪೂರ್ವಗ್ರಹ ಮುಕ್ತವಾಗಿ ಎರಡು ಪರಸ್ಪರ ವಿರುದ್ಧ ಪಕ್ಷಗಳ ನಡುವೆ ಸಂಧಾನ ನಡಸುವುದಾದರೆ ಯಾರೂ ಬೇಡವೆನ್ನ ಲಾರರು. ಪಾಕಿಸ್ತಾನಕ್ಕೆ ಮಾರಕಾಸ್ತ್ರಗಳನ್ನೊದಗಿಸುತ್ತಿರುವುದೂ, ತಂತ್ರಜ್ಞಾನವನ್ನು ಪೂರೈಸುತ್ತಿರುವುದೂ ಚೀನಾ ಎಂಬ ಸಂಗತಿ ಇಡೀ ಜಗತ್ತಿಗೆ ಗೊತ್ತು. ಇತ್ತೀಚೆಗೆ ತಾನೆ ಅದು ಎಂ–೧೧ ಕ್ಷಿಪಣಿಗಳನ್ನು ಪಾಕಿಸ್ತಾನಕ್ಕೆ ಮತ್ತು ಸೌದಿ ಅರೇಬಿಯಾಕ್ಕೆ ರವಾನಿಸಿತೆಂದು ೩–೧೦–೯೮ನೆಯ ದಿನಾಂಕದ ಹಿಂದೂ ಪತ್ರಿಕೆಯಲ್ಲಿ ವರದಿಯಾಗಿದೆ. ವಿನಾಶಕಾರೀ ಶಸ್ತ್ರಾಸ್ತ್ರಗಳನ್ನು ಚೀನಾ ನಾನಾ ದೇಶಗಳಿಗೆ ಮಾರಾಟ ಮಾಡುತ್ತಿರುವಂತೆ ಕಾಣುತ್ತದೆ. ಈ ಬಗ್ಗೆ ಅಮೆರಿಕೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದಂತೆ ಕಾಣುವುದಿಲ್ಲ. ಸೋವಿಯಟ್‌ನಿಂದ ಸಿಡಿದು ಸ್ವತಂತ್ರವಾದ ರಾಷ್ಟ್ರಗಳಲ್ಲಿ ಶೇಖರಗೊಂಡಿದ್ದ ಪರಮಾಣು ಬಾಂಬುಗಳು ಕಳ್ಳತನದ ಮೂಲಕ ಬೇರೆ ರಾಷ್ಟ್ರಗಳಿಗೆ ಸಾಗುತ್ತಿಲ್ಲವೆಂಬುದಕ್ಕೆ ಖಾತರಿಯೇನಿದೆ? ಇಸ್ರೇಲ್ ಇರಾಖ್ ಇರಾನ್‌ಗಳಲ್ಲಿ ಮಾರಕಾಸ್ತ್ರಗಳ ತಯಾರಿಕೆ ನಡೆಯುತ್ತಿಲ್ಲವೆ? ಉತ್ತರ ಕೊರಿಯಾದ ಮಂಜು ತೆರೆಯ ಹಿಂದುಗಡೆ ಎಂಥೆಂಥ ಕೂರಲಗು ಮಸೆಯುತ್ತಿವೆಯೆಂಬುದು ಯಾರಿಗೆ ಗೊತ್ತು? ತನ್ನಲ್ಲಿರುವ ಶಸ ಸಂಗ್ರಹವನ್ನು ನಾಶಪಡಿಸಿ, ಪ್ರಯೋಗಗಳನ್ನು ನಿಲ್ಲಿಸಿ, ಚೀನಾ ಪಾಕಿಸ್ತಾನಗಳನ್ನು ಭಾರತದ ಮೇಲೆ ಛೂ ಬಿಡದಿದ್ದರೆ, ಪೋಖ್ರಾನ್ ಪ್ರಯೋಗಗಳನ್ನು ನಿಲ್ಲಿಸುವಂತೆ ಒತ್ತಡ ಹೇರುವ ನೈತಿಕ ಹಕ್ಕು ಅಮೆರಿಕಕ್ಕೆ ಪ್ರಾಪ್ತವಾಗುತ್ತದೆ.

ಜಗತ್ತಿನಲ್ಲಿ ಯಾವ ರಾಷ್ಟ್ರಕ್ಕೂ ಇಲ್ಲದ ಪ್ರಬಲ ಆರ್ಥಿಕ ಮತ್ತು ಸೈನಿಕಶಕ್ತಿಯನ್ನು ತಾನು ಹೊಂದಿರುವುದಾಗಿ ಅಮೆರಿಕ ಮೇಲಿಂದ ಮೇಲೆ ತನ್ನ ಬೆನ್ನು ತಟ್ಟಿಕೊಳ್ಳುತ್ತಿರುವುದು ವಾಸ್ತವ ಸತ್ಯವೆಂಬುದು ದಿಟ. ಆದರೆ ವಿಯಟ್‌ನಾಮ್‌ನಲ್ಲಿ ಅದಕ್ಕೆ ಮುಖಭಂಗವಾಯಿತಲ್ಲವೆ? ಎಂಥ ಯುದ್ಧಭೂಮಿಯಲ್ಲಾದರೂ ವಿಜಯ ಸಾಧಿಸಬಲ್ಲೆವೆಂದು ಸಾರುವ ಅಮೆರಿಕೆಯ ನಾಯಕರಿಗೆ ವಿಯಟ್ನಾಂ ನೆನಪಿಲ್ಲವೆ? ಜೇರೆ ರಾಷ್ಟ್ರಗಳ ಬೆಂಬಲವಿರದಿದ್ದರೆ ಇರಾಖ್‌ನಲ್ಲಿಯೂ ಅದರ ಬೇಳೆ ಬೇಯುತ್ತಿರಲಿಲ್ಲವೆಂದೇ ಹೇಳಬಹುದು. ಅಹಂಕಾರ ವ್ಯಷ್ಟಿ ಸಮಷ್ಟಿಗಳೆರಡಕ್ಕೂ ಸಲ್ಲದು. ಒಂದಲ್ಲ ಒಂದು ದಿನ ಅದಕ್ಕೆ ಬಲಿಯಾಗಲೇಬೇಕಾಗುತ್ತದೆನ್ನುವುದಕ್ಕೆ ಇತಿಹಾಸದಲ್ಲಿ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ತಲೆ ಬಲವಾಗಿದೆಯೆಂದು ಬಂಡೆಗೆ ಢಿಕ್ಕಿ ಹೊಡೆಯಬಾರದು. ಪ್ರತಿಯೊಂದು ದೇಶದ ಚರಿತ್ರೆ ಜಾಯಮಾನ ಸಂಸ್ಕೃತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವರ್ತಿಸಬೇಕಾದ್ದು ಜಾಣತನ. ದುರಾಕ್ರಮಣ ದುರ್ವಿದ್ಯೆಯ ಕೀಟ ಎಂದೂ ಭಾರತದ ತಲೆಯನ್ನು ಹೊಕ್ಕಿಲ್ಲ. ಎಂತಿದ್ದರೂ ಅದು ಶಾಂತಿ ಅಹಿಂಸೆಯನ್ನು ಸದಾ ಭಜಿಸುತ್ತಿದೆ ಎಂದು ಅದರ ಮೇಲೆ ಹೌಹಾರುವುದು ಭ್ರಷ್ಟಾಚಾರವಾಗುತ್ತದೆ.

ಸದ್ಯದಲ್ಲಿ ಆದ್ಯಗಮನ ಹರಿಸಬೇಕಾದ ಭೀಕರ ಜಾಗತಿಕ ಸಮಸ್ಯೆಯೆಂದರೆ ಭಯೋತ್ಪಾದಕತೆ. ಲಾಕ್‌ಬೀ (೧೯೮೮), ಕಾನಿಷ್ಕ (೧೯೮೫), ನ್ಯೂಯಾರ್ಕ್ ನಗರದ ಜಾಗತಿಕ ವಾಣಿಜ್ಯ ಕೇಂದ್ರ (೧೯೯೩), ಮತ್ತು ಟೋಕಿಯೋ ಉಪಮಾರ್ಗ

ಬಾಂಬೀಕರಣ (೧೯೯೩)–ಇವೇ ಮೊದಲಾದ ಘೋರಕೃತ್ಯಗಳು ಜನರ ನೆನಪಿನಿಂದ ಮಾಸಿಹೋಗಿಲ್ಲ. ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನಗಳಲ್ಲಿ ತಯಾರಾದ ಉಗ್ರಗಾಮಿಗಳು ವರ್ಷದಲ್ಲಿ ಆರು ತಿಂಗಳಾದರೂ ಕಾಶ್ಮೀರದಲ್ಲಿ ಮಾರಣಹೋಮ ನಡಸುತ್ತಿರುವರಲ್ಲವೆ? ಹೀಗೆ ಲಕ್ಷಾಂತರ ಮಂದಿ ಸತ್ತಿರುವಾಗ, ನಿನ್ನೆ ಟಾಂಜೇನಿಯಾ ಮತ್ತು ಕೆನ್ಯಾದಲ್ಲಿ ಬೆರಳೆಣಿಕೆಯ ಅಮೆರಿಕದ ಪ್ರಜೆಗಳು ಉಗ್ರಗಾಮಿಗಳ ಕ್ರೂರ ಕೃತ್ಯಕ್ಕೆ ಬಲಿಯಾದರೆಂಬ ನೆಪದ ಮೇಲೆ ಅಮೆರಿಕೆ ಆಫ್ಘಾನಿಸ್ತಾನದ ಮೇಲೆ ಕ್ಷಿಪಣಿ ಧಾಳಿ ನಡಸಿ ನೂರಾರು ಮಂದಿ ಮುಗ್ಧರನ್ನು ಕೊಲೆಗೈಯಲಿಲ್ಲವೆ? ಜಗತ್ತಿನ ಕ್ಷೇಮದ ಜವಾಬ್ದಾರಿಯನ್ನು ಹೊತ್ತಿರುವ ಆ ದೇಶ ಕಾಶ್ಮೀರದ ಮೇಲಣ ಭಯೋತ್ಪಾದಕರ ಧಾಳಿಯನ್ನೇಕೆ ಪ್ರಶ್ನಿಸುತ್ತಿಲ್ಲ? ರಕ್ತಪಿಪಾಸುಗಳ ಬಳಿ ಕ್ರೂರಾಸ್ತ್ರಗಳಿವೆ ಎಂಬ ಮಾತು ಯಾರಿಗೆ ಅನ್ವಯಿಸುತ್ತವೆ? ಕ್ರೂರಾಸ್ತ್ರಗಳಿರುವವರೆಲ್ಲ ಕ್ರೂರಿಗಳೇ! ರಾಸಾಯನಿಕ ಮತ್ತು ಜೈವಿಕಾಸ್ತ್ರಗಳು ಸುಲಭವಾಗಿ ಉಗ್ರಗಾಮಿಗಳ ಕೈಗೆ ಸಿಗುತ್ತವೆನ್ನುವುದು ನಿಜ. ಅವು ಸಿಗಬೇಕಾದರೆ ಹಿನ್ನೆಲೆಯಲ್ಲಿ ಕೆಲವು ಸರ್ಕಾರಗಳಿವೆಯೆನ್ನುವುದು ಅಮೆರಿಕೆಗೆ ಗೊತ್ತಿಲ್ಲವೆ? ಇಂಡಿಯಾದಲ್ಲೇನಾದರೂ ಉಗ್ರಗಾಮಿಗಳ ತರಬೇತಿ ನಡೆಯುತ್ತಿದೆಯೆ? ನಡೆದಿದ್ದರೆ ಇಲ್ಲಿಯ ಅಲ್ಪಸಂಖ್ಯಾತರು ತೊಂದರೆಗೊಳಗಾಗುತ್ತಿರಲಿಲ್ಲವೆ? ಇಲ್ಲಿಯ ಅಲ್ಪಸಂಖ್ಯಾತರು ಉಗ್ರಗಾಮಿಗಳ ವಿರುದ್ಧ ಖಂಡನೆಯ ಖಡ್ಗವೆತ್ತುತ್ತಾರೆಯೆ? ಇಂಡಿಯಾದ ಕೆಲವು ನೆರೆಹೊರೆಯ ರಾಷ್ಟ್ರಗಳಲ್ಲಿ ದಿನನಿತ್ಯ ಮಾನವನ ಹಕ್ಕುಗಳ ಉಲ್ಲಂಘನೆ ನಡೆಯುತ್ತಿಲ್ಲವೆ? ಯಾರಾದರೂ ಅದನ್ನು ವಿಚಾರಿಸಿ, ಸೂಕ್ತ ಕ್ರಮ ಕೈಗೊಳ್ಳುವರೆ? ಈಗಿನ ಪ್ರಬಲ ರಾಷ್ಟ್ರಗಳು ಕುರಿ ಹುಲ್ಲಿಗಳ ಮಂದೆಯನ್ನು ಕಾಯುವ ತೋಳ ಸೀಳ್ನಾಯಿಗಳಂತಿವೆಯಲ್ಲವೆ? ಇಂಡಿಯಾ ಬಹುವೈವಿಧ್ಯ ಪ್ರಧಾನವಾದ ರಾಷ್ಟ್ರವಾಗಿ, ಒಂದು ದೇವರು, ಒಂದು ಮತ, ಒಂದು ಜಾತಿ ಇಲ್ಲದ್ದರಿಂದ ಏಕತೆ ಗಗನ ಕುಸುಮವಾಗಿದ್ದು, ಸರ್ವಾ-ಕರ್ಷಕ ಏಕನಾಯಕತ್ವವಿಲ್ಲದಿರುವುದರಿಂದ, ಸುದೂರದ ಸನ್ನಿಕಟದ ರಾಷ್ಟ್ರಗಳು ಇದನ್ನು ಹೆದರಿಸುತ್ತಿವೆ. ತತ್ತ್ವಗಳನ್ನು ದೇಶಕ್ಷೇಮವನ್ನು ಬಲಿಗೊಟ್ಟಾದರೂ ಮಹಾ ಚುನಾವಣೆಗಳಲ್ಲಿ ಜಯ ಸಾಧಿಸಿ, ಅಧಿಕಾರವನ್ನು ಕಬಳಿಸಬೇಕೆಂಬುದೇ ಎಲ್ಲ ರಾಜಕೀಯ ಪಕ್ಷಗಳ ಗುರಿಯಾಗಿದೆ. ರಾಷ್ಟ್ರದ ಎಲ್ಲ ಜನ ಒಂದಾಗಿ ಶತ್ರು ರಾಷ್ಟ್ರಗಳನು ವಿರೋಧಿಸಿದ್ದಾದರೆ, ಉಗ್ರಗಾಮಿಗಳಿಗೆ ಸ್ಥಳೀಯಜನ ಬೆಂಬಲ ನೀಡಲಿಲ್ಲವಾದರೆ, ಹೊರಗಿನ ಜನ ಬಾಯಿ ಮುಚ್ಚಿಕೊಂಡಿದ್ದಾರು. ಬಿನ್ ಲೇಡನ್‌ನ ಕೆಂಗಣ್ಣು ಕಾಶ್ಮೀರದ ಕಡೆಗೆ ಬಾಗುತ್ತಿದೆಯೆಂದು ಪತ್ರಿಕೆಗಳು ಹೇಳುತ್ತಿವೆ. ದೇಶದ ಅಭದ್ರತೆಗೆ ಅಂತಶ್ಶತ್ರುಗಳು ಪ್ರಮುಖ ಕಾರಣವೆ ಹೊರತು ಬಾಹ್ಯಶತ್ರುಗಳಲ್ಲ. ಸರ್ಕಾರವೊಂದೇ ಬಾಹ್ಯ ಶತ್ರುಗಳನ್ನೆದುರಿಸಲಾರದು. ಅದು ಜನತೆಯ ಸಹಕಾರವನ್ನು ಪಡೆಯಬೇಕಾದ್ದು ಅತ್ಯವಶ್ಯ. ಪಕ್ಷಾತೀತವಾದ, ಸಾಧ್ಯವಾದರೆ ಯಾವ ಪಕ್ಷಕ್ಕೂ ಸೇರಿರದ ಪ್ರಬಲ ವ್ಯಕ್ತಿತ್ವವುಳ್ಳ ಗಣ್ಯರನ್ನು ಜಮಾಯಿಸಿ, ರಾಷ್ಟ್ರೀಯ ಭದ್ರತಾ ಸಮಿತಿಗಳನ್ನು ಪ್ರತಿ ರಾಜ್ಯದಲ್ಲಿಯೂ ರಚಿಸಬೇಕು; ಜನಾಭಿಪ್ರಾಯವನ್ನು ರೂಪಿಸುವಲ್ಲಿ, ಏಕತೆಯನ್ನು

ಸಾಧಿಸುವಲ್ಲಿ, ಭದ್ರತಾ ಕೋಟೆಯನ್ನು ನಿರ್ಮಿಸುವಲ್ಲಿ, ಭಯೋತ್ಪಾದಕತೆಯನ್ನು ಎದುರಿಸುವಲ್ಲಿ ಅಂಥ ಸಮಿತಿಗಳಿಂದ ಅಪಾರ ಸಹಾಯ ದೊರಕುವುದರಲ್ಲಿ ಸಂದೇಹವಿಲ್ಲ.

ಒಂದು ಕಡೆ ಇಸ್ಲಾಮೀಕರಣ, ಮತ್ತೊಂದು ಕಡೆ ತಾಲಿಬಾನ್, ಮಗುದೊಂದು ಕಡೆ ಸರ್ವಾಧಿಕಾರ, ಇನ್ನೊಂದು ಕಡೆ ತುಸುದೂರದಲ್ಲಿ ಅಮೆರಿಕೆಯ ಬಾಲಂಗೋಚಿ— ಈ ನಡುವೆ ಭಾರತ ಬಾಳಬೇಕಾಗಿದೆ, ಬೆಳೆಯಬೇಕಾಗಿದೆ. ಹೇಗೆಂಬುದನ್ನು ಭಾರತೀಯರು ಒಗ್ಗಟ್ಟಾಗಿ ಆಲೋಚಿಸಬೇಕಾಗಿದೆ. ಸದಾ ಜಾಗ್ರತಿ ತ್ಯಾಗ ಮತ್ತು ದುಡಿಮೆಗಳೇ ಜಯಕ್ಕೆ ತಳಹದಿಯೆನ್ನುವುದನ್ನವರು ಮರೆಯಬಾರದು.

* * * * *

[ಅಭಿನಂದನೆ : ನೊಬೆಲ್ ಪಾರಿತೋಷಕ ವಿಜಯದ ಮೂಲಕ ಭಾರತಕ್ಕೆ ಅವಿಸ್ಮರಣೀಯ ಕೀರ್ತಿಯನ್ನು ತಂದುಕೊಟ್ಟ ಅರ್ಥಶಾಸ್ತ್ರಜ್ಞ ಡಾ॥ ಅಮರ್ತ್ಯಸೆನ್ ಅವರನ್ನು ಪುಸ್ತಕ ಪ್ರಪಂಚ ಅಭಿನಂದಿಸುತ್ತದೆ. ಮುಂದಿನ ಸಂಚಿಕೆಯಲ್ಲಿ ವಿವರಗಳನ್ನು ಪ್ರಕಟಿಸಲಾಗುತ್ತದೆ.]

ದೇಜಗೌ

ಭಾರತೀಯ ಪರಂಪರೆಯನ್ನು ಪ್ರತಿನಿಧಿಸುವ ಕನ್ನಡದ ಹೆಮ್ಮೆಯ ಕವಿ ಪು. ತಿ. ನ.

ಡಾ|| ರಾಮಕೃಷ್ಣ ಜೋಶಿ
ಸ್ಯೆಂಟ್ ಫಿಲೋಮಿನಾ ಪ್ರೌಢಶಾಲೆ
ಎನ್. ಆರ್. ಮೊಹಲ್ಲಾ
ಮೈಸೂರು-೭

ನವೋದಯಕಾಲದ ರತ್ನತ್ರಯರಲ್ಲಿ ಒಬ್ಬರಾದ ಡಾ|| ಪುರೋಹಿತ ತಿರುನಾರಾಯಣ ಅಯ್ಯಂಗಾರ್ ನರಸಿಂಹಾಚಾರ್ ಅವರು ಈ ಶತಮಾನದ ಕನ್ನಡದ ಹೆಮ್ಮೆಯ ಕವಿಗಳು. ೧೯೩೩ ರಲ್ಲಿ 'ಹಣತೆ'ಯ ಮೂಲಕ ನವೋದಯ ಕಾವ್ಯಜಗತ್ತನ್ನು ಪ್ರವೇಶಿಸಿದ ಪುತಿನ ಅವರು ಕಾವ್ಯ, ಗೀತರೂಪಕ, ಪ್ರಬಂಧ, ವಿಮರ್ಶೆ. ಅನುವಾದ ಮೊದಲಾದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸುಮಾರು ನಲವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಖ್ಯಾತಿ ಪಡೆದವರು. ಯಾವುದೇ ಗುಂಪು, ಪಂಥ, ಕಟ್ಟಿಕೊಳ್ಳದೆ, ಯಾರ ಜಾಲವನ್ನೂ ಬಡಿಯದೆ, ಶಿಷ್ಯಕೋಟಿಯ ಕೋಟೆಯಿಲ್ಲದೆ ಕ್ಷುದ್ರ, ಸಿನಿಕತನ, ದ್ವೇಷ, ತ್ವೇಷಗಳಿಂದ ದೂರ ನಿಂತು ಪ್ರಕೃತಿಯ ಕಣ-ಕಣದಲ್ಲೂ ಭಗವಂತನ ಕೃಪೆಯನ್ನು ಕಾಣುವ ಪ್ರಾಂಜಲ ಮನಸ್ಸಿನ ಈ ಕವಿ ಸಜ್ಜನ ಸೌಂದರ್ಯೋಪಾಸಕರು. ಲಲಿತ ಕೋಮಲ ಭಾವಗಳನ್ನು ನವ-ನವೋನ್ಮೇಷ ಶಾಲೀ ಮೃದು-ಮಧುರ ಪದಗಳಿಂದ ಧ್ವನಿಸುವ ಸರಸಕವಿಗಳು. ಇಳಿ ವಯಸ್ಸಿನಲ್ಲೂ ಸದಾ ಅಧ್ಯಯನ-ಚಿಂತನಶೀಲರು. ಕುತೂಹಲಿಗಳು ಸರಸಸಂಭಾಷಣಾ ಚತುರರು ಮತ್ತು ಸ್ನೇಹಮಯಿಗಳೂ ಆಗಿದ್ದ ಅವರು ೯೩ ವರ್ಷಗಳ ಸಾರ್ಥಕ ಬಾಳು ಬಾಳಿ ೯೮ ರ ಅಕ್ಟೋಬರ್ ೧೩ರಂದು ನಿರ್ಗಮಿಸಿದರು.

ಪುತಿನ ಅವರು ಜನಿಸಿದ್ದು ಮೇಲುಕೋಟೆಯಲ್ಲಿ ; ೧೯೦೫ ರ ಮಾರ್ಚ್ ೧೭ ರಂದು ತಂದೆ ತಿರುನಾರಾಯಣ ಅಯ್ಯಂಗಾರ್, ತಾಯಿ ಶ್ರೀರಂಗಮ್ಮ. ತಾಯ್ನುಡಿ ತಮಿಳು. ಮೇಲ್ಕೋಟೆಯಲ್ಲಿ ಪ್ರಾರಂಭಿಕ ವಿದ್ಯಾಭ್ಯಾಸ. ಜೊತೆಯಲ್ಲಿ ವೇದ. ಸಂಸ್ಕೃತದ ಅಧ್ಯಯನವೂ ಕೂಡ. ಅಂದಿನ ವಾತಾವರಣದ ಹಿನ್ನೆಲೆಯಲ್ಲಿ ಶಾಲೆಯಲ್ಲಿ ಕನ್ನಡ ಕಲಿಯಲಾಗಲಿಲ್ಲ. ಮುಂದೆ ಮಹಾರಾಜಾ ಕಾಜೇಜಿನಲ್ಲಿ ಇಂಗ್ಲೀಷ್, ಫ್ರೆಂಚ್ ಮತ್ತು ಸಂಸ್ಕೃತವನ್ನು ಮುಖ್ಯ ಭಾಷೆಯಾಗಿ ಅಧ್ಯಯನಮಾಡಿ ಬಿ. ಎ. ಪದವಿ ಪಡೆದರು. ಸುಮಾರು ೨೫ ವರ್ಷಗಳಕಾಲ ಮೈಸೂರು ಸಂಸ್ಥಾನದ ಮಿಲಿಟರಿ ಇಲಾಖೆಯಲ್ಲಿ ಸೇವೆ ಸಲ್ಲಿಸಿದರು. ಅಲ್ಲಿಂದ ಎಂಟು ವರ್ಷ :

೧೯೫೨ ರಿಂದ ೬೧ ರ ವರೆಗೆ ಶಾಸನಸಭೆಯ ಕಾರ್ಯಕಲಾಪಗಳ ಸಂಪಾದಕರಾಗಿ ನಿವೃತ್ತರಾದರು. ೧೯೬೩ ರಿಂದ ೧೯೬೬ ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್ ಕನ್ನಡ ನಿಘಂಟುವಿನ ಸಂಪಾದಕರಾಗಿದ್ದರು. ಈ ರೀತಿ ಅವರು ಕನ್ನಡವನ್ನು ಕುರಿತೋದದಿದ್ದರೂ ಕಾವ್ಯ ಪ್ರಯೋಗ ಪರಿಣತಮತಿಗಳಾಗಿದ್ದರು. ಅಂದಿನ ಸುಸಂಸ್ಕೃತ ಪರಿಸರ, ಉಚ್ಚವಿದ್ಯಾಭ್ಯಾಸದಲ್ಲಿ ಹಿರಿಯ ಸಾಹಿತಿಗಳ ಸಾನಿಧ್ಯ, ಸ್ವದೇಶೀ ವಾತಾವರಣದ ಕಾವ್ಯ ಮತ್ತು ಸಜ್ಜನಿಕೆಯಿಂದ ಆ ಪರಪುಷ್ಟ ಪರಿಪುಷ್ಟವಾಗಿ ಬೆಳೆದು ಸಾಹಿತ್ಯಾರಾಮದಲ್ಲಿ ಮಾಧವನನ್ನು ಧೇನಿಸಿತು. "ಸುಂದರ ಪುರುಷನ ಸರ್ವಾಂಗ ಸೌಷ್ಠವವನ್ನು ತಪಸ್ವಿಯ ತೇಜಸ್ಸನ್ನು ಮೆರೆಸುವಂಥ ಕಾವ್ಯವನ್ನು ರಚಿಸುವ" ಹಂಬಲದ ಪುತಿನ ಅವರ ಸಾಹಿತ್ಯಿಕ ಸಿದ್ಧಿ-ಪ್ರಸಿದ್ಧಿಗಳು ಗಮನಾರ್ಹವಾದುದಾದರೂ ಆ ಕುರಿತು ನಡೆದ ಗಂಭೀರ ಅಧ್ಯಯನ ಅತ್ಯಲ್ಪ; ಎಂದೇ ಹೇಳಬೇಕಾಗಿದೆ! ಉನ್ನತ ವಿಮರ್ಶನ ಪ್ರಜ್ಞೆಯ ದಿವಂಗತ ತೀನಂಶ್ರೀಯವರು ಪುತಿನ ಅವರನ್ನು 'ಕವಿಗಳ ಕವಿ' ಎಂದು ಹೊಗಳಿದ್ದು ಅಕ್ಷರಶಃ ಸತ್ಯವಾಗಿದೆ. ೧೯೩೩ ರಲ್ಲಿ ತಮ್ಮ ಮೊದಲ ಕವನಸಂಕಲನವಾದ 'ಹಣತೆ'ಯನ್ನು ಅರ್ಪಿಸುವಾಗ ಈ ಹಣತೆಯು ಜನತಾಜನಾರ್ದನನ ಪೂಜಾದ್ರವ್ಯವಾಗುವುದಕ್ಕೆ ಯೋಗ್ಯವಾಗಿದೆ; ಎಂದು ನಂಬಿ ಕನ್ನಡ ವಾಙ್ಮಯದ ಪುಣ್ಯವಾಹಿನಿಯಲ್ಲಿ ಇದನ್ನು ಇಂದು ಗುರುನಿವೇದನ ಪುರಸ್ಸರವಾಗಿ ತೇಲಿಬಿಟ್ಟಿದ್ದೇನೆ." ಎಂದ ಅವರು ವಿನಯ, ಸಜ್ಜನಿಕೆಯ ಮೂರ್ತಿಯಾಗಿ ತೇಲಿಬಿಟ್ಟಿದ್ದಾರೆ. ಆ ಭಾವನೆಗೆ ಕೆಂದಿಲ್ಲದೆ; ಕೊನೆಯವರೆಗೂ ನುಡಿದಂತೆ ಬಾಳಿದರು. ಭಾರತೀಯ ಪರಂಪರೆಯ ಸತ್ತ್ವ ಮತ್ತು ಸಂಸ್ಕೃತಿ ಅವರ ಕಾವ್ಯದ ಮೂಲ ದ್ರವ್ಯ. ವೈದಿಕ ಧರ್ಮದ ಬನಿ, ವೈಜ್ಞಾನಿಕ ದೃಷ್ಟಿ, ಆಧುನಿಕ ಪ್ರಜ್ಞೆಗಳ ರಸಪಾಕಗಳಾದ ಅವರ ಕವನ ಸಂಕಲನಗಳು ಹನ್ನೊಂದು. ಹಣತೆ, ಮಾಂದಳಿರು, ಇರುಳ ಮೆರಗು, ಗಣೇಶದರ್ಶನ, ಶಾರದ ಯಾಮಿನಿ, ರಸಸರಸ್ವತಿ. ಅಂರ ನಲುಗು, ಮಲೆಯ ದೇಗುಲ, ಮುಂತಾದವು. ಕನ್ನಡದ ಪ್ರಸಿದ್ಧ ಕವಿ ಡಾ|| ಅಕಬರ ಅಲಿಯವರು ಗುರುತಿಸಿದಂತೆ 'ಪುತಿನ ಅವರ ಕಾವ್ಯ ಚಿಂತನಶೀಲ ಕವಿಹೃದಯದ ಅರಳು, ಹುರುಳು. ಅದು ನೀರು ಮಜ್ಜಿಗೆಯಲ್ಲ, ನುರಿಸಲಾರದ ಕಬ್ಬಿಣದ ಕಡಲೆಯೂ ಅಲ್ಲ; ಸಹೃದಯತೆಯಿಂದ ಸಾವಧಾನವಾಗಿ ಮಂಥನ ಮಾಡುವವರಿಗೆ ದಕ್ಕಬಹುದಾದ ನವನೀತ' ಮಹಾಭಾರತದ ವಸ್ತುವನ್ನೊಳಗೊಂಡ ಮಹಾಪ್ರಸ್ಥಾನ, ರಾಮಾಯಣಕ್ಕೆ ಸಂಬಂಧಿಸಿದ ಸ್ವರ್ಗಾರೋಹಣ ಇವೆಲ್ಲದರಲ್ಲೂ ಅವರ ರಸಸೃಷ್ಟಿಯ ಪರಿಚಯವಾಗುತ್ತದೆ. ಬಡಪೆಟ್ಟಿಗೆಹಾಗೆ ಯಾರಿಗೂ ಒಲಿಯದ ಸಂಗೀತ ಸಂಸ್ಕೃತ ಮಂಡಿತೆಯಾದ ಅವರ ಕಾವ್ಯ ಕನ್ನಿಕೆ, ನಿಸರ್ಗ ಸೌಂದರ್ಯ, ಪರಮಾರ್ಥ ಚಿಂತನೆ, ಪೌರಾಣಿಕಪ್ರಜ್ಞೆ, ಸಾಮಾಜಿಕ ಸಂವೇದನೆಯ ಫಲಶೃತಿಯಾದ ಅನುಭವದ ಆವಿಷ್ಕಾರ, ಚಿಂತನೆಯ ಮಿಂಚುಗಳ ಜೀವಂತಸ್ಪಂದನದೊಂದಿಗೆ ಸಹೃದಯ ಹೃದಯಾಹ್ಲಾದಿನಿಯಾಗಿದ್ದಾಳೆ.

ಮೇಲುಕೋಟೆಯ ಮಲೆಯ ಮಡಿಲಲ್ಲಿ ಬೆಳೆದು ಚೆಲುವನಾರಾಯಣಸ್ವಾಮಿಯ, ಅಲಯದ ಸುತ್ತ ನಡೆಯುತ್ತಿದ್ದ ಸಾಹಿತ್ಯ

ಸಂಗೀತ, ಕಲೋತ್ಸವದ ಸವಿಯನ್ನು ಎಳವೆ ಯಲ್ಲಿಯೇ ಅನುಭವಿಸಿ ಆಸ್ತಿಕ ವಾತಾವರಣ ದಲ್ಲಿ ಬೆಳೆದು, ವಿದ್ಯಾಭ್ಯಾಸದಲ್ಲೂ ವಿಶೇಷ ವಾಗಿ ಮಾರ್ಗೀಯ ಸಾಹಿತ್ಯವನ್ನು ಅಧ್ಯಯನ ಮಾಡಿದ ಕವಿ ಪುತಿನ ಅವರ ಕಾವ್ಯ ವೈಭವಕ್ಕೆ ನಿಲುಗನ್ನಡಿಯಾಗಿವೆ; ಅವರ ೨೩ ಗೀತ ನಾಟಿಕಗಳು. ಅವುಗಳಲ್ಲಿ ಅಹಲ್ಯೆ, ಶಬರಿ, ವಿಕಟಕವಿ ವಿಜಯ, ಸತ್ಯಾಯನ ಹರಿಶ್ಚಂದ್ರ ಮುಂತಾದವುಗಳು ಸಾಹಿತ್ಯ ಪ್ರಧಾನವಾದರೆ; ಹಂಸದಮಯಂತಿ ಮತ್ತು ಇತರ ರೂಪಕಗಳು, ರಾಮಪಟ್ಟಾಭಿ ಷೇಕ ಮುಂತಾದವುಗಳಲ್ಲಿ ಸಂಗೀತ ಪ್ರಧಾನ ಸ್ಥಾನ ಪಡೆದಿದೆ. ಕನ್ನಡದ ಗೀತಗೋವಿಂದ ವೆಂದು ಪ್ರಸಿದ್ಧಿ ಪಡೆದ ಗೋಕುಲ ನಿರ್ಗಮನ' ದೋಣಿಯ ಬಿನದ ಮತ್ತು ಕವಿ' ಮುಂತಾದವುಗಳಲ್ಲಿ ಸಾಹಿತ್ಯ ಸಂಗೀತ ಗಳೆರಡೂ ಸಮಾನ ಹಕ್ಕು ಪಡೆದಿವೆ. ಸಂಗೀತದ ವೈಭವ, ಛಂದೋವೈವಿಧ್ಯ, ಜಾನಪದದಸೊಗಡು, ನೃತ್ಯವೈವಿಧ್ಯಕ್ಕೆ, ವಿಸ್ತಾರಕ್ಕೆ ಇಂಬು, ಸತ್ತ್ವಯುತ ಸಾಹಿತ್ಯ, ರಮ್ಯ ಕಲ್ಪನಾವಿಲಾಸದಿಂದ ಕೂಡಿದ ಅವರ ಗೀತರೂಪಕಗಳು ಕನ್ನಡ ಸಾಹಿತ್ಯದ ಅಪರೂಪದ ಕೃತಿಗಳು. "ಈ ಕೃತಿಗಳಲ್ಲಿ ಸುಂದರ ಕನ್ನಡ ಸಂಸ್ಕೃತ ಸಂಸ್ಕೃತಿಗಳ ಮಿಲನಗಳಾಗಿವೆ. ಸಂಸ್ಕೃತದ ಸಾಹಿತ್ಯದ ಅತ್ಯುತ್ಕೃಷ್ಟ ಕೃತಿಗಳನ್ನು ತಮ್ಮ ಸ್ವಂತ ಪ್ರತಿಭೆ, ಕವಿತಾಸಾಮರ್ಥ್ಯ, ಕನ್ನಡನುಡಿಯ ಆತ್ಮೀಯ ನೆಲಗಟ್ಟು ಕನ್ನಡ ಮಾತಿನ ಸ್ವಚ್ಛ ಶುಭ್ರತೆಗಳಿಂದ ಇನ್ನೂ ಹೆಚ್ಚು ಸೌರಭ ಯುಕ್ತವಾಗಿ ಮಾಡಿ ಕನ್ನಡ ಸರಸ್ವತಿಗೆ ಮರೆಯಲಾಗದ ಕಂಠಾಭರಣಗಳನ್ನು ಅರ್ಪಿಸಿದ್ದಾರೆ." ಎಂದಿದ್ದಾರೆ ಗೊರೂರರು.

'ಶ್ರೀಹರಿಚರಿತೆ' ಅವರಿಗೆ ಖ್ಯಾತಿಯನ್ನು ತಂದಿತು. ಮಹಾಕಾವ್ಯ ಪುತಿನ ಅವರು ಕವಿಗಳು ಹೇಗೋಹಾಗೆ ಕಾವ್ಯ ಜಿಜ್ಞಾಸು ಗಳೂ ಕೂಡ. ಭಾರತೀಯ ಪರಂಪರಾನಿಷ್ಠ ಇವರ ಕಾವ್ಯ ಚಿಂತನೆ, ಸೃಜನಶೀಲ ಮನಸ್ಸಿ ನಿಂದ ಅನಾವರಣಗೊಳಿಸಲ್ಪಟ್ಟ ಕಾವ್ಯ ಕಲೆಯ ರಹಸ್ಯವಾಗಿದೆ. ಪುತಿನ ಅವರ ಕಾವ್ಯಮೀಮಾಂಸೆ ಭಾರತೀಯ ಪರಂಪರಾ ಗತ ಕಾವ್ಯ ಮೀಮಾಂಸೆಗಿಂತಲೂ ಒಂದು ಹೆಜ್ಜೆ ಮುಂದೆನಿಂತು, 'ಭವ ನಿಮಜ್ಜನಾ ಚಾತುರ್ಯ' ಮತ್ತು 'ಲಘಿಮಾ ಕೌಶಲ'ದ ಅಪೂರ್ವ ಕೊಡುಗೆಯನ್ನಿತ್ತು ಕಾವ್ಯ ಸಂಸ್ಕೃತಿಯ ಮೀಮಾಂಸೆಯಾಗಿದೆ. 'ರಸಕಾರಿಕೆಗಳು' ಅಪ್ರಕಟಿತವಾದ ಇನ್ನೊಂದು ಕಾವ್ಯಮೀಮಾಂಸಾಕೃತಿ.

'ಕವಿತೆ ನನ್ನ ಮಾಧ್ಯಮ' ಎಂದು ಕವಿ ಹೇಳಿಕೊಂಡಿದ್ದರೂ ಗದ್ಯದಲ್ಲಿನ ಅವರ ಕೃತಿ ಗಮನಾರ್ಹವಾದುದೇ ಆಗಿದೆ. ಗದ್ಯ ಪ್ರಯೋಗ ಪಟುಗಳಾದ ಅವರೇ ಹೇಳಿದಂತೆ, ಅವರ ಗದ್ಯ 'ಛಂದಸ್ಸು ಗೂಢವಾಗಿದ್ದು ಕೊಂಡು ಅದರ ಜೀವಕಳೆಯನ್ನು ಹೆಚ್ಚಿಸಿದೆ' ಗದ್ಯರೂಪೀ ಭಾವಗೀತಾಂಶವುಳ್ಳ ಎಂಟು ಭಾವನಾಚಿತ್ರಗಳಿಂದೊಡಗೂಡಿದ 'ರಾಮಾ ಚಾರಿಯ ನೆನಪು' ಹಾಗೆಂತೆಗಿಂತಲೂ ಮೊದಲೇ ಪ್ರಕಟವಾದದ್ದು ; ಅವರ ಗದ್ಯ ಪ್ರಯೋಗ ಕ್ಕೊಂದು ಸಾಕ್ಷಿ. ಬಾಲ್ಯದ ಗೆಳೆಯನೊಬ್ಬನ ದುರಂತದ ಹಿನ್ನೆಲೆಯೇ ಪ್ರಧಾನ ವಸ್ತು ವಾಗುಳ್ಳದ್ದು 'ರಾಮಾಚಾರಿಯ ನೆನಪು'. ಯದುಗಿರಿಯ ಚಲುವಿನ ಹಲವು ಮುಖಗಳ ಅಭಿವ್ಯಕ್ತಿ 'ರಥಸಪ್ತಮಿ ಮತ್ತು ಇತರ ಚಿತ್ರಗಳು' ಎಂಬ ಪ್ರಬಂಧ ಸಂಕಲನ. ಚಿಂತನೆ ಮತ್ತು ತರ್ಕವೇ ಪ್ರಧಾನವಾಗಿದ್ದು,

ಈಚಲುಮರ ನಿಮಿತ್ತವಾಗಿರುವ 'ಈಚಲು ಮರದ ಕೆಳಗೆ' ಮತ್ತು ಚಮತ್ಕಾರವೇ ಮುಖ್ಯವಾಗಿರುವ 'ಧೇನುಕಪುರಾಣ' ಎಂಬ ನಾಲ್ಕು ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಮನೆಗೆ ಹೋದಾಗ ನಮ್ಮ ಮಗ್ಗುಲಲ್ಲಿ ಕುಳಿತು ಎಷ್ಟೊಂದು ಆತ್ಮೀಯವಾಗಿ ಪಟ್ಟಂಗ ಹೊಡೆಯುತ್ತಾರೋ ಅಷ್ಟೇ ಆತ್ಮೀಯತೆ ಅವರ ಪ್ರಬಂಧಗಳಲ್ಲೂ ಕಾಣಬರುತ್ತದೆ. ಅವರ ಅನುವಾದ ಸಾಮರ್ಥ್ಯವನ್ನು ಭಗವದ್ಗೀತೆ, ಫಾಸ್ಟ್ ಕೃತಿಗಳಲ್ಲಿ ಕಾಣಬಹುದು.

ಒಟ್ಟಿನಲ್ಲಿ ಪುತಿನ ಭಾರತೀಯ ಪರಂಪರೆಯನ್ನು ಪ್ರತಿನಿಧಿಸುವ ರಸಋಷಿ "ಕಲಾವಿದನ ಎಲ್ಲ ಅಭಿವ್ಯಕ್ತಿಯೂ ಒಂದು ಆಧ್ಯಾತ್ಮಿಕ ಕ್ರಿಯೆ. ಧರ್ಮದ ಉನ್ನತ ಆಚರಣೆ. ಧರ್ಮವೆಂದರೆ ಸಮಯಪಾಲನೆಯಲ್ಲ. ಸಮಯಾಚರಣೆಯೂ ಅಲ್ಲ. ಅವೆಲ್ಲ ಧರ್ಮಪಾಲನೆಗೆ ಸಹಕಾರಿ ಮಾತ್ರ. ಯಾರು ಎಷ್ಟು ಸ್ವತಂತ್ರನೋ ಎಷ್ಟು ನಿರ್ಭೀತನೋ, ಎಷ್ಟು ಪ್ರಾಮಾಣಿಕನೋ ಮತ್ತು ಎಷ್ಟು ಪರಪೀಡಕನಲ್ಲವೋ ಅಷ್ಟು ಉನ್ನತ ಆಧ್ಯಾತ್ಮಶೀಲ. ಈ ಮತ ಮುಟ್ಟಲು ನಾಮ-ಲಾಂಛನಗಳೇ ಆಗಬೇಕಿಲ್ಲ" ಎಂದು ತಮ್ಮ ಸಾಹಿತ್ಯದಲ್ಲಿನ ಧರ್ಮಕ್ಕೆ ಸಂಬಂಧಿಸಿದ ಸಾಮಗ್ರಿಯನ್ನು ಕುರಿತಂತೆ ಅಭಿಪ್ರಾಯ ನೀಡಿದ ಈ ಹೆಮ್ಮೆಯ ಕವಿಗೆ ಪದ್ಮಶ್ರೀ ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದ ಡಿ. ಲಿಟ್ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿದ್ದವು. ಚಿಕ್ಕಮಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಅವರಿಗೆ ಲಭಿಸಿತ್ತು.

ವಿ.ಸೂ :—ಇತ್ತೀಚೆಗೆ ನಿಧನರಾದ ಖ್ಯಾತ ಸಾಹಿತಿ ಹಾಗೂ ಚಲನಚಿತ್ರ ನಿರ್ದೇಶಕ ಚದುರಂಗ (ಸುಬ್ರಹ್ಮಣ್ಯರಾಜೇ ಅರಸ್), ಸ್ವಾತಂತ್ರ್ಯ ಹೋರಾಟಗಾರ ಹಾಗೂ ವಿನೂತನ ಶೈಲಿಯ ಕಥೆ ಮತ್ತು ಕಾದಂಬರಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಧಾರೆ ಎರೆದಿದ್ದ ಸತ್ಯಕಾಮ (ಅನಂತಕೃಷ್ಣ ಶಹಾಪೂರ) ಹಾಗೂ ಹಿಂದುಸ್ಥಾನಿ ಸಂಗೀತದ ಅಗ್ರಗಣ್ಯ ವಿದ್ವಾಂಸರಾದ ಶ್ರೀ ರಾಮರಾವ್ ನಾಯಕ್ ಅವರುಗಳನ್ನು ಕುರಿತ ಲೇಖನಗಳನ್ನು ಸ್ಥಳ ಮತ್ತು ಸಮಯಾಭಾವದಿಂದ ಈ ಸಂಚಿಕೆಯಲ್ಲಿ ಪ್ರಕಟಿಸಲಾಗಲಿಲ್ಲ. ಡಿಸೆಂಬರ್ ೧೯೯೮ ರ ಸಂಚಿಕೆಯಲ್ಲಿ ಇವರುಗಳನ್ನು ಕುರಿತ ಲೇಖನಗಳನ್ನು ಓದಲು ಮರೆಯದಿರಿ.

ದೇಜಗೌ

ಆದರ್ಶ ಗುರುವರ್ಯ ತ. ಸು. ಶಾಮರಾಯ

ಪಿ. ಆರ್. ತಿಪ್ಪೇಸ್ವಾಮಿ

೧೬೩, ರಮಾವಿಲಾಸ ರಸ್ತೆ
ಮೈಸೂರು–೨೪

೧೯೩೪ರ ಸಮಯ ನಾನು ದಾವಣಗೆರೆಯಲ್ಲಿ ನ್ಯೂ ಮಿಡಲ್ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಅದೇ ಸಂದರ್ಭದಲ್ಲಿ ಸಬ್ ಇನ್ಸ್‌ಪೆಕ್ಟರ್ ದಿ॥ ದೇವಯ್ಯ ನನ್ನ ಚಿಕ್ಕಪ್ಪನವರ ಮನೆ ನನಗೆ ಆಶ್ರಯ ನೀಡಿತ್ತು. ತ. ಸು. ಶಾಮರಾಯರು ನನ್ನ ಶಾಲಾ ಗುರುಗಳು. ನಾನು ಸಂಪಿಗೆ ರಸ್ತೆಯಲ್ಲಿನ ಮನೆಯಲ್ಲಿದ್ದರೆ, ಅವರು ಹೆದ್ದಾರಿಯ ಒಂದು ಚಿಕ್ಕ ಮನೆಯಲ್ಲಿ ವಾಸವಾಗಿದ್ದರು. ಅಲ್ಲೆ ನಮ್ಮ ಶಾಲೆ. ಆಗ ದಾವಣಗೆರೆ ಅಷ್ಟಾಗಿ ಬೆಳೆದಿರಲಿಲ್ಲ. ರೈಲ್ವೇಸ್ಟೇಷನ್ ಮೇಲು ಭಾಗದಲ್ಲಿ ಸರಕಾರಿ ಹೈಸ್ಕೂಲು, ಕೋರ್ಟ್ ಕಛೇರಿ, ಮುರುಘಮಠ ಹಾಗೂ ಮುಸ್ಲಿಂ ವಿದ್ಯಾರ್ಥಿ ನಿಲಯಗಳನ್ನು ಬಿಟ್ಟರೆ, ಜೋಳ ಸೇಂಗ ಬೆಳೆಯುವ ಬಟ್ಟ ಬಯಲು. ಪಕ್ಕದಲ್ಲೇ ಕೃಷ್ಣ ಸಿನಿಮಾ ಥೀಯೆಟರ್. ನಾನು ಮೊದಲ ಕನ್ನಡ ಚಲನಚಿತ್ರ "ಧ್ರುವ" ನೋಡಿದ್ದೂ ಇಲ್ಲೆನೇ. ಗುಬ್ಬಿ ಕಂಪನಿ ಬಂದಾಗ ವೀರಣ್ಣ ಅವರ ನಟ ಭಯಂಕರ ಗಂಗಾಧರರಾಯರ ನಾಟಕಗಳನ್ನು, ಹಲಗೇರಿ ಜಟ್ಟಪ್ಪನ ಕಂಪನಿಯ 'ಸ್ತ್ರೀ' ಹಾಗೂ ಇತರ ಸಾಮಾಜಿಕ ನಾಟಕಗಳನ್ನು ವೀಕ್ಷಿಸಿದ್ದು ಇಲ್ಲಿಯೇ. ಕೆ. ಶಾಮರಾಯರ ಸಂಪಾದಕತ್ವದಲ್ಲಿ 'ಸಂಜಯ' ವಾರ ಪತ್ರಿಕೆ ಓದುತ್ತಿದ್ದುದು ಇಲ್ಲಿಯೇ.

'ದುರ್ಗದ ನಾರಾಣಪ್ಪ' ಉಡುಪಿ ಹೋಟಲಿನ ತಾಜಾ ಮಸಾಲೆದೋಸೆ ಸವಿಯುತ್ತಿದ್ದುದು ಎಲ್ಲವೂ ನೆನಪು ಬರುತ್ತಿವೆ. ಗುರು ಶಾಮರಾಯರನ್ನು ನೆನೆದಾಗಲೆಲ್ಲಾ ಸಾಹಿತ್ಯ ಸೇವೆಯು ಅಪಾರವಾದುದ್ದು. ಶಾಮರಾಯರು ಪುಸ್ತಕ ಪ್ರಕಾಶಕರಾಗಿದ್ದರಲ್ಲದೆ, ಪ್ರಾಥಮಿಕ ಶಾಲೆಯಿಂದ ಸ್ನಾತಕೋತ್ತರ ತರಗತಿಗಳವರೆಗೆ ಪಾಠ ಹೇಳುವ ಸಾಮರ್ಥ್ಯದಿಂದಾಗಿ ಆದರ್ಶ ಅಧ್ಯಾಪಕರಾಗಿದ್ದರು. ೧೯೦೬ ರಲ್ಲಿ ತಳುಕಿನಲ್ಲಿ ಜನಿಸಿ, ೧೯೯೮ರ ಆಗಸ್ಟ್ ೨೧ ರಂದು ಮೈಸೂರಲ್ಲಿ ನಿಧನರಾದ ಶಾಮರಾಯರು ರಾಷ್ಟ್ರಕವಿ ಕುವೆಂಪು ಅವರ ಗುರು ಪ್ರೊ॥ ವೆಂಕಣ್ಣಯ್ಯನವರ ಸೋದರರಾಗಿ ಅವರ ಎಲ್ಲ ಗುಣಗಳನ್ನು ಇವರಲ್ಲಿ ಕಾಣಬಹುದಿತ್ತು. ಕುಮಾರವ್ಯಾಸ ಭಾರತ, ವೀರಶೈವಸಾಹಿತ್ಯ, ರಾಮಾಯಣ, ಭಾಗವತ ಮೊದಲಾದ ಕೃತಿಗಳು ಜನಪ್ರಿಯವಾಗಿವೆ. 'ಮೂರು ತಲೆಮಾರು' ಎಂಬ ವೆಂಕಣ್ಣಯ್ಯ ಅವರ ನೆನಪಿನ ಬೃಹತ್ ಸಂಚಿಕೆಯನ್ನು ಸಂಪಾದಿಸಿ ಹೊರತಂದಿದ್ದಾರೆ. ಮೂರು ತಲೆಮಾರು ಎಂಬ

ಕೃತಿಯು ಜನಪ್ರಿಯ ಹಾಗೂ ಜನಮನ್ನಣೆಗೆ ಪಾತ್ರವಾಗಿದೆ. ಶಾಮರಾಯರು ತಮ್ಮ ಸಾಹಿತ್ಯ ಸೇವೆ ಜೊತೆಗೆ ಸಾಕಷ್ಟು ವಿದ್ಯಾರ್ಥಿಗಳಿಗೆ ಸಾಹಿತ್ಯ ಸಂಸ್ಕೃತಿಯಲ್ಲಿ ಆಸಕ್ತಿ ಅಭಿರುಚಿ ಮೂಡಿಸುವಂತೆ ಮಾಡಿದ ಕೀರ್ತಿಗೂ ಭಾಜನರಾಗಿದ್ದರು. ಇವರ ಬಹುಮುಖ ಸೇವೆಯನ್ನು ಗಮನಿಸಿ ರಾಜ್ಯ ಸರಕಾರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿಯನ್ನು ನೀಡಿದೆ. ಉತ್ತಮ ಭಾಷಣಕಾರರಾಗಿ ವಿದ್ಯಾರ್ಥಿಗಳನ್ನು ಬಹುಮುಖವಾಗಿ ಆಕರ್ಷಿಸುವಂಥ ಗುಣವುಳ್ಳವರಾಗಿದ್ದರು. ಅಣ್ಣ ವೆಂಕಣ್ಣ ಅವರ ಪ್ರತಿರೂಪವನ್ನು ಶಾಮರಾಯರು ಹೊಂದಿದ್ದರು.

ಅಂದಿನ ರಾಜರ ಕಾಲದಲ್ಲಿ ಶಾಲಾ ಮಾಸ್ತರಿಗೆ ಸಂಬಳ ಅತಿ ಕಡಿಮೆ. ಆದರೂ ತೃಪ್ತಿಯ ಜೀವನ ಅವರದಾಗಿತ್ತು. ಈ ಒಂದು ಪರಂಪರೆಯಲ್ಲಿ ನನ್ನ ಗುರುಗಳೂ ಒಬ್ಬರಾಗಿದ್ದರು. ಈ ತನಕ ಅದೆಷ್ಟು ಜನ ಗುರುಗಳು ನನಗೆ ಬಂದು ಹೋಗಿದ್ದಾರೆ. ಅವರಲ್ಲಿ ಶಾಮರಾಯರು ನನ್ನ ಜೀವನದಲ್ಲಿ ಮರೆಯಲಾಗದ ವ್ಯಕ್ತಿ. ಶಾಲೆಗೆ ಸಕಾಲದಲ್ಲಿ ಹಾಜರಾಗುತ್ತಿದ್ದರು. ನಮಗೆ ಇಂಗ್ಲೀಷ್ ತರಗತಿಯನ್ನು ತೆಗೆದುಕೊಳ್ಳುತ್ತಿದ್ದರು. ಅವರನ್ನು ಕಂಡರೆ ನನಗೆ ಎಲ್ಲಿಲ್ಲದ ಭಯ! ಕಾರಣ ಇಂಗ್ಲೀಷನ್ನು ಅಷ್ಟಾಗಿ ಸರಾಗವಾಗಿ ಓದಲು ಬಾರದ ನಾನು ಅವರ ನಾಗಬೆತ್ತದ ರುಚಿ ಅನುಭವಿಸಬೇಕಾಗುತ್ತಿತ್ತು. ನಾನು ಸದಾ ಏನಾದರೂ ಕದ್ದು ಗೀಚುತ್ತಿದ್ದ ರೇಖಾ ಚಿತ್ರಗಳು ಒಮ್ಮೆ ಅವರ ಗಮನ ಸೆಳೆದವು. ಅಂದಿನಿಂದ ಚಿತ್ರದ ಏಟಿನಿಂದ ಪಾರಾದೆ. ನನ್ನ ಬಗ್ಗೆ ಪ್ರೀತಿಯ ಮಾತುಗಳು ಅವರಿಂದ ಬರತೊಡಗಿದವು. ಅವರ ಹೃದಯಕ್ಕೆ ಸಮೀಪನಾದೆ ಅನ್ನಿಸಿತು. ಗುರುಗಳಿಗೆ ವರ್ಗವಾಯಿತು. ನಮ್ಮ ಗೆಳೆಯರಿಗೆಲ್ಲ ದುಃಖವಾಯಿತು. ಎಲ್ಲರೂ ಜೊತೆಗೂಡಿ ಬಂದು ಫೋಟೋ ತೆಗೆಸಿದೆವು. ಅವರ ಮನೆಯಲ್ಲಿ ನಮಗೆ ರುಚಿಯಾದ ಕೋಡಬಳೆ, ಕಾಫಿ ಸೇವನೆ, ಅವರನ್ನು ಬೀಳುಕೊಡುವಾಗ ಎಳೆಯ ಮಕ್ಕಳಂತೆ ಗೋಳಾಡಿದ್ದು, ಅವರ ಶ್ರೀಮತಿ ಎಲ್ಲ ಮಕ್ಕಳನ್ನು ಸಮಾಧಾನ ಮಾಡಿದ್ದು ಇಂದಿಗೂ ನೆನಪಿದೆ.

೧೯೩೯ ರಲ್ಲಿ ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ದೊಡ್ಡ ಸ್ಕೌಟ್ ಸಮಾವೇಶ ನಡೆಯಿತು. ಚಿತ್ರದುರ್ಗ ಜಿಲ್ಲೆಯಿಂದ ಕವಿ ಹೊಯ್ಸಳರು ನನ್ನ ಕರೆತಂದಿದ್ದರು. ಸ್ಕೌಟ್ ಉಡುಪಿನಲ್ಲಿದ್ದ ಗುರು ಶಾಮರಾಯರನ್ನು ಅಲ್ಲಿ ಕಂಡು ಸಂತೋಷಗೊಂಡು ಮಾತನಾಡಿಸಿದೆ. 'ಮಗು ಚೆನ್ನಾಗಿದ್ದೀಯಾ' ಎಂದು ವಿಚಾರಿಸಿ ಅವರು ತಂಗಿದ್ದ ವಸತಿ ಕಡೆ ಹೊರಟರು. ಸಾವಿರಾರು ಜನ ರೋವರ್ ಸ್ಕೌಟ್‌ಗಳಲ್ಲಿ ನಮ್ಮ ಗುರು ಶಾಮರಾಯರು ಈ ಕ್ಯಾಂಪಿನಲ್ಲಿ ಎದ್ದು ಕಾಣುತ್ತಿದ್ದರು. ಶಿವಮೊಗ್ಗ ಕಾಲೇಜಿನಿಂದ ಬಂದಿದ್ದರೆಂದು ನೆನಪು. ೧೯೪೯–೫೧ರ ಸಮಯ ನಾನು ಮಹಾರಾಜ ಕಾಲೇಜಿನ ವಿದ್ಯಾರ್ಥಿ. ಈಗಿನ ಮುಖ್ಯಮಂತ್ರಿ ಜೆ. ಎಚ್. ಪಟೇಲ್, ಎಸ್. ಎಂ. ಕೃಷ್ಣ, ರೇಣುಕಾಪ್ರಸಾದ ದಿ॥ ಹೇಮದಳರಾಮದಾಸ್ ಮೊದಲಾದವರು ಸಹಪಾಠಿಗಳಾಗಿದ್ದೆವು. ಇದೇ ಸಂದರ್ಭದಲ್ಲಿ "ಕುವೆಂಪು" ಅವರನ್ನು ಕಾಣು

ತ್ತಿದ್ದುದೂ ಇಲ್ಲ. ಕಲಾಕ್ಷೇತ್ರ ಕೈಬರಹ ಪತ್ರಿಕೆ ಪ್ರಕಟಿಸಲು ಪ್ರೇರಣೆ ನೀಡಿದವರು ಶಾಮರಾಯರೇ. ನಾನು, ಹೇಮದಳ ರಾಮದಾಸ್,ಜೀ. ಶಂ. ಪ. ಸಂಪಾದಕರು. ಕಲಾಕ್ಷೇತ್ರ ಸಂಸ್ಥೆಯಲ್ಲಿ ನಜೀರ್‌ಸಾಬ್ ಕೂಡ ಒಬ್ಬರಾಗಿದ್ದರು. ಸಚಿತ್ರ ಕೈಬರಹ ಸಂಚಿಕೆಯಿಂದ ಪ್ರಕಟಣೆಗೆ ಕೈಹಾಕಿ ನಾಲ್ಕು ಕೃತಿಗಳನ್ನು ಸಾಹಸಮಾಡಿ ಹೊರ ತಂದೆವು. ಇದಕ್ಕೆಲ್ಲ ಗುರು ಶಾಮರಾಯರ ಬೆಂಬಲ ಪ್ರೋತ್ಸಾಹ ಸದಾ ಇರುತ್ತಿತ್ತು. ಇದರಿಂದಾಗಿ ಇವರ ಮನೆಗೆ ಸದಾ ಹೋಗಿ ಬರುವುದೂ ನಮ್ಮದಾಗಿತ್ತು. ಸಾಹಿತ್ಯ ಕಲೆಗೆ ಪ್ರೇರಣೆ ಇವರಿಂದ ಸಿಗದಿದ್ದರೆ ನಾನು ಕಲಾವಿದನಾಗುತ್ತಿರಲಿಲ್ಲ. ಜೀ ಶಂ. ಪ. ಸಾಹಿತಿಯಾಗುತ್ತಿರಲಿಲ್ಲವೇನೋ, ಹೇಮವಳ ಪತ್ರಿಕಾಲಯ ಸೇರುತ್ತಿರಲಿಲ್ಲ.

ಶಾಮರಾಯರು ಪ್ರಸಾರಂಗದ ಉಪ ನಿರ್ದೇಶಕರಾಗಿದ್ದಾಗ ಅವರು ಗ್ರಂಥಗಳಿಗೆ ಬೇಕಾಗುವ ರೇಖಾ ಚಿತ್ರಗಳನ್ನು ರಚಿಸಿ ಕೊಡಲು ನನಗೆ ಅವಕಾಶ ಕೊಟ್ಟಿದ್ದು ಮರೆಯುವಂತಿಲ್ಲ. ಈ ಸಂದರ್ಭದಲ್ಲಿ ಮಾನ್ಯ ದೇಜಗೌ ಅವರು ಮಾಡಿದ ಶಿಫಾರಸಿನಿಂದಾಗಿ ನನ್ನ ಕೆಲಸಕ್ಕೆ ಅಧಿಕೃತ ಮುದ್ರೆ ಬಿದ್ದು, ಮಾರ್ಗ ಹೆಚ್ಚು ಸುಗಮವಾಯಿತು. ಅಂದಿನ ಕೆಟ್ಟಕಾಲದಲ್ಲಿ ನಿರುದ್ಯೋಗಿಯಾಗಿದ್ದ ನನ್ನ ಕೈಲಿ ನಾಲ್ಕು ಕಾಸು ಸದಾ ಓಡಾಡುವಂತೆ ಮಾಡಿದ ಶಾಮರಾಯರನ್ನು ಮರೆಯಲಾದೀತೆ? ಕುಪ್ಪಳ್ಳಿಗೆ ಹೋಗಿ ನಿಸರ್ಗ ಚಿತ್ರ ರಚಿಸಲು ಸಲಹೆ ಸೂಚನೆ ನೀಡಿದವರಲ್ಲಿ ಶಾಮರಾಯರೂ ಒಬ್ಬರು. ಆ ಚಿತ್ರಗಳು ಕುವೆಂಪು ಅವರಿಗೆ ಅಪರಿಮಿತ ಸಂತೋಷ ಕೊಟ್ಟವು. 'ಉದಯರವಿ'ಯ ಬಿಸಿಲು ಮಹಡಿಯಲ್ಲಿ ಒಂದು ಸಂಜೆ ನನಗಾಗಿ ಸಹೃದಯ ಕೂಟ ಏರ್ಪಡಿಸಿದ್ದರು. ಅಲ್ಲಿಗೆ ಶಾಮರಾಯರು ಆಗಮಿಸಿದ್ದರು. "ನೀನೇ ಭಾಗ್ಯಶಾಲಿ ಕಣಯ್ಯ! ಮಹಾಕವಿಯ ಪ್ರೀತಿಗೆ ಪಾತ್ರನಾದೆ" ಎಂದು ಹೃದಯ ತುಂಬಿ ಹೊಗಳಿದ್ದರು. ಆ ಚಿತ್ರಗಳು ಪ್ರಬುದ್ಧ ಕರ್ನಾಟಕದಲ್ಲಿ ತ್ರಿವರ್ಣಗಳಲ್ಲಿ ಪ್ರಕಟವಾಗುವಂತೆಯೂ ಮಾಡಿದವರು ಶಾಮರಾಯರು ಹಾಗೂ ಸಂಪಾದಕರಾಗಿದ್ದ ಡಾ|| ಪ್ರಭುಶಂಕರರು.

ಗುರುಗಳ ಅಪೇಕ್ಷೆಯಂತೆ ಅವರ ಹುಟ್ಟೂರು ತಳಕಿಗೂ ಹೋಗಿಬಂದೆ. ಅಲ್ಲಿ ಪೂಜ್ಯ ವೆಂಕಣ್ಣಯ್ಯನವರು ವಾಸವಾಗಿದ್ದ ಮನೆ. ಅವರ ವಂಶೀಕರ ಗುಡಿಯೊಂದರ ಚಿತ್ರಗಳನ್ನು ಬಿಡಿಸಿಕೊಂಡು ಬಂದು ಅರ್ಪಿಸಿದಾಗ ಅವರು ಗಾಜು ಕಟ್ಟುಹಾಕಿಸಿ ಮನೆಯಲ್ಲಿ ತೂಗುಹಾಕಿ ಸಂತೋಷಗೊಂಡ ಸನ್ನಿವೇಶ ಮರೆಯಲಾದೀತೆ? ಶಾಮರಾಯರು ಮೈಸೂರಿನ ಕೃಷ್ಣಮೂರ್ತಿ ಪುರಂನ ಒಂದು ಚಿಕ್ಕ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಅನಂತರ ಅಲ್ಲೆ ಮತ್ತೊಂದು ಮನೆ ಸ್ವಂತವಾಗಿ ಮಾಡಿಕೊಂಡರು. ಇವರಲ್ಲಿಗೆ ಬಂದು ಹೋಗುತ್ತಿದ್ದ ಅನೇಕರು ಪ್ರಸಿದ್ಧರೇ ಆಗಿದ್ದಾರೆ. ಏಕೋ ಏನೋ ಗುರುಗಳಿಗೆ ಮೈಸೂರು ಬೇಡವಾಯಿತು. ಗುಬ್ಬಿ ಆಶ್ರಯವು ಕರೆಯಿತು. ಪ್ರಯಾಣ ಮಾಡುವ ಸಮಯ ನನಗೆ ತಿಳಿಯಿತು ಬಸ್ ನಿಲ್ದಾಣಕ್ಕೆ ಧಾವಿಸಿದೆ ಮಗ ಛಾಯಪತಿ ಅಲ್ಲಿದ್ದರು. ತಂದೆ ತಾಯಿ ಬಸ್ಸಿನಲ್ಲಿ ಕುಳಿತರು. ನಮ್ಮ ಕಡೆ ಕೈಬೀಸಿ ಶುಭ ಹಾರೈಸಿದರು. ನಮ್ಮ


ಕಣ್ಣುಗಳು ಒದ್ದೆಯಾದವು. ಮಗನನ್ನು ಒಂಟಿಯಾಗಿ ಬಿಟ್ಟು ಹೋದರಲ್ಲ ಎಂಬ ನೋವು ಮರೆಯಲು ಆಗಲೇ ಇಲ್ಲ. ಅವರು ಮತ್ತೆ ಮೈಸೂರಿಗೆ ಮರಳಿದಾಗಲೇ ಆ ನೋವು ಕರಗಿದ್ದು! ತಂದೆತಾಯಿಗಳನ್ನು ಮತ್ತೆ ಪಡೆದೆ ಎಂಬ ಅಪಾರ ಸಂತೋಷ ಛಾಯಪತಿಗಳಿಗೆ ಗುರುಗಳ ದರ್ಶನ ಬೇಕೆಂದಾಗ ದೊರಕುವುದಲ್ಲ ಎಂಬ ಭಾಗ್ಯವನ್ನದಾಗಿತ್ತು.

ಮೈಸೂರು ನಗರದಲ್ಲಿ ೧೯೪೨ರಲ್ಲಿ ಈತನಕ ವಾಸವಾಗಿರುವ ಗುರುಗಳ ನೆನಪು ಬಂದಾಗಲೆಲ್ಲಾ ಅವರ ಕುಶಲ ವಿಚಾರಿಸಿ ಬರುತ್ತಿದ್ದೆ. ಹೋದಾಗ "ಲೋ ಮಗ ಇಷ್ಟುದಿನ ಎಲ್ಲಿ ಹೋಗಿದ್ದೀಯೋ? ಕಾಣಲಿಲ್ಲ" ಎಂಬ ಮೊದಲ ಪ್ರಶ್ನೆ ಅವರಿಂದ ಅಡುಗೆಮನೆ ಕಡೆಹೋಗಿ"ಲೇ ತಿಪ್ಪೆಸ್ವಾಮಿಗೆ ಒಂದು ಕಪ್ಪು ಕಾಫಿ ತಂದುಕೊಡು" ಎಂಬ ಮಾತು. ಅವರ ಶ್ರೀಮತಿಯವರ ಕೈಯಿಂದ ಅದೆಷ್ಟು ಕಪ್ಪು ಕಾಫಿ ರುಚಿ ಸವಿದಿರುವೆನೋ ಕಾಣೆ! ಗುರುಗಳ ಪತ್ನಿ ಅವರನ್ನು ಅಮ್ಮ ಅಂತಲೇ ಕರೆಯುವುದು ರೂಢಿ ಮಾಡಿಕೊಂಡಿದ್ದೆ. ಅವರದು ಅದೇ ಭಕ್ತಿ, ಆದೇನು ಸೇವೆ! ನಿರಂತರ ಚಟುವಟಿಕೆಯ ಜೀವ! ಖಾಯಿಲೆ ಎಂಬ ಶಬ್ದ ಇವರ ಜೀವನದಲ್ಲಿ ಕಾಣಲಿಲ್ಲ. ಸದಾ ಅಡುಗೆ ಕೋಣೆಯಲ್ಲಿ ಇಲ್ಲವೆ ದೇವರ ಕೋಣೆಯಲ್ಲಿ ಒಂದಲ್ಲ ಒಂದು ಕೆಲಸ. ಬಿಡುವಿನಲ್ಲಿ ಉಪಯುಕ್ತ ಗ್ರಂಥಗಳ ಅಧ್ಯಯನ ಇವರದು. ಗುರುಗಳು ಯಾವಾಗಲಾದರೂ ಸಿಡುಕಿನ ಮಾತನ್ನಾಡಿರಬಹುದು. ಆದರೆ ಈ ಮಹಾತಾಯಿ ಸದಾ ಶಾಂತಚಿತ್ತ. ಯಾರಾದರೂ ಏಕೆ ನಾನೇ ಅವರ ಮಗ ಛಾಯಾಪತಿ ಬಗ್ಗೆ ಅಪಸ್ವರದ ಮಾತು ಎತ್ತಿದಾಗಲೂ ಈ ತಾಯಿ ಹಾಗೆನೋ ಅಲ್ಲ ಬಿಡೋ ಎಂದು ನನ್ನ ನಾಚುವಂತೆ ಮಾಡಿದ್ದಾರೆ. ಬಾಯಿ ಮುಚ್ಚಿಸಿದ್ದಾರೆ. ಮಕ್ಕಳನ್ನು ಕರಸಿ ಒಟ್ಟಿಗೆ ಊಟ ಮಾಡಿದರೇನೇ ಈ ವೃದ್ಧ ಜೀವಿಗಳಿಗೆ ಸಮಾಧಾನ ತೃಪ್ತಿ. ಹೆತ್ತಕರಳು! ಕೂಗಿ ಕರೆಯುತ್ತದೆ. "ಇಲ್ಲೇ ಬನ್ನಿ ಊಟಕ್ಕೆ" ಎಂಬ ಕರೆ ಈ ತಾಯಿಯ ಕೈಯಿಂದ ಆದ ತಿಳಿಸಾರಿನ ರುಚಿ ನೋಡಿದವರಲ್ಲಿ ನಾನೇ ಹೆಚ್ಚು ಅನ್ನಿಸುತ್ತದೆ?

ನಾನು ಕೆಲವು ಸಾರಿ ಗುರುಗಳ ಮನೆ ಕಡೆ ಬಾರದಿದ್ದಾಗ 'ಲೋ ತಿಪ್ಪೇಸ್ವಾಮಿ ನೀನು ಅಕಾಡೆಮಿ ಅಧ್ಯಕ್ಷನಾದೆ ಅಂತಲೋ? ಏಕೆ ಬರಲಿಲ್ಲ? ನೋಡಿ ಬಹಳ ದಿನಗಳಾದವು' ಎಂಬ ವಾತ್ಸಲ್ಯದ ನುಡಿಗಳು-ಈಗ ಮತ್ತೆ ಕೇಳಲಾದೀತೆ ಎಂದೂ ಯಾರನ್ನೂ ಅವರು ಸ್ವಾರ್ಥಕ್ಕೆ ಬಳಸಿಕೊಂಡಿಲ್ಲ. ಪರರ ಹಣಕ್ಕೆ ಆಸೆ ಪಟ್ಟವರಲ್ಲ. ಅನ್ನದಾನಿ ಎಂದೇ ಜನಪ್ರಿಯರಾದವರು. "ನನಗೆ ವೆಂಕಟಪ್ಪ ಪ್ರಶಸ್ತಿ ಬಂದಾಗ ಅಮ್ಮನವರಿಗೆ ತಿಳಿಸಿದೆ. ಗುರುಗಳಿಗೆ ತಿಳಿಸಿ, ಬಂದು ಆಶೀರ್ವಾದ ಪಡೆಯುತ್ತೇನೆ" ಎಂದು ತಿಳಿಸಿದೆ. ಆದರೆ ಅವರ ಆರೋಗ್ಯ ಸರಿಯಿರಲಿಲ್ಲ. ನೆನಪಿನ ಶಕ್ತಿಯು ಮಾಸಿತ್ತು. ಮರುದಿನ ಗುರುಗಳು ತೀರಿಕೊಂಡ ಸುದ್ದಿ ಜಿ. ಜಿ. ಮಂಜುನಾಥ ತಿಳಿಸಿದರು. ನನ್ನ ಮೊಮ್ಮಗ ಚಿ॥ ಮೋಹನನ ಜೊತೆ ತಕ್ಷಣ ಧಾವಿಸಿದೆ. ದುಃಖದಲ್ಲಿದ್ದ ಮಿತ್ರ ಛಾಯಾಪತಿ ಓಡಿಬಂದು ತಬ್ಬಿಕೊಂಡರು.

ನನಗೂ ದುಃಖ ತಡೆಯಲಾಗಲಿಲ್ಲ. ನನ್ನ ಕಣ್ಣುಗಳು ತೇವವಾದವು. ಮನೆಯ ಒಳ

ಹೊರಗೆ ತುಂಬಿದ ಬಂಧು–ಬಳಗ ಅಭಿಮಾನಿಗಳ ಮೌನ ಮುಖಗಳು. ಗುರುಗಳ ಮೃತದೇಹ ಪಕ್ಕದಲ್ಲೇ ಶಾಂತಚಿತ್ತರಾಗಿ ಕುಳಿತಿದ್ದ ಗುರುಗಳ ಪತ್ನಿ. ಮಾತನಾಡಿಸಲು ಬಾಯಿ ಬರಲಿಲ್ಲ. ನೋಡಿ ಸಂಕಟವಾಯಿತು. ಬಾಳಸಂಗಾತಿಯಾಗಿ ಸೇವೆ ಸಲ್ಲಿದ ದೊಡ್ಡ ಜೀವ ಇದು. ಅಷ್ಟರಲ್ಲಿ ಸುಜನಾ ಬಂದರು. ಗುರುಗಳ ಮೃತದೇಹಕ್ಕೆ ವಂದಿಸಿದರು. ನನ್ನನ್ನು ನೋಡಿ 'ಬೆಳಗಿನಲ್ಲಷ್ಟೆ ನಿಮ್ಮನ್ನು ನೆನಪಿಸಿಕೊಂಡೆ' ಅಂದರು. ಅವರ ಕೈಕಾಲು ಕಂಪಿಸುತ್ತಿದ್ದವು. ಗುರುಗಳ ಸಹಧರ್ಮಿಣಿ ಕಡೆ ತಿರುಗಿದ ಸುಜನಾ 'ತಾಯಿ ನೀವೇ ಪುಣ್ಯಶಾಲಿಗಳು ನಿಮ್ಮ ತ್ಯಾಗದ ಜೀವನದಿಂದ ನನ್ನ ಈ ಗುರುಗಳನ್ನು ದೊಡ್ಡವರನ್ನಾಗಿ ಮಾಡಿದ್ದೀರಿ. ನೀವಿಲ್ಲದಿದ್ದರೆ ಅವರು ಈ ಎತ್ತರಕ್ಕೆ ಏರುತ್ತಿರಲಿಲ್ಲ. ಸಮಾಧಾನಚಿತ್ತರಾಗಿ' ಎಂದು ಸಾಂತ್ವನ ಹೇಳಿ ತಡವರಿಸಿಕೊಂಡೆ ಹೊರಬಂದಾಗ ನನ್ನ ಕಣ್ಣುಗಳು ಮಂಜಾದವು: ದಾರಿ ಕಾಣದಾಯಿತು! ನನ್ನ ಗುರು ಈಗಿಲ್ಲ. ಆದರೆ ಸಾವಿಗೆ ಮುನ್ನ ಮರಿ ಮೊಮ್ಮಗನ ಜನನ! ಹುಟ್ಟು ಸಾವುಗಳ ಅಂತರದ ಈ ವೈಚಿತ್ರ್ಯ ವಿಶಿಷ್ಟವಾದದ್ದು!



ಸತ್ಯವನ್ನೇ ಹೇಳಬೇಕು. ಕೋಪ ಮಾಡಿಕೊಳ್ಳಬಾರದು. ಯಾರಾದರೂ ಸ್ವಲ್ಪ ಕೇಳಿದರೂ ಹೆಚ್ಚಾಗಿಯೇ ಕೊಡಬೇಕು. ಈ ಮೂರನ್ನು ಮಾಡಿದರೆ ದೇವತೆಗಳ ಸಮೀಪಕ್ಕೆ ಹೋಗಬಹುದು.

ಪಾಪದಿಂದ ದುಃಖ ಹುಟ್ಟುತ್ತದೆ; ಪುಣ್ಯದಿಂದ ಸುಖ ಹುಟ್ಟುತ್ತದೆ.

—ಬುದ್ಧ

ಕರ್ಪೂರ ದೇಹಿ : ತ. ಸು. ಶಾಮರಾವ್

ಶ್ರೀಪಾದ ಭಟ್
ಜಾನಪದ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೫೭೦೦೦೬

ಪುರಾಣ, ಕಾವ್ಯಕಥೆಗಳು ನಮಗೆ ಬದುಕಿನ ಮೌಲ್ಯಗಳನ್ನು, ಆದರ್ಶಗಳನ್ನು ಉಪದೇಶಿಸುತ್ತವೆ. ಅವುಗಳಲ್ಲೊಂದು ಸೋದರ ಬಾಂಧವ್ಯ. ಶ್ರೀರಾಮ–ಭರತ ಅಥವಾ ಶ್ರೀರಾಮ–ಲಕ್ಷ್ಮಣರು ಈ ಮೌಲ್ಯದ ಪಾತ್ರ ಪ್ರತೀಕರು. ಇವರನ್ನು ಪುರಾತನರೆಂದು ಇಟ್ಟುಕೊಂಡರೆ ಆರ್ವಾಚೀನರು "ತಸುವೆಂ–ತಸುಶಾ" ಈ ಮೌಲ್ಯ ಪ್ರತೀಕಗಳಾಗುತ್ತಾರೆ. ಪುರಾಣಗಳು ನುಡಿವಂತೆ ಇರುವುದು ಕಷ್ಟವೇ ಸರಿ. ಅದರಲ್ಲೂ ಪ್ರಸ್ತುತ ಸಂದರ್ಭದಲ್ಲಿ ಅವರವರ ಮೇಲೇ ವಿಶ್ವಾಸ–ನಂಬಿಕೆಗಳು ಇರುವುದಿಲ್ಲ. ಅಂತಹುದರಲ್ಲಿ ಸೋದರಾದರ್ಶದ ಮಾತೆಲ್ಲಿಯದು? ಇದನ್ನು ಅಕ್ಷರಶಃ ಸಾಧಿಸಿದವರು, ಮೌಲ್ಯ ಮೆರೆಕೆಯಲ್ಲಿ ಅಣ್ಣನಿಗೂ ಹೊಯ್‌ಕೈ ಆದವರು ತ. ಸು. ಶಾಮರಾಯರು. ಸರಳಜೀವಿ, ವಿದ್ವಾಂಸ, ವಾಗ್ಮಿ, ದಾನಿ....ಎಲ್ಲಕ್ಕಿಂತ ಮಿಗಿಲಾಗಿ ಗುರು— 'ಗುರುಶ್ರೇಷ್ಠ'. ಕೇವಲ ಪಾಠ ಹೇಳಿ ಗುರು ಎನಿಸಿಕೊಳ್ಳುವುದು ಅಷ್ಟೇ ಗುರುಪದ ವ್ಯಾಪ್ತಿಯಲ್ಲ, ಬದುಕಲು....ಆದರ್ಶವಾಗಿ ಬದುಕಲು ಕಲಿಸುವವನು ಗುರು. ಅಸಂಖ್ಯ ಶಿಷ್ಯ ಬಳಗಕ್ಕೆ ಮಾತ್ರವಲ್ಲದೇ ಅನ್ಯರಿಗೂ ಊಟ–ವಸತಿ ನೀಡಿ ತಮ್ಮ ಜೀವನವನ್ನು ತಾವು ರೂಪಿಸಿಕೊಳ್ಳುವಂತೆ ಮಾಡಿ, ಅವರು ಮತ್ತೊಬ್ಬರಿಗೆ ಬದುಕಿನ ದಾರಿ ತೋರುವಂತೆ ಮಾಡುತ್ತಿದ್ದ ತ.ಸು.ಶಾ. ಅಂಥವರು ನಿಜಕ್ಕೂ ಗುರುಶ್ರೇಷ್ಠರು. ಗುರು ಎಂಬ ಪದಕ್ಕೆ ಘನತೆ ನೀಡಿದರಷ್ಟೇ ಅಲ್ಲ, ಅವರು ಅದರ ಅರ್ಥವ್ಯಾಪ್ತಿಯನ್ನು ಹಿಗ್ಗಿಸಿದರು. "ಶಾಮರಾಯರು ನನಗೆ ಮೇಷ್ಟ್ರು; ನನಗಷ್ಟೇ ಅಲ್ಲ ನನ್ನ ಮೇಷ್ಟ್ರಿಗೂ ಮೇಷ್ಟ್ರು; ನನ್ನ ಮೇಷ್ಟ್ರಿಗಷ್ಟೇ ಅಲ್ಲ ಅವರ ಮೇಷ್ಟ್ರಿಗೂ ಮೇಷ್ಟ್ರು! ಅವರು ಎಷ್ಟು ತಲೆಮಾರಿಗೆ, ಜನಕ್ಕೆ ಮೇಷ್ಟರಾಗಿದ್ದರು ಎಂಬುದನ್ನು ತಿಳಿಸಲು ಇದಿಷ್ಟೇ ಸಾಕು" ಎಂದು ಈ ತಲೆಮಾರಿನ ವಿದ್ವಾಂಸರಾದ ಡಾ॥ ಎಸ್. ಎಸ್. ತಾರಾನಾಥರು ಒಂದೆಡೆ ಹೇಳಿದ್ದಾರೆ. ಎಚ್. ತಿಪ್ಪೇರುದ್ರಸ್ವಾಮಿ, ಜೀ.ಶಂ. ಪರಮಶಿವಯ್ಯ, ಹಾ. ಮಾ. ನಾಯಕ, ಜಿ. ಎಸ್. ಶಿವರುದ್ರಪ್ಪ, ಪ್ರಭುಶಂಕರ್, ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ಅ. ರಾ. ಮಿತ್ರ, ಟಿ. ವಿ. ವೆಂಕಟಾಚಲ ಶಾಸ್ತ್ರಿ,....ಆರ್ಯಮಿತ್ರ, ನಜೀರ್‌ಸಾಬ್ ....ಹೀಗೆ ಶಿಕ್ಷಣ, ಸಾಹಿತ್ಯ, ವೈದ್ಯಕೀಯ, ಆಡಳಿತ, ರಾಜಕೀಯ ಈ ಹತ್ತು ಹಲವು ಕ್ಷೇತ್ರಗಳಲ್ಲಿನ ಶ್ರೇಷ್ಠಾತಿಶ್ರೇಷ್ಠರು ತ.ಸು.ಶಾ ಅವರ ಶಿಷ್ಯಬಳಗವೆಂದರೆ, ಇವರೆಲ್ಲ

ತ.ಸು.ಶಾ ಅವರ ಪಾಠಕೇಳಿ ಯಾವ ಕಾಲ ಆಗಿ ಹೋಗಿದ್ದರೂ ನಿರಂತರ ಒಡನಾಟದಲ್ಲಿದ್ದರೆಂದರೆ ಮೇಲೆ ಹೇಳಿದ ಗುರು ಘನತೆಯು ಅರಿವಾದೀತು.

ಪತಿಯ ಶಿಷ್ಯಕೋಟಿಗೆ ತಾಯಿ ಸಮಾನರಾದ ಶ್ರೀಮತಿ ಸುಬ್ಬಮ್ಮನವರು ಕಿರಿಯ ಮಗ ಸೂರ್ಯನಾರಾಯಣ, ನಿರ್ಮಿಸಿ ಕೊಟ್ಟ 'ಶ್ರೇಯಸ್'ನಲ್ಲಿ ಕುಳಿತು ತಮ್ಮ ದಾಂಪತ್ಯದ ನೆನಪಿನ ಬುತ್ತಿಯನ್ನು ಸಹೃದಯರಿಗೆ ಬಿಚ್ಚಿಡುತ್ತಾರೆ.

ತುಂಬ ಎಳವೆಯಲ್ಲಿ ಅವರಿಗೆ ವಿವಾಹವಾಯಿತು. ತ.ಸು.ಶಾ ಅವರ ಅಕ್ಕನ ಮಗಳೇ ತಮ್ಮ ಹತ್ತನೇ ವರ್ಷಕ್ಕೆ ತ.ಸು.ಶಾರನ್ನು ವಿವಾಹವಾಗಬೇಕಾಯಿತು. ಶಾಮರಾಯರಿಗೆ ಆಗ ಕೇವಲ ಹದಿನಾರು ವರ್ಷ ವಯಸ್ಸು. ಮದುವೆಯಾಗುವ ವೇಳೆಗೆ ಶಾಮರಾಯರ ಓದು ಮುಗಿದಿರಲಿಲ್ಲ. ತರುವಾಯವೂ ದಾಂಪತ್ಯದ ನಡುವೆ ಓದು ಮುಂದುವರೆಯಿತು. ಹಿರಿಯ ಮಗನಿಗೆ ವೆಂಕಣ್ಣಯ್ಯ ಎಂದು ಅಣ್ಣನ ನೆನಪಿಗೆ ಹೆಸರಿಸಿದರು. ಹಿರಿಮಗನ ಜನನ ಸಂದರ್ಭದಲ್ಲಿ ರಾಯರು ಶಿವಮೊಗ್ಗದಲ್ಲಿದ್ದರು. ಅಣ್ಣ ವೆಂಕಣ್ಣಯ್ಯನವರು ತಾವಿರುವವರೆಗೂ ತಮ್ಮನ ಸರ್ವ ಜವಾಬ್ದಾರಿಯನ್ನು ಹೊತ್ತರು. ಅವರು ಅಸ್ತಂಗತರಾದಾಗ ರಾಯರು ಧೃತಿಗೆಟ್ಟರೂ ಅಣ್ಣನ ಆದರ್ಶಗಳು ಧೈರ್ಯ ಹೇಳಿದವು. ಕೆಲಸದ ಜೊತೆ,ಜೊತೆಗೆ ಓದನ್ನು ಮುಂದುವರಿಸಿ ಪ್ರಾಥಮಿಕ ಶಾಲಾ ಶಿಕ್ಷಕ (೧೯೨೦)ರಾಗಿ ಮಾಧ್ಯಮಿಕ ಶಾಲೆಯ ಉಪಾಧ್ಯಾಯರಾಗಿ (೧೯೨೬) ಮಹಾರಾಜಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ (೧೯೪೦) ತರುವಾಯ ಗ್ರಂಥಪಾಲಕ, ಪ್ರಾಧ್ಯಾಪಕ, ಪ್ರಸಾರಾಂಗದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು. ರಾಯರು ಹಂತ, ಹಂತವಾಗಿ ಬದುಕಲ್ಲಿ ಮೇಲೇರಿದರೆಂಬುದಕ್ಕೆ ಅವರ ಗಾಥೆಯೇ ನಿದರ್ಶನವಾಗುತ್ತದೆ. ೧೯೩೧ರಲ್ಲಿ ರಾಯರು ಕನ್ನಡ ಎಂ.ಎ ಮಾಡಿದರು, ಓದಿನಲ್ಲಿ ಅಸಾಧಾರಣ ಪ್ರತಿಭಾವಂತರು. ಬಿ.ಎ.,ಎಂ.ಎ ಪದವಿಗಳಲ್ಲಿ ಸ್ವರ್ಣಪದಕ ವಿಜೇತರು, ಬದುಕಂತೂ ಚಿನ್ನವೇ. ಎದುರಿನ ಯಾವೊಂದು ಕೈಕೂಡ ರಾಯರತ್ತ ತೋರುಬೆರಳನ್ನು ಮುಂದೆ ಮಾಡಿದ್ದಿಲ್ಲ. ಬದಲಿಗೆ ಹತ್ತು ಬೆರಳನ್ನು ಜೋಡಿಸಿ ಮುಂದೆ ಮಾಡುತ್ತಿತ್ತು. ಈ ಬಗ್ಗೆ ತ.ವೆಂ. ಸ್ಮಾರಕ ಗ್ರಂಥಮಾಲೆಯ ಟಿ.ಎಸ್. ಛಾಯಾಪತಿಯವರು ಹೊರತಂದ ಶಿಷ್ಯರು, ಅಭಿಮಾನಿಗಳು ತಮ್ಮ ನುಡಿನಮನಸಲ್ಲಿಸಿದ 'ತ.ಸು. ಶಾಮರಾಯ: ಪೂಜ್ಯ ನೆನಪು' ಕೃತಿಯೆ ಸಾಕ್ಷಿ.

ರಾಯರ ಬಹುಪಾಲು ಶಿಷ್ಯೋತ್ತಮರು ರಾಯರ ಮನೆಯಲ್ಲೇ ಊಟ-ವಸತಿ ಪಡೆದವರು. ಒಟ್ಟಿನಲ್ಲಿ ಗುರುವಿನಿಂದ ಸರ್ವ ರೀತಿಯ "ಶಿಕ್ಷಣಾಶ್ರಯ" ಪಡೆದವರು. ಜಿ.ಎಸ್.ಎಸ್, ಎಸ್.ಎಸ್.ಎಲ್, ಪ್ರಭುಶಂಕರ್, ಜಿ. ಬ್ರಹ್ಮಪ್ಪ, ಸುಬ್ರಹ್ಮಣ್ಯಂ.... ಹೀಗೆ ಹಲವರು ಗುರುವಿನಿಂದ ಪಡೆದು, ಸಾರ್ಥಕವಾಗಿ ಗುರು ಹೆಮ್ಮೆ ಪಡುವಂತೆ ಸಮಾಜಕ್ಕೆ ಕೊಡುಗೆ ನೀಡಿ ಗುರುಕಾಣಿಕೆ ಅರ್ಪಿಸಿದವರು. ತ.ಸು.ಶಾ. ತಮ್ಮ ಶಿಷ್ಯರಿಂದ ಅಪೇಕ್ಷಿಸುತ್ತಿದ್ದುದೂ ಅದನ್ನೇ.

ಸಹಜವಾಗಿ ಪತ್ನಿಯಿಂದ ಅಥವಾ ಅನ್ಯರಿಂದ ರಾಯರ ಮೇಲೆ ಒಡವೆ ಇತ್ಯಾದಿ ವಸ್ತುಗಳ ಬೇಡಿಕೆಬಂದಾಗ "ಅವು ಯಾಕೆ

ಹೇಳು? ನಾಲ್ಕು ಜನಕ್ಕೆ ಊಟಹಾಕು, ಸಾಧ್ಯವಾದ ಸಹಾಯನೀಡು. ಅದೆ ಶ್ರೇಷ್ಠ, ಶಾಶ್ವತ. ಒಡವೆ ವೈಭೋಗಗಳು ಕ್ಷಣ ಭಂಗುರವಾದವು" ಎನ್ನುತ್ತಿದ್ದರು. ಪತಿಯ ಧೋರಣೆಗೆ ಪತ್ನಿ ಒಗ್ಗಿದರು. ರಾಯರ ಮನೆ ಯಲ್ಲಿ ಅಶನ, ಆಶ್ರಯ ಪಡೆದವರಿಗೆ ಲೆಖ್ಖವಿಲ್ಲ, ಅವರ ಮನೆಯನ್ನು 'ಅನ್ನಸತ್ರ', 'ಮಹಾಮನೆ' ಎಂದು ಹಲವರು ಕರೆದಿದ್ದಾರೆ. ಈ ಹಿರಿಮೆಗೆ ಕಾರಣರಾದವರು ಸುಬ್ಬಮ್ಮನವರು. ರಾಯರು ಕರ್ಪೂರ, ಇವರು ಶ್ರೀಗಂಧ. ಶಿಕ್ಷಣ ಸೇವೆಗೆ ಎರಡೂ ಸಿದ್ಧ, ಬದ್ಧ. ತಾಯಿ ಸರಸ್ವತಿಯ ಪೂಜಾ ವೈಭವವಾಗದೆ ಇನ್ನೇನು? ಮನೆಯಲ್ಲಿ ಊಟದ ವೇಳೆಗೆ ನಾಲ್ವರು ಇದ್ದರೆ (ಇವರನ್ನು ಸೇರಿಸಿ) ಇನ್ನೂ ಎಂಟು ಜನಕ್ಕೆ ಪಾಕ ಸಿದ್ಧವಿರುತ್ತಿತ್ತು. ಆಗ ಮಾತ್ರವಲ್ಲ ದಿನದ ಇಪ್ಪತ್ತನಾಲ್ಕು ಗಂಟೆಯೂ ತ.ಸು.ಶಾ ಮನೆಯಲ್ಲಿ ಪಾಕಸಿದ್ಧ ಇತ್ತು. ಮೂವರು ಗಂಡು ಇಬ್ಬರು ಹೆಣ್ಣುಮಕ್ಕಳನ್ನು ಹೊತ್ತು ಹೆತ್ತು, ಅವರನ್ನೂ—ಅಸಂಖ್ಯ ಶಿಷ್ಯ ಕೋಟಿಯ ಸಂಸಾರವನ್ನೂ ಬೆಳೆಸಿದ-ಬೆಳಗಿಸಿದ ಮಹಾಮಾತೆ ಇವರು. ಇದನ್ನು ನೆನೆದರೇ ಸುಸ್ತಾಗುತ್ತದೆ. ಜೀವಮಾನದ ಬಹುಭಾಗವನ್ನು ಇಂಥ ಸೇವೆಗೆ ಮುಡಿಪು ಮಾಡಿಕೊಂಡ ಸುಬ್ಬಮ್ಮನವರನ್ನು ತ.ಸು.ಶಾ. ಅವರೇ ಎದೆತುಂಬಿ ಗೌರವದಿಂದ ಅನ್ನಪೂರ್ಣೇಶ್ವರಿ ಈಕೆ ಎಂದು ಹೇಳುತ್ತಿದ್ದರು. ಬಂದವರಿಗೆ ಸಿದ್ಧಮಾಡಿ ಬಡಿಸುವುದು ಎಷ್ಟು ಕಷ್ಟನೆಂಬುದು ರಾಯರಿಗೂ ತಿಳಿದಿತ್ತು. ಅಗತ್ಯವಾದ ಆಹಾರ ಸಾಮುಗ್ರಿಗಳನ್ನು ಅವರೇ ತಂದು ಹಾಕುತ್ತಿದ್ದರು. ಕೆಲವೊಮ್ಮೆ ಅರ್ಧ ಅಡುಗೆ ಆದಾಗ ಕೊರೆಯಾದ ಪದಾರ್ಥಗಳನ್ನು ಶಿಷ್ಯರಿಂದ ಯಾ ತಾವೇ ತರುತ್ತಿದ್ದರು. ಅಡುಗೆಯ ಕಷ್ಟ ವನ್ನು ಸ್ವತಃ ಅನುಭವಿಸಿ ಸದಾ ಇದಕ್ಕೇ ಮೀಸಲಾದ ಭಾರತೀಯ ಸ್ತ್ರೀಯ ಬಗ್ಗೆ ವಿ.ಸೀ. 'ಪಂಪಾಯಾತ್ರೆ'ಯಲ್ಲಿ ಹೇಳಿದ ಮಾತು ಸುಬ್ಬಮ್ಮನವರನ್ನು ಕಂಡಾಗ ತಟ್ಟನೇ ಜ್ಞಾಪಕವಾಗುತ್ತದೆ. ಈ ಕಾರ್ಯ ಭಾರದಲ್ಲಿ ತೊಡಗಿಕೊಂಡ ಮೇಲೆ ಸುಬ್ಬಮ್ಮ ನವರು ಓದಿ ಪದವಿ ಪಡೆಯಲಾಗಲಿಲ್ಲ. ಆದರೆ ವಿದ್ಯಾವಂತೆಯಾದರು. ರಾಯರು ಸ್ವತಃ ಓದಿ ಅನೇಕ ಕಾವ್ಯ ಸ್ವಾರಸ್ಯವನ್ನು ತಿಳಿಸುತ್ತಿದ್ದರು, ಇವರೂ ಆಗಾಗ ಬಿಡುವಿನಲ್ಲಿ (?!) ಓದುತ್ತಿದ್ದರಂತೆ, ಪತಿ ಭಾಗ ವಹಿಸುವ ಕಾರ್ಯಕ್ರಮಗಳಿಗೆ ಅವರ ದಿನ ಚರಿಯಿಂದಾಗಿ ಬಿಡುವಾಗುತ್ತಿರಲಿಲ್ಲ. ಆದರೆ ತಾವು ಉಂಡ ಸವಿಯನ್ನು, ತಮ್ಮ ಅನುಭವ ವನ್ನು ರಾಯರು ಮನೆಗೆ ಹಿಂತಿರುಗಿದ ಕೂಡಲೇ ಸವಿವರವಾಗಿ ಪತ್ನಿಗೆ ಹೇಳದೆ ಬಿಡುತ್ತಿರಲಿಲ್ಲ. ತಮಗೆ ತಿಳಿದದ್ದು ಪತ್ನಿಗೂ ತಿಳಿದಿರಬೇಕೆಂಬ ಗುಣ ಅವರದು.

ಆದರೆ ಕೊಡುಗೈ ವಿಷಯದಲ್ಲಿ ಪರಿಸ್ಥಿತಿ ತೀರ ಬದಲಾಗಿತ್ತು. ಅವರು ನೀಡಿದ ಬಗ್ಗೆ ಇನ್ನೊಬ್ಬರಿಗೆ (ಪತ್ನಿಯನ್ನೂ ಸೇರಿಸಿ) ತಿಳಿಯುತ್ತಿರಲಿಲ್ಲ. ಅವರು ನೀಡಿದ್ದು ಅವರ ಎಡಗೈಗೆ ತಿಳಿಯುತ್ತಿರಲಿಲ್ಲ ಎನ್ನುವವ ರಿದ್ದಾರೆ. ದಾನದ ಬಗ್ಗೆ ತ. ಸು. ವೆಂಕಣ್ಣಯ್ಯನವರ ಮನೋಧರ್ಮ ಹೇಗಿತ್ತೆಂದು ಒಮ್ಮೆ ಕೇಳಿದಾಗ—"ಅ ಮಹಾಮನುಷ್ಯ. ತನ್ನಲ್ಲಿಲ್ಲದಿದ್ದರೂ ಸಾಲ ಮಾಡಿ ನೀಡುವ ಧೈರ್ಯ-ಧ್ಯೇಯ ಅವರದು. ಆ ಗುಣ ನನಗೆಲ್ಲಿ ಬಂತು? ಐದು ಸಾವಿ

ನನ್ನಬಳಿ ಇದ್ದರೆ ಒಂದು ಸಾವಿರ ನೀಡುವ ಮನುಷ್ಯ ನಾನು" ಎಂದರಂತೆ ಶಾಮರಾಯರು.

ನೆಂಟರಿಗೆ, ಪರಿಚಿತರಿಗೆ 'ಶಾಮಣ್ಣ' ಯಾಗಿದ್ದ ರಾಯರು ಒಮ್ಮೊಮ್ಮೆ ವೃಥಾ ಸಿಡುಕುತ್ತಿದ್ದುದು ಉಂಟು. ಶಿಷ್ಯರನ್ನು, ಮಕ್ಕಳನ್ನು ಕಂಡಾಗ ಇವರೂ ಮಕ್ಕಳಂತಾಗಿಬಿಡುತ್ತಿದ್ದರು. ಶಿಷ್ಯರೇ ನನ್ನ ಆಸ್ತಿ,ಅವರನ್ನು ಮಕ್ಕಳೆಂಬಂತೆಯೇ ಕಾಣುವುದು ಗುರುವಿಗೆ ಭೂಷಣ ಎಂಬ ನಂಬಿಕೆ ರಾಯರದು. ಇದನ್ನು ಸ್ವತಃ ಮಾಡಿ ತೋರಿದರು. ಶಿಷ್ಯರನ್ನು "ಮಗೂ" ಎಂದು ಚೆಂದಕ್ಕೆ ಅವರು ಕರೆಯುತ್ತಿರಲಿಲ್ಲ. ಪ್ರಿಯ ಶಿಷ್ಯರಿಗೆ ಸಿಗದಿದ್ದುದು ಏನೂ ಸ್ವತಃ ಮಕ್ಕಳಿಗೂ ದೊರಕಲಿಲ್ಲ. ನಾವು ಅವರಿಂದ ಬೇರೆಯಾಗಿರಲಿಲ್ಲವೆಂಬ ಶಿಷ್ಯರ ನುಡಿನಮನದಲ್ಲಿನ ಮಾತುಗಳು ರಾಯರ ನಿಷ್ಕಲ್ಮಶ ಮನಸ್ಸನ್ನು, ಔದಾರ್ಯವನ್ನು ತೋರಿಸುತ್ತದೆ. ಯಾರಲ್ಲೂ ಅವರು/ಅವರ ಸಂಸಾರದವರು ಜಾತಿಯನ್ನು ಪರಿಗಣಿಸುತ್ತಿರಲಿಲ್ಲ. ನನಗೆ ಗುಣ ಮುಖ್ಯ ಎನ್ನುವವರು ಅವರು. "ಯಾರ ಜಾತಿಯನ್ನಾದರೂ ನಾನು ಎಣಿಸಿದ್ದಾದರೆ ನನ್ನ ನಾಲಿಗೆ ಬಿದ್ದುಹೋಗಲಿ" ಎಂದೇ ಅವರು ನುಡಿಯುತ್ತಿದ್ದರಂತೆ. ಇದಕ್ಕೆಉದಾಹರಣೆಯಾಗಿ ಜಿ.ಎಸ್.ಎಸ್., ಪ್ರಭುಶಂಕರ್ ತಮ್ಮ ಅನುಭವವನ್ನು ದಾಖಲಿಸಿದ್ದಾರೆ. ನಜೀರ್‌ಸಾಬ್, ಬಂಗಾರಪ್ಪ ಇನ್ನು ಮುಂತಾದ ಶಿಷ್ಯರೊಂದಿಗಿನ ಸಂಬಂಧ ಎಲ್ಲರಿಗೂ ತಿಳಿದದ್ದೆ.

ಶಾಮರಾಯರ ಸಾಹಿತ್ಯ ಸೃಷ್ಟಿ ಅಗಾಧವಾದುದು. ಅವರ ನೆನಪು, ಪಾಠದ ವೈಖರಿಗಳ ಬಗ್ಗೆ ಶಿಷ್ಯರು ಸಾಕಷ್ಟು ಹೇಳಿದ್ದಾರೆ. ಅವರ ಸಾಹಿತ್ಯ ಸೃಷ್ಟಿಯ ಹಿಂದಿನ ಅಂಶ ಅಷ್ಟಾಗಿ ತಿಳಿದಿಲ್ಲ. ರಾಯರು ಓದುವಷ್ಟು, ಉಪನ್ಯಾಸಮಾಡುವಷ್ಟು ಸುಲಲಿತವಾಗಿ ಬರೆಯುತ್ತಿರಲಿಲ್ಲ, ಹಾಗಾಗಿ ತಮ್ಮ ಶಿಷ್ಯರನ್ನು ಬಳಸಿಕೊಂಡು ಅವರಿಂದ ಬರೆಸುತ್ತಿದ್ದರು. ಕೆಲವೊಮ್ಮೆ ಅಂಥ ಶಿಷ್ಯರನ್ನೂ ತಮ್ಮೊಂದಿಗೆ ಲೇಖಕ ಹಾಗೂ ಸಂಪಾದಕ ಅಥವಾ ಸಹ ಸಂಪಾದಕರೆಂದು ಶಿಷ್ಯರಿಗೆ ಅಂಥಾ ಗ್ರಂಥಗಳಲ್ಲಿ ಸ್ಥಾನವನ್ನೂ ನೀಡಿದರು. ಕಥಾಭಾರತ, ಮೂರು ತಲೆಮಾರು ಕೃತಿಗಳನ್ನು ಗಿರಿಜಾ ಎಂಬ ಬಡ ಹೆಣ್ಣುಮಗಳಿಂದ ಹಸ್ತಪ್ರತಿ ಮಾಡಿಸಿದರು. ಈಕೆ ಓದುವ ಆಸೆ ಇದ್ದರೂ ಬಡತನದ ಕಾರಣದಿಂದ ಓದಲಾಗದೆ ಇದ್ದವಳು. ಬೆಳಿಗ್ಗೆ ಹತ್ತು ಗಂಟೆಯಿಂದ ಸಂಜೆ ಐದರ ವರೆಗೆ ಕಛೇರಿಯ ಗುಮಾಸ್ತೆಯಂತೆ ಬಂದು, ರಾಯರ ಮನೆಯಲ್ಲೇ ಇದ್ದು, ಊಟ, ಓದು ಎಲ್ಲವುಗಳ ಜೊತೆ ಹಸ್ತಪ್ರತಿ ತಯಾರಿಸಿದಳು. ಈ ಶಿಷ್ಯೆಯ ಭಾಷೆ, ಸಾಹಿತ್ಯದ ಮೇಲಿನ ಹಿಡಿತ ಬಲವಾಯ್ತು. ಆಕೆ ಈಗ ಬೆಂಗಳೂರಿನಲ್ಲಿ ಕನ್ನಡ ಶಿಕ್ಷಕಿ, ರಾಯರ ಹೆಸರಲ್ಲಿ ದಿನಾ ದೀಪಹಚ್ಚುವ ಪರಿಪಾಠ ಈಕೆಗೆ. ತನ್ನ ಸುಖೀ ಸಂಸಾರದ ದೇವರೇ ರಾಯರೆಂಬ ಭಾವನೆ ಆಕೆಯದು.

ರಾಯರದು ಮಗುವಿನಂಥ ಮನಸ್ಸು. ಶಿಷ್ಯರು, ಮಕ್ಕಳನ್ನು ಕಂಡಾಗ ಈ ಮನಸ್ಸು ಉಲ್ಲಸಿತವಾಗುತ್ತಿತ್ತು. ಕಿರಿಯ ಮಗಳು ಲಕ್ಷ್ಮೀದೇವಿಯ ಮೇಲೆ ಅವರಿಗೆ ಅಕ್ಕರೆ ಜಾಸ್ತಿ. ಆಕೆ ಕಛೇರಿಯಿಂದ ಬರುವುದನ್ನೇ ಕಾದಿದ್ದು, ಪಗಡೆಗೆ ಎಲ್ಲವನ್ನೂ ಅಣಿಗೊಳಿಸಿಕೊಂಡು, 'ಬಾ ಮಗು ತುಂಬ ಬೇಸರ ಇಬ್ಬರೂ ಆಡುವಾ'—ಎಂದು ಕರೆಯುತ್ತ

ಎಳೆಯರಲ್ಲಿ ಎಳೆಯರಾಗಿಬಿಡುತ್ತಿದ್ದರಂತೆ. ಮೂರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಎಲ್ಲರೂ ಸ್ನಾತಕೋತ್ತರ ಪದವೀಧರರಾಗುವಂತೆ ಮಾಡಿದರು, ಶಿಷ್ಯರನ್ನು—ಮಕ್ಕಳನ್ನು (ಎರಡೂ ಒಂದೇ!) ತಮ್ಮ ತಮ್ಮ ಜೀವನದ ದಾರಿ ಕಾಣುವಂತೆ ಅಣಿಗೊಳಿಸಿದರು. ಯಾರೇ ಖಿನ್ನ ಮನಸ್ಕರಾಗಿದ್ದರೂ ಆದಕ್ಕೆ ಕಾರಣ ಏನೇ ಇರಲಿ, ತಮ್ಮಿಂದ ಪರಿಹಾರ ದೊರಕುವ ಸಾಧ್ಯತೆ ಇರಲಿ ಬಿಡಲಿ ಉದಾರವಾಗಿ "ನಾನಿಲ್ಲವೇ ಬಿಡು ಮಗೂ" ಅನ್ನುತ್ತಿದ್ದರಂತೆ. ಅವರ ಹೇಳಿಕೆಯ ಆ ಶೈಲಿಯೇ ಖಿನ್ನ ಮನಸ್ಕರ ಚಿಂತೆಯನ್ನು ದೂರ ಮಾಡುತ್ತಿತ್ತು.

ಜಿ. ಎಸ್. ಶಿವರುದ್ರಪ್ಪನವರು ರಾಯರನ್ನು ಕುರಿತು 'ಎದೆತುಂಬಿ ಹಾಡಿದೆನು ಪ್ರಸಿದ್ಧ ಗೀತೆಯನ್ನು ಬರೆದಿದ್ದಾರೆ. ಶಾಮರಾಯರಿಗೆ ವಿಶಿಷ್ಟ ಅಭಿಮಾನಿಗಳೂ ಇದ್ದರು. ಅಂಥವರಲ್ಲಿ ಸೇತೂರಾಂ ಒಬ್ಬರು. ಬ್ಯಾಂಕ್ ಅಧಿಕಾರಿಯಾಗಿದ್ದ ಇವರು ಸಾಹಿತ್ಯ ಪ್ರೇಮಿ. ರಾಯರ ಪ್ರತೀ ಹುಟ್ಟು ಹಬ್ಬಕ್ಕೂ ಅವರ ಮೇಲೆ ತಾವು ಬರೆದಿದ್ದ ಕವನವನ್ನು ಉಡುಗೊರೆಯಾಗಿ ನೀಡುವುದು ಸೇತೂರಾಮರ ಪದ್ಧತಿಯಾಗಿತ್ತು. ಇಂಥ ಕವನಗಳನ್ನು ರಾಯರು ಕಟ್ಟುಕಟ್ಟಿಸಿ ಇಟ್ಟುಕೊಂಡಿದ್ದಾರೆ. ಇನ್ನು ಕೆಲವರಿಗೆ ತಾವು ಬರೆದ ಮೊದಲ ಕವನ, ಪ್ರಬಂಧಗಳನ್ನು ತ.ಸು.ಶಾ ಅವರ ಮುಂದೆ ಮೊತ್ತ ಮೊದಲು ಓದದಿದ್ದರೆ ಸಮಾಧಾನವಿಲ್ಲ. ಅನೇಕ ಸಂಘ ಸಂಸ್ಥೆಗಳು ರಾಯರನ್ನು ಅಭಿನಂದಿಸಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟೊರೇಟ್, ಚಾವುಂಡರಾಯ ಪ್ರಶಸ್ತಿ ಇತ್ಯಾದಿಗಳು, ಅವುಗಳಿಗೆಲ್ಲ ಗರಿಗಳು ಅಷ್ಟೆ. ಅಭಿಮಾನಿಗಳ ಪ್ರೀತಿಗೆ 'ಸ್ವಸ್ತಿ' ಅಭಿನಂದನಾ ಗ್ರಂಥ ಸಾಕ್ಷಿಯಾಗಿದೆ.

ಸಾಹಿತ್ಯಕ್ಕೆ ಮಾತ್ರವಲ್ಲ ಸಮಾಜಕ್ಕೆ ರಾಯರು ಸಾಕಷ್ಟು ಸೇವೆಯನ್ನು ಮಾಡಿದ್ದಾರೆ. ಅಗಡಿ ಆಶ್ರಮ, ಮಲ್ಲಾಡಿಹಳ್ಳಿ ಆಶ್ರಮ, ಗುಬ್ಬಿ ಚಿದಂಬರಾಶ್ರಮ ಮುಂತಾದ ಸೇವಾ ಸಂಸ್ಥೆಗಳಿಗೆ ಬಿಡುವಿಲ್ಲದೆ ದುಡಿದರು, ಬೆಂಗಳೂರು, ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಅಣ್ಣನ ಹೆಸರಿನಲ್ಲಿ ಸ್ಥಾಪಿಸಿದ ಗ್ರಂಥಮಾಲೆಯಿಂದ ಬಂದ ಹಣವನ್ನು ಅಣ್ಣನ ಹೆಸರಿನಲ್ಲೇ ದತ್ತಿ ಸ್ಥಾಪಿಸಿದರು. ಬಯಸಿಬಂದವರಿಗೆ ಸ್ವತಃ ಅಂಜುವಷ್ಟು ದಾನಮಾಡಿದರು, ಹಣ ವಾಪಸಾಯಿತೇ ಸಂತೋಷ. ಇನ್ನೊಬ್ಬರಿಗೆ ಅದನ್ನು ನೀಡಿದರು, ಇಲ್ಲವೇ ಕೃಷ್ಣಾರ್ಪಣ ಎನ್ನುತ್ತಿದ್ದರು.

ಮನೆಯ ಹೊರಗೆ ಅದೆಂಥ ಪ್ರೀತಿ—ಅಭಿಮಾನಗಳ ಶ್ರೀಮಂತಿಕೆ ರಾಯರಿಗೆ ಎಷ್ಟು ಇತ್ತೋ, ಅಷ್ಟೇ ಸರಳವಾಗಿ ಮನೆಯೊಳಗಿನ ಮನದೊಳಗಿನ ವಾತಾವರಣವೂ ಇತ್ತು. ರಾಯರಿಗೆ ನೀಡಲು ಶಿಷ್ಯವೃಂದ ಬಯಸಿ ಬಂದರೂ ತಮಗಾಗಿ, ತಮ್ಮ ಮಕ್ಕಳಿಗಾಗಿ ಏನೊಂದನ್ನೂ ಬಯಸದೆ ಶಿಷ್ಯರಿಂದ ಸಮಾಜಕ್ಕೆ, ಹತ್ತು ಸಮಸ್ತರಿಗೆ ಉಪಕಾರವಾಗುವಂಥ ಕಾರ್ಯವನ್ನು ಮಾಡಿಸಿದರು. ಈ ಕಾರಣಕ್ಕಾಗಿಯೇ ಅವರಲ್ಲಿ ಭಯ ಸಹಜವಾದ ಗೌರವ ಶಿಷ್ಯರಿಗೆ—ಮಕ್ಕಳಿಗೆ ಹುಟ್ಟುತ್ತಿತ್ತು.

ತಮ್ಮ ಜಾಯಮಾನವಾದ ಗುರು ಕೆಲಸಕ್ಕೆ ರಾಯರೆಂದೂ ಬಿಡುವುಕೊಟ್ಟವ

ರಲ್ಲ. ಕೊನೆಗಾಲದ ಎರಡು ವರ್ಷಗಳಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣದ ಅನೇಕ ವಿದ್ಯಾರ್ಥಿಗಳನ್ನು ಮನೆಗೇ ಕರೆಸಿ, ಮಲಗಿದಲ್ಲೇ ಅವರಿಂದ ಓದಿಸಿ ಕೇಳಿಸಿಕೊಂಡು ಅರ್ಥಹೇಳಿ, ಟಿಪ್ಪಣಿ ಹಾಕಿಸುತ್ತಿದ್ದರು, ಹೆಚ್ಚೆಚ್ಚು ಓದಿ ಸಾಧಿಸಲು ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿದ್ದರು.

ರಾಯರು ಬಿಳಿ ಕಸೆ ಅಂಗಿ, ಬಿಳಿ ಪಂಚೆಯಲ್ಲೇ ಆಯಸ್ಸು ಕಳೆದು ಕೆರೆಯನೀರನು ಕೆರೆಗೆ ಚೆಲ್ಲು ಎನ್ನುವಂತೆ ಗಳಿಸಿದ ಹಣ, ತಿಳಿದ ವಿದ್ಯೆಯನ್ನು ಸಮಾಜಕ್ಕೆ ಮರಳಿಸಿ ಧನ್ಯರಾದರು. ರಾಮಕೃಷ್ಣರ ಪರಮ ಭಕ್ತರಾಗಿದ್ದ ತ.ಸು.ಶಾ ನಿತ್ಯವೂ ತಮ್ಮೊಂದಿಗೆ ಮಕ್ಕಳೂ ಪ್ರಾರ್ಥನೆ ಮಾಡುವ ಕ್ರಮವನ್ನು ರೂಢಿಸಿದ್ದರು. ಕಡೆಕಾಲದಲ್ಲಿ ಆತ್ಮಸಂಯಮಕ್ಕಾಗಿ ಹಾಸುಗೆಯಲ್ಲೇ ಗಂಟೆಗಟ್ಟಲೆ ಪದ್ಮಾಸನ ಹಾಕಿ ಪ್ರಾರ್ಥನೆ–ಧ್ಯಾನ ಮಾಡುತ್ತಿದ್ದ ಇವರನ್ನು ಪ್ರಿಯ ಶಿಷ್ಯ ಹಾಮಾನಾ ಅವರು "ಮಹರ್ಷಿ" ಎಂದು ಉದ್ಗರಿಸಿದರಂತೆ.

ಊರಿನಲ್ಲಿದ್ದ ಜಮೀನನ್ನು ದೇವಸ್ಥಾನವೊಂದರ ಅರ್ಚಕರ ಜೀವನಕ್ಕೆ ಉಂಬಳಿ ನೀಡಿ, ಇದ್ದ ಒಂದು ಸೈಟನ್ನೂ ಚಿಕ್ಕಪ್ಪನ ಕಷ್ಟಕ್ಕೆ ನೆರವಾಗುವಂತೆ ಮಾರಿ ನಿರುಮ್ಮಳರಾದರು. ತಾವು ಸಂಪಾದಿಸಿದ ಅಗಾಧ ಜನಪ್ರೀತಿಯ ಶ್ರೀಮಂತಿಕೆ, ಸರಳ ಮೌಲ್ಯಗಳನ್ನು ಸಂಸಾರಕ್ಕೆ ಬಿಟ್ಟು ಕಳೆದ ಆಗಸ್ಟ್ ೨೧ರಂದು ಶಾಮರಾಯರು ಅಸ್ತಂಗತರಾದರು. ಆದರೇನಂತೆ, ಡಿ.ಎಲ್.ಎನ್, ಬಿ.ಎಂ.ಶ್ರೀ, ತೀ.ನಂ.ಶ್ರೀ, ಟಿ.ಎಸ್.ವಿ, ಕುವೆಂಪು, ಮುಂತಾದ ಶ್ರೇಷ್ಠರಿಂದ ತಾವು ಕಲಿತು ಹಾಮಾನಾ, ಜಿ.ಎಸ್.ಎಸ್, ಈ ಮುಂತಾದ ಗುರುಗಳನ್ನು ಸೃಷ್ಟಿಸಿ ಹೋಗಿದ್ದಾರೆ. ಸುತ್ತೆಲ್ಲ ಬೆಳಕುಬೀರಿ ಕಂಪನ್ನಷ್ಟೇ ಬಳಸಿಹೋಗುವ ಕರ್ಪೂರದ ಬದುಕು ಶಾಮರಾಯರದು. ತಾವು ತಾಯಿ ಸರಸ್ವತಿಯ ಮಡಿಲೇರಿ ತಮ್ಮ ತೊಡೆಯ ಮೇಲೆ ಶಿಷ್ಯಕೋಟಿಯನ್ನು ಅವರು ಅಕ್ಕರೆಯಿಂದ ಕಳ್ಳಿರಿಸಿಕೊಂಡರು.

ಶಾಮರಾಯರ ಜೀವನ : ಇಣುಕು ನೋಟ

ಜನನ : ೧೨ ಜೂನ್ ೧೯೦೬.

ಜನ್ಮಸ್ಥಳ : ತಳುಕು ಗ್ರಾಮ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ.

ವಿವಾಹ : ೧೯೨೨ ಸುಬ್ಬಮ್ಮನವರೊಂದಿಗೆ.

ವಿದ್ಯಾಭ್ಯಾಸ : ಪ್ರಾಥಮಿಕ ಶಿಕ್ಷಣ ಊರಿನಲ್ಲಿ.
೧೯೨೮ ಬಿ.ಎ ಪದವಿ, ಪ್ರಥಮದರ್ಜೆ.
ಆನರ್ಸ್‌ನಲ್ಲಿ ಕುಲಪತಿಗಳ ಸ್ವರ್ಣಪದಕ, ಮೈಸೂರು ವಿ.ವಿ. ದಿಂದ.
೧೯೩೧ ಎಂ.ಎ ಪ್ರಥಮದರ್ಜೆ, ಕೇಣಿ ಸಿದ್ಧಪ್ಪ ಸ್ಮಾರಕ ಸ್ವರ್ಣಪದಕ ಮೈಸೂರು ವಿ.ವಿ.

ವೃತ್ತಿ: ೧೯೨೦ ಪ್ರಾಥಮಿಕ ಶಾಲಾ ಶಿಕ್ಷಕ.
೧೯೨೬ ಮಾಧ್ಯಮಿಕ ಶಾಲಾ ಉಪಾಧ್ಯಾಯರು.
೧೯೪೦ ಮಹಾರಾಜಾ ಕಾಲೇಜಿನಲ್ಲಿ ಉಪನ್ಯಾಸಕ, ತರುವಾಯ ಗ್ರಂಥಪಾಲಕ, ಪ್ರಸಾರಾಂಗದ ನಿರ್ದೇಶಕ, ಪ್ರಾಧ್ಯಾಪಕರಾಗಿ ನಿವೃತ್ತಿ.

ಪ್ರಶಸ್ತಿ/ಬಹುಮಾನಗಳು: ೧೯೨೬ ವರದಾಚಾರ್ಯ ಸ್ಮಾರಕ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ.
೧೯೩೮ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸಣ್ಣ ಕಥಾ ಸ್ಪರ್ಧೆಯಲ್ಲಿ ಬಹುಮಾನ.
೧೯೬೯—೭೧, ೭೨, ೭೪, ೭೫, ೭೮ ಈ ವರ್ಷಗಳಲ್ಲಿ ಅನೇಕ ಸಂಘ–ಸಂಸ್ಥೆ ಮಠ ಮಾನ್ಯಗಳಿಂದ ಬಿರುದು-ಸನ್ಮಾನಗಳು.
೧೯೮೪ ಅಭಿಮಾನಿಗಳಿಂದ 'ಸ್ವಸ್ತಿ' ಗ್ರಂಥಸಮರ್ಪಣೆ.
೧೯೮೫ ಕರ್ನಾಟಕ ರಾಜ್ಯ ಪ್ರಶಸ್ತಿ.
೧೯೮೭ 'ಮೂರು ತಲೆಮಾರು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಶಸ್ತಿ.
೧೯೯೨ ಮೊದಲ ಚಾವುಂಡರಾಯ ಪ್ರಶಸ್ತಿ.
ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟೋರೇಟ್ ಪದವಿ.

ಸಾಹಿತ್ಯ ಸೃಷ್ಟಿ/ಸೇವೆ:

ಕರ್ನಾಟಕ ಶಬ್ದಾನುಶಾಸನಂ, ಕುಮಾರವ್ಯಾಸಭಾರತದ ನಿಘಂಟು, ಕೇಶಿರಾಜ ವಿರಚಿತ ಶಬ್ದಮಣಿ ದರ್ಪಣಂ, ಜೈನ ಪರಿಭಾಷಾ ರತ್ನಕೋಶ, ವ್ಯಾಕರಣ ಸಾರ, ಆದಿ ಪುರಾಣ ದೀಪಿಕೆ.

ಕನ್ನಡ ನಾಟಕ, ಕನ್ನಡ ಸಾಹಿತ್ಯ ಚರಿತ್ರೆ ಒಂದು ಸಮೀಕ್ಷೆ, ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ, ಪಂಪ, ರತ್ನಾಕರವರ್ಣಿ, ಮುದ್ದಣ, ವಚನರಾಮಾಯಣ, ವಚನ ಭಾಗವತ, ವಚನ ಭಾರತ.

ಅಜಿತ ಪುರಾಣ, ಅರಣ್ಯಪರ್ವ, ಆದಿಪರ್ವ, ಉದ್ಯೋಗಪರ್ವ, ಸಭಾಪರ್ವ ಸಂಗ್ರಹಗಳು, ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಭರತೇಶ ವೈಭವ–ಕಾವ್ಯ ಸಂಗ್ರಹಗಳು, ಮಹಾಶ್ವೇತೆ, ವಿರಾಟಪರ್ವ ಸಂಗ್ರಹ.

ಆಚಣ್ಣ ಕವಿ ವಿರಚಿತ ವರ್ಧಮಾನ ಪುರಾಣ. ಸುಕುಮಾರ ಚರಿತೆ, ಹರಿಹರನ ರಗಳೆ, ಉಡುತಡಿಯ ಅಕ್ಕಮಹಾದೇವಿಯ ರಗಳೆ–ಇವುಗಳ ಸಂಪಾದನೆ.

ನಂದನವನ, ಸವಿನೆನಪು :– ಅಭಿನಂದನಾ ಗ್ರಂಥಗಳ ಸಂಪಾದನೆ.

ಮಂಕನ ಮಡದಿ (ಕಾದಂಬರಿ), ಕಥಾವಲ್ಲರಿ (೧ ಮತ್ತು ೨), ಮಹಾವೀರ, ಶಿವಶರಣಕಥಾ ರತ್ನಕೋಶ.


ಗುರುನಾನಕ್, ಭದ್ರಾಚಲ ರಾಮದಾಸ ಶ್ರೀ ತಪಸ್ವೀಜಿಮಹಾರಾಜ್, ಸ್ವಾಮಿ ಶ್ರೀ ಚಿದಂಬರ, ಪ್ರಾಧ್ಯಾಪಕ ವೆಂಕಣ್ಣಯ್ಯ ಮೂರು ತಲೆಮಾರು, ನೆನಪಿನ ಅಲೆಗಳು, ಲವ–ಕುಶ, ಶ್ರೀ ಶೇಷಾಚಲರು.

ತಿರುಕ ಮತ್ತು ಮಹಾರಾಜ, ಭಾರತದಇತಿಹಾಸ ಪಾಠಗಳು ಹೆಂಗೆ ಮತ್ತು ಶಿಶುಪೋಷಣೆ, ಅನುವಾದ ಕೃತಿಗಳು.

ಭಜಗೋವಿಂದಂ, ಮಾದರಿ ಶಿಕ್ಷಣ, ಪರಿವರ್ತನ ಶೀಲ ಸಾಮಾಜಕ್ಕೆ ಶಾಶ್ವತ ಮೌಲ್ಯಗಳು ಇತ್ಯಾದಿ ಸಂಕೀರ್ಣ ಕೃತಿಗಳನ್ನು ಶಾಮರಾವ್ ನೀಡಿದ್ದಾರೆ.

ಭಾಷೆ : ಕನ್ನಡ, ತೆಲುಗು, ಸಂಸ್ಕೃತ ಮತ್ತು ಇಂಗ್ಲಿಷ್‌ಗಳಲ್ಲಿ ಪ್ರಭುತ್ವ. ತಮಿಳು, ಬಂಗಾಳಿ ಭಾಷೆಯಲ್ಲಿ ಸಾಕಷ್ಟು ಕೃಷಿ.

ಮರಣ : ೨೧ ಆಗಸ್ಟ್ ೧೯೯೮, ಮೈಸೂರು.



ಎಲ್ಲರೂ ಅಣ್ಣತಮ್ಮಂದಿರು. ಯಾರು ಯಾರನ್ನೂ ದ್ವೇಷಿಸಬಾರದು. ಹಸಿದವರಿಗೆ ಅನ್ನ ಕೊಡಬೇಕು. ರೋಗಿಗಳಿಗೆ ಆರೈಕೆ ಮಾಡಬೇಕು. ಎಲ್ಲ ವಸ್ತುಗಳೂ ದೇವರಿಂದ ಆದದ್ದು. ಆದ್ದರಿಂದ ಎಲ್ಲ ವಸ್ತುಗಳನ್ನು ಪ್ರೀತಿಸಬೇಕು.

—ಮುಹಮದ್ ಪೈಗಂಬರ್

ಜ್ಞಾನದಾಯಕ ದೀಪಾವಳಿ

ಪ್ರೊ|| ಕೆ. ಕೇಶವಮೂರ್ತಿ
ಯಾದವಗಿರಿ, ಮೈಸೂರು ೫೭೦೦೨೦

ನಾವು ಆಚರಿಸುವ ಹಲವು ಹಬ್ಬಗಳಲ್ಲಿ 'ದೀಪಾವಳಿ'ಯು ವೈಶಿಷ್ಟ್ಯಪೂರ್ಣವಾದುದು. ಧನತ್ರಯೋದಶಿಯಂದು ಆರಂಭವಾಗುವ ಈ ಹಬ್ಬ ಆರನೇ ದಿನವಾದ ಅಕ್ಕನ ತದಿಗೆಯಂದು ಮುಕ್ತಾಯವಾಗುತ್ತದೆ. ಇಡೀ ರಾಷ್ಟ್ರವೇ ಆಚರಿಸುವ ಹಬ್ಬವಿದು. ಮತಭೇದ, ಜಾತಿಭೇದ, ಪಂಥಭೇದವಿಲ್ಲದ ಎಲ್ಲರ ಹಬ್ಬವಿದು. ಆಚರಣೆಯ ವಿಧಿವಿಧಾನಗಳಲ್ಲಿ ಪ್ರಾದೇಶಿಕ ಭಿನ್ನತೆಯಿದ್ದರೂ ಹಬ್ಬದ ಪೌರಾಣಿಕ ಹಿನ್ನೆಲೆ, ಉತ್ಸವದ ಉದ್ದೇಶ ಒಂದೇ.

ಆಶ್ವಯುಜಮಾಸದ ಕೃಷ್ಣಪಕ್ಷದ ತ್ರಯೋದಶಿಯ ಸಾಯಂಕಾಲದಿಂದಲೇ ಹಬ್ಬ ಆರಂಭ. ಇದನ್ನು 'ಧನತ್ರಯೋದಶಿ' ಎನ್ನುತ್ತಾರೆ. ಮಾರನೆಯ ದಿನ 'ನರಕ ಚತುರ್ದಶಿ' ಶ್ರೀಕೃಷ್ಣಪರಮಾತ್ಮ ತ್ರಿಲೋಕ ಕಂಟಕಪ್ರಾಯನಾಗಿದ್ದ ಕ್ರೂರ ದೈತ್ಯ ನರಕಾಸುರನನ್ನು ಸಂಹರಿಸಿದ ಸ್ಮರಣಾರ್ಥ ಆಚರಿಸುವ ಶುಭದಿನವಿದು.

ನರಕಾಸುರ ಎಂಬಾತ ವರಾಹರೂಪಿ ನಾರಾಯಣ ಹಾಗೂ ಭೂದೇವಿಯರ ಅಂಶ ಸಂಜಾತನಾದರೂ ತನ್ನ ಕ್ರೂರ ಕುಕೃತ್ಯಗಳಿಂದ ದೈತ್ಯನಾದ. ಇಂದ್ರಾದಿ ಅಷ್ಟದಿಕ್ಪಾಲಕರನ್ನು ಸೋಲಿಸಿ ಅವರನ್ನು ಪದಚ್ಯುತರನ್ನಾಗಿ ಮಾಡಿದ. ಬ್ರಹ್ಮನ ಮಗಳಾದ ಚತುರ್ದಶಿಯನ್ನು ಅಪಹರಿಸಿದ. ಷಡ್ದರ್ಶನಾದಿ ಹದಿನಾಲ್ಕು ವಿದ್ಯೆಗಳನ್ನು ತನ್ನ ವಶಪಡಿಸಿಕೊಂಡು ಲೋಕವನ್ನು ತಮಸ್ಸಿನಲ್ಲಿ ಕೆಡಹಿದ. ದೇವಮಾತೆಯಾದ ಅದಿತಿಯ ಕರ್ಣಾಭರಣವನ್ನೇ ಕಿತ್ತುತಂದಿದ್ದ ನೀಚ. ಹದಿನಾರು ಸಾವಿರದ ಒಂದುನೂರು ಬೇರೆ ಬೇರೆ ರಾಜಕುಮಾರಿಯರನ್ನು ಅಪಹರಿಸಿ ತಂದು ತನ್ನ ಅಂತಃಪುರದಲ್ಲಿ ಸೆರೆಯಲಿಟ್ಟ. ಇಂಥ ಲೋಕಪೀಡಕನನ್ನು ಕೊಂದು ಲೋಕವನ್ನು ಕಾಪಾಡಿದ ಶ್ರೀಕೃಷ್ಣ. ನರಕನಿಂದ ಚತುರ್ದಶಿಯು ಮುಕ್ತಳಾದ ದಿನವಾದುದದರಿಂದ ಇದಕ್ಕೆ 'ನರಕ ಚತುರ್ದಶಿ' ಎಂಬ ಹೆಸರು ಬಂದಿತೆಂದು ಪದ್ಮಪುರಾಣ ಹಾಗೂ ಲಿಂಗಪುರಾಣಗಳಲ್ಲಿ ಉಕ್ತವಾಗಿದೆ.

ನರಕಾಸುರನನ್ನು ಶ್ರೀಕೃಷ್ಣನು ಕೊಂದದ್ದು ಆಶ್ವಯುಜ ಬಹುಳ ಚತುರ್ದಶಿಯ ರಾತ್ರಿ. ಅದು ಕಾರಣ ಇದು 'ನರಕ ಚತುರ್ದಶಿ' ಎಂಬುದು ಇನ್ನೊಂದು ವಿವರಣೆ. ಒಟ್ಟಿನಲ್ಲಿ ತಮೋಗುಣೆಯನ್ನು ತಮದಲ್ಲೇ ಕೊಂದು ಲೋಕಕ್ಕೆ ಶಾಂತಿಯ ಬೆಳಕನ್ನು ನೀಡಿದ ಶುಭದಿನವಿದು.

ನರಕಾಸುರನ ತಾಯಿಯ ಪ್ರಾರ್ಥನೆಯಂತೆ ನರಕಾಸುರನ ಹೆಸರು ಭೂಮಿಯಲ್ಲಿ

ಶಾಶ್ವತವಾಗಿ ಉಳಿಯಿತು. ಕಗ್ಗತ್ತಲಿನಲ್ಲಿ ನರಕಾಸುರನು ಅಸುನೀಗಿದ ಸಂತೋಷಾರ್ಥವಾಗಿ "ರಾತ್ರೌ ಚಂದ್ರೋದಯ ಕಾಲೇ ನರಕತಚತುರ್ದಶ್ಯಂಭ್ಯಾಂಗಃ" ಎಂಬ ವಾಕ್ಯಾನುಸಾರ ಅಮಾವಾಸ್ಯೆಯ ಬೆಳಗಿನ ಜಾವ ಅಂದರೆ ಚತುರ್ದಶಿ ತಿಥಿಯ ಅಂತ್ಯದಲ್ಲಿ 'ಅಭ್ಯಂಜನಸ್ನಾನ' ಮಾಡಬೇಕೆಂಬುದು ಶಾಸ್ತ್ರವಿಧಿ. ಸತ್ತವರಿಗೆ ಶೌಚಕ್ಕಾಗಿ ನಾವು ಸ್ನಾನ ಮಾಡುವಂತೆ ರಾಕ್ಷಸನ ಮರಣದಿಂದಾಗಿ ಈ ಸ್ನಾನ. ಸಾಮಾನ್ಯವಾಗಿ ಅಂದು ಸ್ವಾತಿ ನಕ್ಷತ್ರವಿರುತ್ತದೆ. ಸ್ವಾತೀ ನಕ್ಷತ್ರ ವ್ಯಾಪನೆಯಕಡೆ ಚತುರ್ದಶಿ ತಿಥಿ ತೈಲಾಭ್ಯಂಗಕ್ಕೆ ಶ್ರೇಷ್ಠವೆಂದು ಆಯುರ್ವೇದ ಹೇಳುತ್ತದೆ. ಆಡುಮಾತಿನಲ್ಲಿ ಇದಕ್ಕೆ 'ಎಣ್ಣೆನೀರು' ಎನ್ನುತ್ತಾರೆ. ಎಣ್ಣೆಯಲ್ಲಿ ಲಕ್ಷ್ಮಿಯೂ, ನೀರಿನಲ್ಲಿ ಗಂಗೆಯೂ ಇರುವರೆಂಬ ಕಾರಣದಿಂದ ಅಂದು ಎಣ್ಣೆ ಮಜ್ಜನಕ್ಕೆ ಎಲ್ಲಿಲ್ಲದ ಪ್ರಾಶಸ್ತ್ಯ. ವರ್ಷವಿಡೀ ತೈಲಾಭ್ಯಂಜನ ಮಾಡದವರೂ ಅಂದು ಮಾಡಿಯೇ ಮಾಡುತ್ತಾರೆ ಅಥವಾ ಮಾಡಬೇಕು. ಇದರಿಂದ ಆಯುರಾರೋಗ್ಯಾಭಿವೃದ್ಧಿ ಲಕ್ಷ್ಮೀಕಟಾಕ್ಷ ಹಾಗೂ ಗಂಗಾದೇವಿಯ ಕರುಣೆ ಪ್ರಾಪ್ತವಾಗುತ್ತದೆಂಬ ನಂಬಿಕೆಯಿದೆ. ಈ ಅಭ್ಯಂಜನ ಸ್ನಾನವನ್ನು ಅಂದು ಎಲ್ಲರೂ ಮಾಡಬೇಕೆಂದು ಧರ್ಮಶಾಸ್ತ್ರ ಹೇಳುತ್ತದೆ.

ಅಂತರಾರ್ಥ: ಇವಿಷ್ಟೂ ಆಚರಣೆಗೆ ಸಂಬಂಧಿಸಿದ್ದಾದರೆ ನರಕಚತುರ್ದಶಿಯ ಅಂತರಾರ್ಥವೊಂದಿದೆ. 'ನರಕ' ಎಂದರೆ ಅಜ್ಞಾನ. ಅಜ್ಞಾನವು ಚತುರ್ದಶಿಯಿಂದಲೇ ನಾಶವಾಗತಕ್ಕದ್ದು. ಹಾಗಾದರೆ 'ಚತುರ್ದಶಿ' ಯಾವುದು? ಚತುರ್ದಶ ಎಂದರೆ ಹದಿನಾಲ್ಕು ಎಂದರ್ಥ.

ನಾಲ್ಕು ವೇದಗಳು; ಷಡಂಗಗಳಾದ ಕಲ್ಪ, ಜ್ಯೋತಿಷ, ನಿರುಕ್ತ, ವ್ಯಾಕರಣ, ಛಂದಸ್ಸು ಮತ್ತು ಶಿಕ್ಷಾ; ಮೀಮಾಂಸಾ, ನ್ಯಾಯ, ಪುರಾಣ, ಸ್ಮೃತಿಗಳೆಂಬ ಹದಿನಾಲ್ಕು ವಿವಿಧ ಜ್ಞಾನದಿಂದಲೇ ಅಜ್ಞಾನದ ನಾಶ. ಇದೇ ಚತುರ್ದಶಿಯ ಸಂಕೇತ.

ಇದರ ಮಾರನೆಯದಿನ ಅಥವಾ ಆರಂಭದಿಂದ ಮೂರನೆಯ ದಿನವೇ ದೀಪಾವಳಿ ಅಮಾವಾಸ್ಯೆ. ಪಂಚಪಲವಗಳೆಂದು ಆಯುರ್ವೇದ ಹೇಳುವ ಅರಳಿ, ಮಾವು, ಅತ್ತಿ, ಆಲ ಮತ್ತು ನೇರಳೆ ಚಿಗುರುಗಳನ್ನು ನೀರಿನಲ್ಲಿಹಾಕಿ ಸ್ನಾನಮಾಡುವ ದಿನವದು. ಇಂದು ಷೋಡಶ ಕಲಾ ಪರಿಪೂರ್ಣೆಯೂ, ಸಂಪತ್ತಿನ ಅಧಿದೇವತೆಯೂ ಆದ ಮಹಾಲಕ್ಷ್ಮಿ ಅಥವಾ ಧನಲಕ್ಷ್ಮಿ ಪೂಜೆ'. ವಿಷ್ಣು ಪತ್ನಿಯೂ ಧನಾಭಿಮಾನಿ ದೇವತೆಯೂ ಆದ ಲಕ್ಷ್ಮಿಯು ಸಮುದ್ರಮಂಥನದಿಂದ ಉದಯಿಸಿದ ದಿನವಿದು. ಇಂದಿನ ಲಕ್ಷ್ಮಿಪೂಜೆಗೆ ಪ್ರಾಶಸ್ತ್ಯ ಬಂದಿದ್ದು 'ಲಕ್ಷ್ಮಿಜಯಂತಿ' ಯಿಂದಲೇ. ಐಶ್ವರ್ಯವು ಹಣದ ರೂಪದಲ್ಲೇ ಇರಬೇಕೆಂದೇನೂ ಇಲ್ಲ. ವಿದ್ಯೆ, ಕೀರ್ತಿ, ವೀರ್ಯ, ಜಯ, ಧೈರ್ಯ, ಸೌಖ್ಯ, ಭೋಗ, ಸಂಪತ್ತು, ಧಾನ್ಯ, ಮೇಧಾ, ಸೌಂದರ್ಯ, ಧರ್ಮ, ಗೌರವ, ಆರೋಗ್ಯ, ಸತ್ಸಂತಾನ ಮತ್ತು ದೀರ್ಘಾಯುಸ್ಸು— ಈ ಹದಿನಾರೂ ಮಹಾಲಕ್ಷ್ಮಿಯ ರೂಪ ವಿಶೇಷಗಳು. ಇದನ್ನೇ 'ಷೋಡಶಶ್ರೀ' ಅಂದರೆ ಹದಿನಾರು ಸಂಪತ್ತುಗಳು ಎಂದು ನಮ್ಮ ಪೂರ್ವಿಕರು ಗುರುತಿಸಿದ್ದಾರೆ.

ಷೋಡಶಶ್ರೀ ಸಮೃದ್ಧಿಯ ಅಪೇಕ್ಷೆಯೇ ಅಮಾವಾಸ್ಯೆಯ ರಾತ್ರಿಯ ಧನಲಕ್ಷ್ಮೀ ಪೂಜೆಯ ಉದ್ದೇಶ.

ಇದು ಜೈನಬಾಂಧವರಿಗೆ ಬಹು ಪವಿತ್ರವಾದ ದಿನ. ಮಹಾವೀರ ತೀರ್ಥಂಕರನ ನಿರ್ಯಾಣ ಹಾಗೂ ಆತನ ಪ್ರಿಯಶಿಷ್ಯ ಗೌತಮಗಣಧರನಿಗೆ ಕೇವಲ ಜ್ಞಾನಪ್ರಾಪ್ತಿಯಾದ ದಿನವಿದು. ಈ ಕಾರಣದಿಂದ ಜೈನ ಧರ್ಮೀಯರು ಇಂದು ಜ್ಞಾನಲಕ್ಷ್ಮಿಯ ಪೂಜೆ ಮಾಡುತ್ತಾರೆ. ಕೆಲವರು ತಮ್ಮಲ್ಲಿರುವ ಧನಕನಕಗಳನ್ನು ರಾಶಿಹಾಕಿ ಶ್ರೀಲಕ್ಷ್ಮಿಯನ್ನು ಪೂಜಿಸುತ್ತಾರೆ. ಬಂಗಾಳದಲ್ಲಿ ಕಾಳೀ ಹಬ್ಬವನ್ನು ಆಚರಿಸಿ ಲಕ್ಷ್ಮಿಯ ರೂಪದಲ್ಲಿ ಕಾಳಿಯನ್ನು ಪೂಜಿಸುತ್ತಾರೆ.

ಮಾರನೆಯದಿನ ಎಂದರೆ ಆರಂಭದಿಂದ ನಾಲ್ಕನೆಯ ದಿನವೇ ಕಾರ್ತಿಕ ಶುದ್ಧ ಪಾಡ್ಯ. ಇಂದಿನ ಹಬ್ಬವೇ ಈ ಆರುದಿನದ ಹಬ್ಬಗಳಲ್ಲಿ ಪ್ರಮುಖವಾದುದು ಇದೇ 'ಬಲಿಪಾಡ್ಯಮಿ' ಅಥವಾ 'ದೀಪಾವಳಿ'. "ಗೋಕ್ರೀಡನ ಪ್ರತಿಪತ್" ಎಂದೂ ಕರೆಯುತ್ತಾರೆ. ಉತ್ತರಭಾರತದವರು ಇದನ್ನು 'ದಿವಾಲಿ' ಎನ್ನುತ್ತಾರೆ. ದಕ್ಷಿಣ ಭಾರತದವರಾದ ನಮಗೆ ಯುಗಾದಿ ಹೇಗೆ ಹೊಸವರ್ಷಾರಂಭದ ಹಬ್ಬವೋ ಅದರಂತೆ ಉತ್ತರದವರಿಗೆ ದಿವಾಲಿಯೇ ವರ್ಷಾರಂಭದ ಹಬ್ಬ ಇದನ್ನು 'ವಿಕ್ರಮಶಕೆ' ಎನ್ನುತ್ತಾರೆ. ವ್ಯಾಪಾರಸ್ಥರಿಗೆ ಹಳೆಯ ಲೆಕ್ಕವನ್ನು ಮುಗಿಸಿ ಹೊಸ ಲೆಕ್ಕವನ್ನು ಆರಂಭಿಸುವ ಆರ್ಥಿಕ ವರ್ಷದ ಪ್ರಥಮ ದಿನವಿದು. ಜೂಜು ಪ್ರೇಮಿಗಳಿಗೆ ಜೂಜಾಟವನ್ನು ಆರಂಭಿಸಲು ಇದು ಪ್ರಶಸ್ತದಿನವೆಂಬ ನಂಬಿಕೆ ಇದೆ.

ಇತಿಹಾಸ ಪುಟಗಳನ್ನು ತಿರುವಿ ನೋಡಿ ದಾಗ ಕೆಲವು ಅವಿಸ್ಮರಣೀಯ ಘಟನೆಗಳ ದೀಪಾವಳಿಯಂದು ಘಟಿಸಿರುವುದು ಕಂಡು ಬರುತ್ತದೆ.

೧ ಮೊಘಲ್ ದೊರೆ ಜಹಾಂಗೀರನು ಸಿಕ್ಖರ ಧರ್ಮಗುರು ಗುರುಗೋವಿಂದಸಿಂಗ್ ನನ್ನು ಕಾರಾಗೃಹದಿಂದ ಬಿಡುಗಡೆ ಮಾಡಿದ್ದು ದೀಪಾವಳಿಯಂದು. ಅಂದು ಇದರ ಜ್ಞಾಪಕಾರ್ಥವಾಗಿ ಸಿಕ್ ಬಾಂಧವರು ಅಮೃತಸರದ ಸ್ವರ್ಣಮಂದಿರದಲ್ಲಿ ಪವಿತ್ರ ಕೊಳದಲ್ಲಿ ಸ್ನಾನಮಾಡುತ್ತಾರೆ.

೨ ಜೈನರಿಗೆ ಮಹಾವೀರಶಕೆ ಆರಂಭ ವಾಗುವುದು ಇಂದಿನಿಂದಲೇ.

೩ ಗೂರ್ಜರದೇಶದವರಿಗೆ (ಗೂರ್ಕರು) ವರ್ಷಾರಂಭ ಇಂದಿನಿಂದಲೇ. "ದೂರ್ಜ ರಾಣಾಂ ವತ್ಸರಾರಂಭಃ"—ಎಂಬ ವಾಕ್ಯ ಪಂಚಾಂಗದಲ್ಲೇ ಇರುತ್ತದೆ.

ದೀಪಾವಳೀ ಹಬ್ಬದ ಆಚರಣೆಯ ವಿಧಿ ವಿಧಾನಗಳು ಸ್ಕಂದಪುರಾಣದಲ್ಲಿ ಕಂಡುಬರು ತ್ತವೆ. ಅಲ್ಲದೆ ಹಲವು ಕಾವ್ಯಗಳಲ್ಲೂ ಈ ಹಬ್ಬದ ಪ್ರಸ್ತಾಪ ಕಂಡುಬರು ತ್ತದೆ. ಉದಾ: ರಾಜಶೇಖರನ ಕಾವ್ಯ ಮೀಮಾಂಸೆ, ಮೇರುತುಂಗನ 'ಪ್ರಬಂಧ ಚಿಂತಾಮಣಿ', ಹೇಮಚಂದ್ರನ 'ದೇಶಿ ನಾಮಮಾಲಾ, ಭೋಜರಾಜನ 'ರಾಜ ಮಾರ್ತಾಂಡ', ಜೀಮೂತವಾಹನನ 'ಕಾವ್ಯ ವಿವೇಕ' ಹರ್ಷಮಹಾರಾಜನ 'ನಾಗಾನಂದ' ನಾಟಕದಲ್ಲಿ ಇವನ್ನು 'ದೀಪಪ್ರತಿಪದೊ ತ್ಸವ' ಎಂದು ಕರೆದಿದೆ. ಹೀಗೆ ನಮ್ಮ ಪ್ರಾಚೀನ ಕಾವ್ಯಗಳಲ್ಲೂ ಈ ಹಬ್ಬ ಸ್ಥಾನ ಪಡೆದಿದೆ.

ಬೌದ್ಧಭಿಕ್ಷುಗಳಿಗೆ ದೀಕ್ಷೆ ಕೊಡಲು ...ೀಪಾವಳಿಯು ಪ್ರಶಸ್ತದಿನವೆಂದು ಬೌದ್ಧ ...ರ್ಮಿಗಳು ಭಾವಿಸುತ್ತಾರೆ. ಆದಕಾರಣ ...ೌದ್ಧರ ಮಹತ್ವದ ದಿನಗಳಲ್ಲಿ ಇದೂ ...ಂದು. ಇವರುಗಳೇ ಅಲ್ಲದೆ 'ಜಿಪ್ಸಿ' ಎಂಬ ...ುಡಕಟ್ಟಿನ ಜನಾಂಗದವರೂ ದೀಪಾವಳಿ ...ಯನ್ನು ಆಚರಿಸುತ್ತಾರೆ.

ಬಲಿಪಾಡ್ಯಮಿಯ ಪ್ರಾತಃಕಾಲ ಮಂಗಳ ಸ್ನಾನದ ನಂತರ ಜನರು ನೂತನ ವಸ್ತ್ರ ಧಾರಣೆ ಮಾಡಿ ಮನೆಯನ್ನು ತಳಿರು ತೋರಣಗಳಿಂದ ಸಿಂಗರಿಸುತ್ತಾರೆ. ಗೋಮಾತೆಯಲ್ಲಿ ಮೂವತ್ತಮೂರು ಕೋಟಿ ದೇವತೆಗಳೂ ನೆಲೆಸಿದ್ದಾರೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಇಂದು ಗೋವುಗಳಿಗೆ ವಿಶೇಷಪೂಜೆ ಸಲ್ಲುತ್ತದೆ. ಕೃಷಿಕರು ಅಂದು ತಮ್ಮ ದನಕರುಗಳನ್ನು ತೊಳೆದು ಅವುಗಳ ಕೊಂಬು ಹಾಗೂ ಗೊರಸುಗಳನ್ನು ಒರೆದು ಬಣ್ಣಹಚ್ಚಿ ಹೂಮಾಲೆ ಹಾಕಿ ಕೌದಿಗಳನ್ನು ಹೊದ್ದಿಸಿ, ಕೊರಳಿಗೆ ಗಂಟೆಯ ಸರವನ್ನು ಹಾಕಿ ಭಕ್ತಿಪೂರ್ವಕವಾಗಿ ಪೂಜಿಸುತ್ತಾರೆ. ಕೃಷಿಕರು ಮಾತ್ರವಲ್ಲದೆ ಕೇವಲ ಹಾಲಿಗೋಸ್ಕರ ಗೋವುಗಳನ್ನು ಸಾಕಿರುವವರೂ ಸಹ ಹಸುವಿಗೆ ಪೂಜೆ ಸಲ್ಲಿಸಿ ಗೋಗ್ರಾಸವನ್ನು ನೀಡುತ್ತಾರೆ.

ಸಾಯಂಕಾಲ ಕೆಲವು ಕಡೆ ಮೋಜಿಗಾಗಿ ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ. ಅಂದು ವೃಷಭ ಅಂದರೆ ಎತ್ತು ಮತ್ತು ಹೋರಿಗಳಿಗೆ ಪೂಜೆ ಸಲ್ಲುವುದರಿಂದ ಅವುಗಳ ದುಡಿತಕ್ಕೆ ಬಿಡುವು. ಆದ್ದರಿಂದಲೇ ಇದು ಪ್ರತಿಪ್ರತೆ.

ಹೀಗೆ ವಿಶೇಷವಾಗಿ ಅಂದು ಗೋವುಗಳಿಗೆ ಪೂಜೆ ಸಲ್ಲಿಸಲು ಏನು ಕಾರಣ ? ಭಾರತವು ಮೂಲಭೂತವಾಗಿ ಕೃಷಿಕರಾಷ್ಟ್ರ. "ಕೃಷಿತೋನಾಸ್ತಿ ದುರ್ಭಿಕ್ಷಂ" ಎಂಬ ವಾಕ್ಯದಂತೆ ಕೃಷಿಯಿಂದ ದುರ್ಭಿಕ್ಷದ ನಾಶ. ಕೃಷಿಗೆ ಅಗತ್ಯಸಾಧನವೆಂದರೆ ಗೋವುಗಳು. ವರ್ಷವಿಡೀ ದುಡಿಯುವ ಈ ಮೂಕ ಪ್ರಾಣಿಗಳಿಗೆ ಕೃತಜ್ಞತೆ ಸಲ್ಲಿಸಬೇಕಾದ್ದು ಆದ್ಯ ಕರ್ತವ್ಯ. ಸಗಣಿ ಅಥವಾ ನಾಡ ಗೊಬ್ಬರವೊಂದೇ ಹಿಂದೆ ಬೆಳೆಗಳಿಗಿದ್ದ ಏಕೈಕ ಗೊಬ್ಬರ. ಅದನ್ನು ನೀಡಿ ತಮ್ಮ ಜೀವಿತದಲ್ಲಿ ನೆರವಾಗುವ ಪ್ರಾಣಿಗಳಿಗೆ ಪೂಜೆ ಸಲ್ಲುವುದರಲ್ಲಿ ಯಾವ ಮೂಢನಂಬಿಕೆಯೂ ಇಲ್ಲ.

ನಟನೆಯಿಂದ ಅಥವಾ ತಿರಸ್ಕಾರದಿಂದ ಯಾರಿಗೂ ದಾನ ಮಾಡಬಾರದು. ಹೀಗೆ ಮಾಡಿದ ದಾನವು ದಾನಿಯನ್ನೇ ನಾಶಪಡಿಸುತ್ತದೆ.

—ವಾಲ್ಮೀಕಿ

ದೇಜಗೌರವರ ಅನುವಾದಿತ ಕೃತಿ "ಯುದ್ಧ ಮತ್ತು ಶಾಂತಿ"

ಅ. ರಾ. ಮಂಜುನಾಥ್
ಆಪ್ತ ಕಾರ್ಯದರ್ಶಿ
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ, ಬೆಂಗಳೂರು

ಜಗತ್ಪ್ರಸಿದ್ಧ ಮಹಾನ್ ಸಾಹಿತಿ, ಮೇಧಾವಿ, ದಾರ್ಶನಿಕ ಟಾಲ್‌ಸ್ಟಾಯ್ ಅವರ 'ವಾರ್ ಅಂಡ್ ಪೀಸ್' ಮಹಾ ಕಾದಂಬರಿಯನ್ನು, ಪ್ರೊ|| ದೇಜಗೌ ಅವರು ಅನುವಾದಿಸಿದ್ದು, ಸುಮಾರು ೧೮೦೦ ಪುಟಗಳ ವ್ಯಾಪ್ತಿಯ ಈ ಬೃಹತ್ ಕಾದಂಬರಿ 'ಯುದ್ಧ ಮತ್ತು ಶಾಂತಿ' ಯನ್ನು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ಮೂರು ಸಂಪುಟಗಳಲ್ಲಿ ಪ್ರಕಟಿಸಿದೆ. ಈ ಕೃತಿ ಪರಿಚಯದ ಹಿನ್ನೆಲೆಯಲ್ಲಿ ದೇಜಗೌ ಅವರ ಸಾಹಿತ್ಯದ ಅಸಾಮಾನ್ಯತೆಯನ್ನು ಅ. ರಾ. ಮಂಜುನಾಥ್ ಅವರು ಈ ಲೇಖನದಲ್ಲಿ ನಿರೂಪಿಸಿದ್ದಾರೆ. ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಈ ವಿಶಿಷ್ಟ ಲೇಖನವನ್ನು ಎರಡು ಕಂತುಗಳಲ್ಲಿ ಪ್ರಕಟಿಸಲಾಗುತ್ತಿದೆ.

ಸಂ.

೧. ದೇಜಗೌರವರ ಸಾಹಿತ್ಯ ಪರಿಚಯ

ಕನ್ನಡದ ಸೇನಾನಿ ದೇಜಗೌ ಕನ್ನಡಕ್ಕೊಂದು ಮಂತ್ರಶಕ್ತಿ. ಕುವೆಂಪುರವರ ಪರಮಾಪ್ತ ಶಿಷ್ಯರಾಗಿ ಅಪಾರ ಸಾಹಿತ್ಯ ಸೃಷ್ಟಿಸಿ ಗುರುವಿಗೆ ತಕ್ಕ ಶಿಷ್ಯನೆಂಬ ಹೆಗ್ಗಳಿಕೆಗೆ ಪಾತ್ರವಾದ ವ್ಯಕ್ತಿತ್ವ ಅವರದು. ಯಾವ ಒಂದು ಸಂಸ್ಥೆಯೂ ಸಾಧಿಸಲಾಗದಷ್ಟು ಒಬ್ಬ ವ್ಯಕ್ತಿಯಾಗಿ ಸಾಧಿಸಿದ್ದಾರೆ. ಅವರದು ಕಂದದ, ಕುಂದದ ಕುಂದನಕ್ಕಿಟ್ಟ ಚಿನ್ನದ ಪ್ರತಿಭೆ. ಕನ್ನಡ ಗದ್ಯ ಸಾಹಿತ್ಯಕ್ಕೆ ತನ್ನದೇ ಆದ ಮುದ್ರೆ ಒತ್ತಿ ಕನ್ನಡ ಗದ್ಯದ ಆಚಾರ್ಯ ಪುರುಷರಲ್ಲೊಬ್ಬರಾಗಿದ್ದಾರೆ. ಕನ್ನಡ ಗದ್ಯಕ್ಕೆ ಪರಂಪರೆಯ ಒತ್ತುಕೊಟ್ಟು, ವಾಸ್ತವಿಕ ಪ್ರಜ್ಞೆಯ ನೆಲೆಗಟ್ಟಿನಲ್ಲಿ ಪ್ರಗತಿಯ ಮುನ್ನೋಟ ತಂದುಕೊಟ್ಟ ಹಿರಿಮೆ ದೇಜಗೌರವರದು. ಗ್ರಂಥ ಸಂಪಾದನೆ ಪ್ರವಾಸ ಸಾಹಿತ್ಯ, ಜಾನಪದ ಸಾಹಿತ್ಯ, ಪತ್ರ ಸಾಹಿತ್ಯ, ಶಿಶು ಸಾಹಿತ್ಯ, ಜೀವನ ಚರಿತ್ರೆ, ನಾಟಕಗಳು, ವಿಮರ್ಶೆ ಚಿಂತನ ಪ್ರಬಂಧಗಳು, ಅನುವಾದಗಳು, ಕವನಗಳು -ಹೀಗೆ ಹತ್ತು ಹಲವು ಪ್ರಕಾರಗಳಲ್ಲಿ ಸೃಜನಶೀಲ ಸಾಹಿತ್ಯವನ್ನು ಸೃಷ್ಟಿಸಿ ಶತಕಕ್ಕೂ ಹೆಚ್ಚು ಸಾಹಿತ್ಯ ಕೃತಿಗಳನ್ನು ಕನ್ನಡಿಗರ

ಮಡಿಲಲ್ಲಿ ಇಟ್ಟಿದ್ದಾರೆ. ಅಲ್ಲದೆ ಅನೇಕ ಇಂಗ್ಲೀಷ್ ಕೃತಿಗಳನ್ನೂ ಲೇಖನಗಳನ್ನೂ ಬರೆದಿದ್ದಾರೆ. ಕನ್ನಡ ಲೇಖನಗಳಲ್ಲಿ ಹೊಸ ದಾಖಲೆಗಳನ್ನು ನಿರ್ಮಿಸಿದ್ದಾರೆ.

ರಾಷ್ಟ್ರಕವಿ ಕುವೆಂಪು ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿ ಅವರ ಸಾಹಿತ್ಯದ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಕೆಲವೇ ವ್ಯಕ್ತಿಗಳಲ್ಲಿ ದೇಜಗೌ ಮೊದಲಿಗರು. ಅವರ ಸೊಗಸಾದ ಗದ್ಯ, ಸುಂದರ ಶೈಲಿ, ನವಿರಾದ ವಿವರಣೆ, ಭಾವಪೂರ್ಣ ಪರಿಚಯ ನಮ್ಮನ್ನು ಕುವೆಂಪು ಸಾಹಿತ್ಯಕ್ಕೆ ಆತ್ಮೀಯರನ್ನಾಗಿ ಮಾಡಿಸುತ್ತದೆ. ಗ್ರಂಥ ಸಂಪಾದನೆಯಂಥ ಕಷ್ಟದ ಕೆಲಸದಲ್ಲೂ ಅವರ ಪರಿಶ್ರಮ ಸುವ್ಯಕ್ತವಾಗಿ, ಎಲ್ಲಾ ಗುಣಾಂಶಗಳೂ ಮೈಗೂಡಿ ವಿದ್ವತ್ಪೂರ್ಣವಾದ ವೈಜ್ಞಾನಿಕ ಜಾನಪದ ವಿದ್ವಾಂಸರಾಗಿ ಅವರು ನೀಡಿದ ಕೊಡುಗೆ ಅಪಾರ. ಸಾಹಿತ್ಯಿಕ, ಭಾಷಿಕ, ವೈಜ್ಞಾನಿಕ, ಕ್ರಿಯಾತ್ಮಕ ಹೀಗೆ ಜಾನಪದ ಚತುಷ್ಕೋನಗಳಲ್ಲೂ ಅವರ ದೃಷ್ಟಿ-ಸೃಷ್ಟಿ ಅಪೂರ್ವ. ಗ್ರಾಮೀಣ ಬದುಕಿನ ಜೀವನಾಡಿಯಂತಿರುವ ಅವರ ಬರೆಹಗಳಲ್ಲಿ ದೇಶೀಯ ಸೊಗಡು ಎದ್ದು ಕಾಣುತ್ತದೆ. ವಸ್ತುನಿಷ್ಠತೆ, ವೈಜ್ಞಾನಿಕ ದೃಷ್ಟಿ ಅವರ ಜಾನಪದ ಸಾಹಿತ್ಯದ ವಿಶೇಷ. ಜಾನಪದ ಸಾಹಿತ್ಯ, ಸಂಸ್ಕೃತಿಗೆ ಉತ್ಸರ್ಪಿಣೀಕಾಲ ಬಂದದ್ದು ಅವರಿಂದಾಗಿಯೇ.

ಕನ್ನಡ ಪ್ರವಾಸ ಸಾಹಿತ್ಯಕ್ಕೆ ಹೊಸ ದೃಷ್ಟಿಕೋನ ನೀಡಿದವರು ದೇಜಗೌ. ನಾನಾ ವಿಧದ ನಾಡು-ನುಡಿ ಜನರ ಸಂಪರ್ಕ ಕಂಡ ವಿವಿಧ ದೃಶ್ಯಗಳು-ಇವುಗಳು ಪ್ರವಾಸದಲ್ಲಿ ನಾವೇ ಭಾಗವಹಿಸಿದಷ್ಟು ಅನುಭವ ನೀಡುತ್ತವೆ. ಪ್ರವಾಸದ ಸಮಯದಲ್ಲಿ ಅವರ ಕಣ್ಣು ಕ್ಯಾಮರವಾಗಿ ಎಲ್ಲಾ ದೃಶ್ಯಗಳನ್ನು ಸೆರೆಹಿಡಿದು ಪ್ರವಾಸದ ಅನುಭವಗಳನ್ನು ಪ್ರಯಾಸವಾಗದಂತೆ ಕುತೂಹಲದಿಂದ ನಮಗೆ ಉಣಬಡಿಸುತ್ತದೆ. ತಾವೊಬ್ಬ ಉತ್ತಮ ಪ್ರವಾಸಿ ಎಂದು ಸಾಬೀತುಪಡಿಸುತ್ತಾರೆ. ಸಂಭಾಷಣೆಯಲ್ಲಿ ನೈಜತೆ, ನಿರೂಪಣೆಯಲ್ಲಿ ನಿರಾಡಂಬರತೆ, ನೇರ ನವ್ಯ ಶೈಲಿ, ಹೊಸತನ್ನು ಕಾಣುವ ಕುತೂಹಲ ನೋಟ, ಅಪಾರ ಅನುಭವ-ಇವುಗಳು ಅವರ ಪ್ರವಾಸ ಕಥನಗಳ ರುಚಿ ಹೆಚ್ಚಿಸಿವೆ.

'ಹೋರಾಟದ ಬದುಕು'-ದೇಜಗೌರವರ ಆತ್ಮಾವಲೋಕನ ಕೃತಿ. ಇದರಲ್ಲಿ ದೇಜಗೌ ತಮ್ಮ ಒಳಗಣ್ಣಿನಿಂದ ನೋಡಿದ್ದಾರೆ. ಬದುಕಿನ ಎಲ್ಲಾ ಮಗ್ಗುಲನ್ನೂ ತೆರೆದಿಟ್ಟಿದ್ದಾರೆ. ಮುಚ್ಚುಮರೆಗೆ ಅವಕಾಶ ನೀಡದೆ ನೇರ ಸರಳ ಶೈಲಿಯಲ್ಲಿ ತಮ್ಮ ಬದುಕನ್ನು ನಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿ ಅಪಾರ ಅನುಭವ ಭಾವಪರವಶತೆ, ವೈಚಾರಿಕ, ದೃಷ್ಟಿ ಇದ್ದು ಇವೆಲ್ಲಕ್ಕಿಂತ ಮಿಗಿಲಾಗಿ ಸತ್ಯ ಬದುಕಿನ ಸಾಕಾರತೆ ಎದ್ದು ಕಾಣುತ್ತದೆ.

ಕುಲಪತಿಯಾಗಿದ್ದಾಗಿನ ದೇಜಗೌ ಭಾಷಣಗಳು, ಅವರ ದಿನಚರಿ, ಅವರ ಕಾರ್ಯ ಗೌರವಗಳ ನಡುವೆಯೂ ಸೃಷ್ಟಿಗೊಂಡ ಸಾಧನೆಗಳು. ಅವುಗಳಲ್ಲಿನ ವಿಚಾರಧಾರೆ, ವಿಚಾರ ಸೂಕ್ಷ್ಮತೆ, ವಿವೇಚನೆ, ನಾಡು-ನುಡಿ, ರಾಷ್ಟ್ರದ ಬಗ್ಗೆ ಇರುವ ಕಳಕಳಿ ಗಮನಾರ್ಹವಾದುದು. ಅವರ 'ತುಡಿತ' ಉತ್ತಮ ಪತ್ರ ಸಾಹಿತ್ಯವಾಗಿದ್ದು, ಅದರಲ್ಲಿ ಅನುಭವದ ಕಣಜವಿದೆ. ಇವರ 'ಕೆನೆ'ಒಂದು ಉತ್ತಮ ಚಿಂತನೆಯಾಗಿದ್ದು ಹಿತ-ಮಿತ ಮೃದು ವಚನಗಳಲ್ಲಿ ಹಿರಿದಾದದನ್ನು ಹೇಳುವ ಕಲಾತ್ಮಕತೆ ಇದೆ. ಇದರಲ್ಲಿರುವ ಸಜೀವತ್ವ

ಸ್ವಾನುಭವಗಳು, ಆಲೋಚನೆಯ ಎಳೆಗಳು ಸುಂದರವಾಗಿ ಹೆಣೆದುಕೊಂಡಿವೆ.

ದೇಜಗೌರವರು ಬರೆದ ಜೀವನ ಚರಿತ್ರೆಗಳಲ್ಲಿ ಲೋಕ ಸ್ವರೂಪದ ನಿರೂಪಣೆ, ಚರಿತ್ರಾರ್ಹ ಆದರ್ಶ. ವ್ಯಕ್ತಿಗಳ ಜೀವನಾದರ್ಶ, ಅವರ ಹೋರಾಟ, ಸಾಧನೆ-ಇವುಗಳ ಆಳ ಅಧ್ಯಯನ ಎದ್ದು ಕಾಣುತ್ತದೆ. ಅಂಬೇಡ್ಕರ್‌ರವರ ಜೀವನ ಚರಿತ್ರೆಯಲ್ಲಂತೂ ದೇಜಗೌರವರ ಗದ್ಯದ ಸೊಗಡನ್ನು ಸವಿಯಬಹುದು. ಅವರ 'ಪುಣ್ಯಸ್ತ್ರವ ಚಂಪೂ' 'ಗದ್ಯಶೈಲಿ' ಮುಂತಾದ ಕೃತಿಗಳಲ್ಲಿ ಸಂಶೋಧಕ ದೃಷ್ಟಿ, ವಿಶ್ಲೇಷಣಾ ಸಾಮರ್ಥ್ಯ, ವೈಜ್ಞಾನಿಕ ವಿವೇಚನೆ, ವಿದ್ವತ್ತನ್ನು ನಾವು ಕಾಣಬಹುದು. ಹಾಗೆಯೇ ಅವರ ಭಾಷ್ಯಾಂತರ ಕೃತಿಗಳು ಕನ್ನಡ ಭಾಷಾಂತರ ಸಾಹಿತ್ಯಕ್ಕೆ ಹೊಸ ಆಯಾಮವನ್ನು ನೀಡಿದೆ.

೨ ದೇಜಗೌರವರ ಭಾಷ್ಯಾಂತರ

ಒಬ್ಬ ಉತ್ತಮ ಅನುವಾದಕರಿಗೆ ಸಷ್ಟ್ಯಾತ್ಮಕ ಶಕ್ತಿ ಇರಬೇಕು. 'ಭಾಷಾಂತರ ಪ್ರತಿಭಾ ದರಿದ್ರರ ಕೆಲಸವಲ್ಲ' ಅದೊಂದು ಅಪೂರ್ವ ವೈಜ್ಞಾನಿಕ ಕಲೆ.. ಅದೊಂದು "ಪ್ರತಿಭಾ ಮೂಲವಾದ ಅನುಸೃಷ್ಟಿ ಪುನಃಸೃಷ್ಟಿ' ದೇಜಗೌರವರಲ್ಲಿ ಈ ಎಲ್ಲಾ ಗುಣಗಳು ಸೇರಿದ್ದು, ಭಾಷಾಂತರ ಕ್ಷೇತ್ರದಲ್ಲಿ ಅಪೂರ್ವ ಸೃಜನಶಕ್ತಿ, ವಿಮರ್ಶನ ಶಕ್ತಿಯನ್ನು ಹೊಂದಿದ್ದಾರೆ.

'ನೆನಪು ಕಹಿಯಲ್ಲ' ದಿಂದ ಪ್ರಾರಂಭವಾದ ಅವರ ಅನುವಾದ ಕೃತಿ, 'ಅಕ್ಬರ್', 'ಗುರುನಾನಕ್' 'ಪುನರುತ್ಥಾನ' ಹಮ್ಮು–ಬಿಮ್ಮು' 'ಟಾಲ್‌ಸ್ಟಾಯ್‌ರವರ ಎರಡು ನಾಟಕಗಳು' 'ಭಾರತದ ಜಾನಪದ ಕಥೆಗಳು' ಯುದ್ಧ ಮತ್ತು ಶಾಂತಿ–ಹೀಗೆ ಪಟ್ಟಿ ಮುಂದುವರಿಯುತ್ತಾ ಹೋಗುತ್ತದೆ. ಇವು ಅನುವಾದ ಕೃತಿಗಳಾದರೂ ಕನ್ನಡದ ಜಾಯಮಾನಕ್ಕೆ ಅಳವಟ್ಟಿವೆ. ಮೂಲಕ್ಕೆ ಕಿಂಚಿತ್ತೂ ಚ್ಯುತಿ ಬಾರದಂತೆ ದೇಜಗೌ ಇಲ್ಲಿ ತಮ್ಮ ಸ್ವಪ್ರತಿಭಾ ವಿಲಾಸವನ್ನು ತೋರಿದ್ದಾರೆ. ಮೂಲಕೃತಿಗಳು ಅನುವಾದಕರ ಕೈಯಲ್ಲಿ ಮರಹುಟ್ಟು ಪಡೆದಿವೆ. ಸ್ವತಂತ್ರ ಕೃತಿಗಳಂತೆ ಹೊರಹೊಮ್ಮಿವೆ. ಎಲ್ಲೂ ಕುಸಿಯದೆ ಕುಸುಮಿಸುತ್ತಾ ತಮ್ಮ ಕಂಪು ಬೀರುತ್ತವೆ.

'ನೆನಪು ಕಹಿಯಲ್ಲ' ಇದು ನೆಹರೂರವರ ತಂಗಿ ಕೃಷ್ಣಹಠೀಸಿಂಗ್‌ರವರ (ವಿತ್ ನೋರಿಗ್ರೆಟ್ಸ್) ಕನ್ನಡ ಅನುವಾದ. ಇದು ದೇಜಗೌರವರ ಮೊದಲ ಅನುವಾದ ಕೃತಿಯೂ ಹೌದು. ಸ್ವಾತಂತ್ರ್ಯ ಹೋರಾಟದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡ ನೆಹರೂ ಕುಟುಂಬದ ಅಪರಿಚಿತ ವಿಚಾರಗಳ ಆತ್ಮೀಯ ನಿರೂಪಣೆ ಇಲ್ಲಿದೆ. ಅದರಲ್ಲೂ ನಿರೂಪಕಳು ಅದೇ ಕುಟುಂಬದ ಸದಸ್ಯರಾದಾಗ ಅದಕ್ಕೆ ಹೆಚ್ಚಿನ ಬೆಲೆ, ಮಹತ್ವ ಬರುತ್ತದೆ. ತನ್ನ ಪತಿ ರಾಜಾ ಹಠೀಸಿಂಗ್ ಸೆರೆಮನೆಯಲ್ಲಿದ್ದಾಗ ಒಂಟಿತನದಲ್ಲಿ ನೆನಪುಗಳು ನುಗ್ಗಿ ಬಂದಾಗ ಮೂಡಿಬಂದ ಕೃತಿ ಇದು. ಕೃತಿ ಬಹಳ ಸತ್ವಪೂರ್ಣವಾಗಿರುವುದರಿಂದಲೇ ದೇಜಗೌರವರು ಇದನ್ನು ಭಾಷಾಂತರಿಸುವ ಸಾಹಸಕ್ಕೆ ಳಿದರು. ಜಾನಪದ ಸತ್ವ ಭಾವಗೀತೆಯ ಮಾಧುರ್ಯದಿಂದ ಕೂಡಿದ ಅವರ ಗದ್ಯ ಈ ಕೃತಿಯಲ್ಲಿ ಯಶಸ್ವಿಯಾಗಿ ಮೂಡಿಬಂದಿದೆ. "ಹಮ್ಮು–ಬಿಮ್ಮು" ಶ್ರೇಷ್ಠ ಕಾದಂಬರಿಕಾರಳಾದ ಜೇನ್ ಆಸ್ಟಿನ್‌ಳ 'ಪ್ರೈಡ್ ಅಂಡ್ ಪ್ರೆಜ್ಯುಡೀಸ್'ಕನ್ನಡ ಅನುವಾದ. ಬಂಕವೇ

ಜೀವಾಳವಾದ ಡಾರ್ಸಿ, ಬಿಗುಮಾನವೇ ಬದುಕಾದ ಎಲಿಜಬೆತ್ ಇವರುಗಳ ಸುತ್ತ ಹೆಣದ ನೂರಾರು ಘಟನೆಗಳ ಐವತ್ತರಷ್ಟು ಪಾತ್ರಗಳಿರುವ ಹಾಗೂ ಆ ಪಾತ್ರಗಳ ಸ್ವರೂಪ, ಸ್ವಭಾವಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ಘಟನೆಗಳನ್ನು ಕುಸುರು ಕುಸುರಾಗಿ ನಿರೂಪಿಸುವ ಸೊಗಸನ್ನು ಅನುವಾದದಲ್ಲೂ ಉಳಿಸಿಕೊಳ್ಳಲಾಗಿದೆ. ಸಮಾನಾರ್ಥದ ಪದರಚನೆಯ ಸಮರ್ಪಕತೆ ಬಿಡಿಬಿಡಿಯಾದ ವಾಕ್ಯರಚನೆ ಇವುಗಳಿಂದಾಗಿ ಅನುವಾದದಲ್ಲಿ ಸಹಜತೆ ಕಾಣುತ್ತದೆ.

ಲಾರೆನ್ಸ್ ಬಿನಿಯನ್ನನ 'ಅಕ್ಬರ್' ಕೃತಿಯನ್ನು ಕನ್ನಡಿಸಿದ ದೇಜಗೌರವರು ಸರಳಗನ್ನಡದಲ್ಲಿ ಒಬ್ಬ ಐತಿಹಾಸಿಕ ವ್ಯಕ್ತಿಯ ಬದುಕಿನ ಎಳೆಗಳನ್ನು ಅಷ್ಟೇ ಸರಳವಾಗಿ ನಮ್ಮಮುಂದೆ ತೆರೆದಿಟ್ಟಿದ್ದಾರೆ. ಅಂತರ್ಜಾತಿ ವಿವಾಹ, ಜಾತಿಗಳ ಕಣ್ಮರೆ, ಯುದ್ಧತಂತ್ರ ಆದರ್ಶ ಗುಣಗಳು, ಇವೆಲ್ಲವನ್ನು ತಮ್ಮ ಪ್ರಬುದ್ಧ ಗದ್ಯದಲ್ಲಿ ಸೆರೆಹಿಡಿದಿದ್ದಾರೆ. ಇದು ಜೀವ–ಸಾಮಾಜಿಕ-ಐತಿಹಾಸಿಕ ಪ್ರಜ್ಞೆಗಳು ಮೇಳೈಸಿದ ವಿಶಿಷ್ಟ ಕೃತಿ.

ದೇಜಗೌರವರ ಇತರ ಅನುವಾದಿತ ಕೃತಿಗಳಲ್ಲಿ ಟಾಲ್‌ಸ್ಟಾಯ್ ಕೃತಿಗಳಿಗೆ ಹೆಚ್ಚು ಮಹತ್ವ ಬರುತ್ತದೆ- 'ಪುನರುತ್ಥಾನ" ಟಾಲ್‌ಸ್ಟಾಯ್‌ನ ಎರಡು ನಾಟಕಗಳು' 'ಯುದ್ಧ ಮತ್ತು ಶಾಂತಿ' ಇವುಗಳ ಅನುವಾದದಿಂದಾಗಿ ದೇಜಗೌ ಒಬ್ಬ ಶ್ರೇಷ್ಠ ಅನುವಾದಕರೆಂದು ಕರೆಸಿಕೊಳ್ಳುತ್ತಾರೆ. ಅಲ್ಲದೆ ಅವರ 'ಗುರುನಾನಕ್' 'ಭಾರತದ ಜಾನಪದ ಕಥೆಗಳು' ಕೂಡ ಅನುವಾದ ಸಾಹಿತ್ಯದಲ್ಲಿ ಹೆಸರಾಂತ ಕೃತಿಗಳಾಗಿವೆ. ಹೊರಕೃತಿಗಳನ್ನು ಭಾಷಾಂತರಿಸಿ ಕನ್ನಡ ಸಾಹಿತ್ಯ ಭಂಡಾರವನ್ನು ಹೆಚ್ಚಿಸಬೇಕೆಂಬ ಆಸೆ, ಭಾಷಾಂತರವನ್ನು ಲೀಲಾಜಾಲವಾಗಿ ಮಾಡಬಲ್ಲ ಸಾಮರ್ಥ್ಯ, ಮೂಲಕೃತಿಯ ನ್ನಷ್ಟೇ ತರ್ಜುಮೆಯನ್ನು ಸ್ವಾರಸ್ಯಗೊಳಿಸಬಲ್ಲ ಪ್ರತಿಭೆ ಹಾಗೂ ಶೈಲಿ-ಇವುಗಳಿಂದಾಗಿ ಅನುವಾದ ಕ್ಷೇತ್ರದಲ್ಲಿ ದೇಜಗೌ ಎತ್ತರ ಸ್ಥಾನದಲ್ಲಿ ನಿಲ್ಲುತ್ತಾರೆ.

೨. ದೇಜಗೌ ಭಾಷಾಂತರದಲ್ಲಿ ಟಾಲ್‌ಸ್ಟಾಯ್ ಸಾಹಿತ್ಯ.

ಜಗತ್ತಿನ ಮಹಾ ಕಾದಂಬರಿಕಾರ ಹಾಗೂ ದಾರ್ಶನಿಕ ಲಿಯೋ ಟಾಲ್‌ಸ್ಟಾಯ್‌ನ ಕಾದಂಬರಿಗಳನ್ನು ಕನ್ನಡಕ್ಕೆ ತರಬೇಕೆಂದು ಸಂಕಲ್ಪಿಸಿಕೊಂಡ ದೇಜಗೌ ಅವರ 'ರಿಸರೆಕ್ಷನ್' ಕಾದಂಬರಿಯನ್ನು ಕೇವಲ ಒಂದು ವರ್ಷದಲ್ಲಿ 'ಪುನರುತ್ಥಾನ' ವೆಂದು ಭಾಷಾಂತರಿಸಿ ಕನ್ನಡಿಗರ ಮುಂದೆ ಇಟ್ಟರು "ಇದೊಂದು ಜನ್ಮ ಸಾರ್ಥಕ ಸಾಹಸ ಯೋಜನೆ" ಎಂದು ಹರಿಸಿದವರು ಕುವೆಂಪು,

ಲೂಯಿ ಮಾಡ್ ಎಂಬಾಕೆಯು ಟಾಲ್‌ಸ್ಟಾಯ್‌ರ ಕೃತಿಯನ್ನು 'ರಿಸರೆಕ್ಷನ್' ಎಂದು ಇಂಗ್ಲೀಷ್‌ನಲ್ಲಿ ಅನುವಾದಿಸಿದ್ದು ಅದರ ಒಟ್ಟು ಪುಟಗಳು ೪೯೯. ಕನ್ನಡದಲ್ಲಿ ಇದರ ಗಾತ್ರ ಇನ್ನು ದೊಡ್ಡದು. ಮೂಲ ಕೃತಿಯ ಯಾವ ಭಾಗಕ್ಕೂ ಲೋಪವಾಗದಂತೆ ದೇಜಗೌರವರ ಭಾಷಾಂತರ ಸಾಗಿದೆ. ಅವರ ಎರಡು ಭಾಷೆಗಳ ಮೇಲಣ ಪ್ರಭುತ್ವ ವಾಕ್ಯಗಳ ಲಂಬನಕ್ಕೆ ಅವಕಾಶ ನೀಡಿದೆ. ಅಗತ್ಯವಾದಷ್ಟು ಶಬ್ದಗಳ ಪ್ರಯೋಗದಿಂದ ಮೂಲಕೃತಿ ಕನ್ನಡಕ್ಕೆ ಇಳಿದಿದೆ. ಮೂಲದ

ಸರಳತೆ ಸ್ಪಷ್ಟತೆಗಳು ಅನುವಾದದಲ್ಲಿ ಮೂಡಿ ಬಂದಿದ್ದು ಇದೊಂದು ಸ್ವತಂತ್ರ ಕೃತಿ ಎಂಬ ಭಾವನೆ ಓದುಗರಿಗೆ ಬರುವಂತಿದೆ. 'ಪುನರುತ್ಥಾನ' ಕಾದಂಬರಿ ಜಾರ್ ಚಕ್ರವರ್ತಿಯ ದಬ್ಬಾಳಿಕೆ ಕಾಲದಲ್ಲಿ ರಷ್ಯಾದಲ್ಲಿ ನಡೆದ ಘಟನೆಯೊಂದರ ಮೇಲೆ ಆಧಾರಿತವಾಗಿದೆ. ಮನುಷ್ಯ ಈರ್ಷೆಯನ್ನು ತ್ಯಜಿಸಿ ಪ್ರೇಮಜೀವನವನ್ನು ಪ್ರಾರಂಭಿಸಿದರೆ ಪರಮಾತ್ಮನ ಸಾಕ್ಷಾತ್ಕಾರವಾಗುವುದೆಂಬ ನೀತಿ ಬೋಧನೆ ಈ ಕಾದಂಬರಿಯಲ್ಲಿದೆ

ಟಾಲ್‌ಸ್ಟಾಯ್‌ರವರ 'ಲೈಟ್ ಶೈನ್ಸ್ ಇನ್ ಡಾರ್ಕ್‌ನೆಸ್' ಮತ್ತು 'ದಿ ಕಾಸ್ ಆಫ್ ಇಟ್ ಆಲ್' ಎಂಬ ಎರಡು ರಷ್ಯನ್ ನಾಟಕಗಳನ್ನು ಶ್ರೀಮತಿ ಲೂಯಿ ಮತ್ತು ಶ್ರೀ ಅಲ್‌ಮರ್ ಮಾಡ್ ಇಂಗ್ಲೀಷಿಗೆ ಭಾಷಾಂತರಿಸಿದ್ದು. ಇವುಗಳನ್ನು ದೇಜಗೌ ಅನುವಾದಿಸಿ ಕನ್ನಡಿಗರಿಗೆ ನೀಡಿದ್ದಾರೆ. 'ಕತ್ತಲಲ್ಲಿ ಬೆಳಕು' (ಲೈಟ್ ಶೈನ್ಸ್ ಇನ್ ಡಾರ್ಕ್‌ನೆಸ್) ಟಾಲ್‌ಸ್ಟಾಯ್ ಜೀವನ ಕೆಲವು ಘಟನೆಗಳನ್ನು ಒಳಗೊಂಡಿದ್ದು ಶ್ರೀಮಂತಿಕೆಯ ಬೂಟಾಟಿಕೆ ಜೀವನ ತ್ಯಜಿಸಿ; ಸರಳ ಸುಂದರ ಸಾಮಾನ್ಯ ಬದುಕನ್ನು ಸಾಗಿಸಬೇಕೆನ್ನುವ ಆದರ್ಶಗಳ ಬಗ್ಗೆ ಗಂಡ ಹೆಂಡತಿಯರ ತಿಕ್ಕಾಟವೇ ಈ ನಾಟಕದ ಕಥಾವಸ್ತು. 'ಇದೇ ಅಷ್ಟಕ್ಕೆಲ್ಲಾ ಕಾರಣ' (ದ ಕಾಸ್ ಆಫ್ ಇಟ್ ಆಲ್) ಕೂಡ ನೀತಿ ಬೋಧನೆಯೇ ಕಥಾವಸ್ತುವಾಗಿದ್ದು ಒಬ್ಬ ಅಲೆಮಾರಿ ಕಳ್ಳ ಪಶ್ಚಾತ್ತಾಪಗೊಂಡು ತನ್ನ ಜೀವನವನ್ನು ಬದಲಾಯಿಸಿಕೊಳ್ಳುವುದು ನಾಟಕದ ವಿಷಯ. ಈ ಎರಡು ನಾಟಕಗಳನ್ನು ದೇಜಗೌ ಸೊಗಸಾಗಿ ಭಾಷಾಂತರಿಸಿ, ಸಂಭಾಷಣೆಗಳನ್ನು ಸರಳವಾಗಿ ಬಿಡಿಸಿ, ಅಭಿನಯದಲ್ಲಿ ಪಾತ್ರಗಳ ಉಚ್ಚಾರಣೆಗೆ ಅನುಕೂಲವಾಗುವಂತೆ ಮಾಡಿದ್ದಾರೆ.

೧೮ ಮತ್ತು ೧೯ನೇ ಶತಮಾನದ ಕಾದಂಬರಿಗಳಲ್ಲಿ ಪ್ರಕೃತಿ. ವ್ಯಕ್ತಿ, ಘಟನೆ ಇವುಗಳ ವರ್ಣನೆಗೆ ಪ್ರಾಧಾನ್ಯ ಹೆಚ್ಚು. ಅಂದಿನ ವಾಚಕರಿಗೆ ಇವು ಇಷ್ಟವಾಗಿದ್ದವು. ಕ್ಲಿಷ್ಟಶಬ್ದಗಳ ಗಟ್ಟಿಭಾಷೆಯನ್ನು ಕನ್ನಡಕ್ಕೆ ಇಂಗ್ಲೀಷ್‌ಗೆ ಭಾಷಾಂತರಿಸುವುದು ಬಹಳ ಕಷ್ಟದ ಕೆಲಸ. ಆದರೆ ದೇಜಗೌ ಇವುಗಳನ್ನು ಆಸಕ್ತಿಮೂಡಿಸುವಂತೆ ಭಾಷಾಂತರಿಸಿದ್ದಾರೆ.

೪. ದೇಜಗೌ ಭಾಷಾಂತರದಲ್ಲಿ ಟಾಲ್‌ಸ್ಟಾಯ್‌ರವರ 'ಯುದ್ಧ ಮತ್ತು ಶಾಂತಿ'

ಲಿಯೋಟಾಲ್‌ಸ್ಟಾಯ್‌ರವರ ಮೇರು ಕೃತಿ' 'ಯುದ್ಧ ಮತ್ತು ಶಾಂತಿ ಕಾದಂಬರಿಯ ಮೂರು ಬೃಹತ್ ಸಂಪುಟಗಳನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯ ಮುಗಿಸಿದ ದೇಜಗೌ ಇದನ್ನು ಅವರ ಗುರುಗಳೂ, ಮಾರ್ಗದರ್ಶಕರೂ ಆದ ರಾಷ್ಟ್ರಕವಿ ಕುವೆಂಪುರವರ ಗಮನಕ್ಕೆ ತಂದಾಗ ಅವರ ಮೊದಲ ನುಡಿ. "ಮುಗಿಯಿತೆ ಅದ್ಭುತ ಸಂಗತಿ. ನಿಜಕ್ಕೂ ನಿಮ್ಮ ಜನ್ಮ ಸಾರ್ಥಕವಾಯಿತು" ಎಂದು. ಇದು ಸಾಮಾನ್ಯ ಕಾದಂಬರಿಯಲ್ಲ. ಮೂರು ಸಂಪುಟಗಳು ಸೇರಿ ೧೭೩೪ ಪುಟಗಳಾಗುತ್ತವೆ. ಪ್ರಥಮ ಸಂಪುಟ ೫೮೪ ಪುಟಗಳು, ದ್ವಿತೀಯ ಸಂಪುಟ ೫೮೭ ಪುಟಗಳು ಹಾಗೂ ತೃತೀಯ ಸಂಪುಟ ೫೬೩ ಪುಟಗಳು. ಹೀಗಾಗಿ ಇದೊಂದು ಬೃಹತ್ ಕೃತಿ ಇಷ್ಟು ದೊಡ್ಡ ಕಾರ್ಯವಾದಿ ಮುಗಿಸಿದ್ದಕ್ಕಾಗಿ ಇದು "ಅದ್ಭುತ ಸಂಗತಿ ಎಂಬ ಉದ್ಗಾರ ರಸಋಷಿಗಳ ಬಾಯಿಂದ ಬಂತು.

ಹತ್ತೊಂಬತ್ತನೇ ಶತಮಾನದ ಮಹಾ ಪುರುಷರಲ್ಲಿ ಒಬ್ಬರೂ, ತತ್ವ ಸಮಾಜ ಮುಂತಾದ ನಾನಾ ಸಂಕೀರ್ಣ ಗಂಭೀರ ವಿಚಾರಗಳ ಬಗ್ಗೆ ಆಲೋಚಿಸಿ ನಡೆಸಿದ ಮಹಾನ್ ದಾರ್ಶನಿಕ ವಿಚಾರವಾದಿ, ಮಾನವತಾವಾದಿ ಎಂದು ಪ್ರಕೀರ್ತಿತರಾದ ಟಾಲ್‌ಸ್ಟಾಯ್ ಮಹರ್ಷಿಯ ಶ್ರೇಷ್ಠಕೃತಿ 'ಯುದ್ಧ ಮತ್ತು ಶಾಂತಿ' ಯನ್ನು ಭಾಷಾಂತರಿಸುವುದು ಅಷ್ಟು ಸುಲಭವಲ್ಲ. ಅದನ್ನು ಸಾಧಿಸಿದ ದೇಜಗೌರವರ 'ಜನ್ಮ ಸಾರ್ಥಕವಾಯಿತು ಎಂದರು ರಸಋಷಿ.

ಟಾಲ್‌ಸ್ಟಾಯ್‌ರವರ ಮೂಲ ರಷ್ಯನ್ ಕೃತಿಯನ್ನು ಶ್ರೀಮತಿ ಲೂಯಿ ಮತ್ತು ಶ್ರೀ ಅಲ್ಮರ್‌ಮೂಡ್ ದಂಪತಿಗಳು ಇಂಗ್ಲೀಷಿಗೆ ಭಾಷಾಂತರಿಸಿದ್ದು ಇದನ್ನು ದೇಜಗೌ ಕನ್ನಡೀಕರಿಸಿದ್ದಾರೆ. ಹಾಗಾಗಿ ಇದೊಂದು ಪರೋಕ್ಷಾನುವಾದಕ್ಕೆ ಉದಾಹರಣೆ. ಟಾಲ್‌ಸ್ಟಾಯ್‌ರವರ ಸಾಹಿತ್ಯ ಮತ್ತು ಜೀವನವನ್ನು ಅಧ್ಯಯನ ಮಾಡಲು ತಮ್ಮ ಜೀವನವನ್ನೇ ಮುಡುಪಾಗಿಸಿದ ಮೂಡ್ ದಂಪತಿಗಳು ಟಾಲ್‌ಸ್ಟಾಯ್‌ರವರ ಗಹನ, ಗಂಭೀರ, ಗಾಢ, ಭಾರ ಸಂಕೀರ್ಣ ಶೈಲಿಯನ್ನು ಅರ್ಥ ಮಾಡಿಕೊಂಡು ಅಷ್ಟೇ ಗಂಭೀರವಾಗಿ ಆಂಗ್ಲ ಭಾಷಾಂತರ ಮಾಡಿದ್ದಾರೆ. ದೇಜಗೌರವರ ನುರಿತ ಕೈಯಲ್ಲಿ ಕನ್ನಡ ಭಾಷಾಂತರವೂ ಅಷ್ಟೇ ಗಂಭೀರವಾಗಿ ಮೂಡಿ ಬಂದಿದೆ. ಮೂಡ್ ದಂಪತಿಗಳು ರಷ್ಯನ್ ಭಾಷೆಯನ್ನು ಕಲಿತು. ಅವರಲ್ಲಿ ಪ್ರಾವಿಣ್ಯತೆಯನ್ನು ಸಂಪಾದಿಸಿ, ಟಾಲ್‌ಸ್ಟಾಯ್‌ರವರ ಜೊತೆಗಿದ್ದು, ಅವರ ವಿಚಾರ, ಮನೋಧರ್ಮಗಳನ್ನು ಅರ್ಥ ಮಾಡಿಕೊಂಡು ತಮ್ಮ ಭಾಷಾಂತರ ಓದಿಹೇಳಿ ಅವರಿಂದ ಅಂಗೀಕಾರ ಪಡೆದು ನಡೆಸಿದ ಮಹಾನ್ ತಪಸ್ಸಿನ ಫಲ ಈ ಕೃತಿಗಳು. ಆದ್ದರಿಂದ ಅವರ ಭಾಷಾಂತರಗಳು ಮೂಲಕ್ಕೆ ಹತ್ತಿರವಾಗಿದ್ದು, ಖಚಿತತೆ, ಸ್ಪಷ್ಟತೆಯಿಂದ ಕೂಡಿವೆ. 'ಯುದ್ದ ಮತ್ತು ಶಾಂತಿ' ಕನ್ನಡ ಅವತರಣಿಕೆ ಕೂಡ ಅಂತಹ ಒಂದು ತಪಸ್ಸಿನ ಫಲ. ಅದನ್ನು ಓದಿದಾಗ ಮೂಲವನ್ನು ಓದಿದ ಸಂತೃಪ್ತಿ ಸಿಗುತ್ತದೆ.

ಭಾಷಾಂತರ ಒಂದು ಕ್ಲಿಷ್ಟ ಪರಿಶ್ರಮ ದಾಯಕ ಕ್ರಿಯೆ. ಆದರೂ ಇದಕ್ಕೆ ಸಾಮಾನ್ಯ ಸಾಹಿತ್ಯಕ್ಕಿರುವ ಮಹತ್ವವಿಲ್ಲ. ಒಂದು ರೀತಿಯ ತಿರಸ್ಕೃತ ಮನೋಭಾವನೆ ಈ ಬಗ್ಗೆ ಇದೆ. ಅದರಲ್ಲೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಭಾಷಾಂತರಕ್ಕೆ ಇನ್ನೂ ಮಹತ್ವ ಸ್ಥಾನ ದೊರೆತಿಲ್ಲ. ದೇಜಗೌರವರಂತಹ ಸಾಹಿತ್ಯ ಜಗತ್ತಿನ ತಪಸ್ವಿಗಳು ಭಾಷಾಂತರ ವನ್ನು ಕೈಗೆತ್ತಿಕೊಂಡಾಗ ಅದು ನಿಜ ವಾಗಿಯೂ "ಪುನರುತ್ಥಾನ"ಗೊಂಡಿದೆ. ಯುದ್ದ ಮತ್ತು ಶಾಂತಿ ಹೊರ ಬಂದಾಗ ಭಾಷಾಂತರ ಸಾಹಿತ್ಯದಲ್ಲಿ ಮರ್‍ಯಾದೆಯ ಸ್ಥಾನ ಪಡೆಯಿತು. ಇದೂ ಒಂದು ತಪಸ್ಸಾಧ್ಯವಾದ ಮಹಾಕಾರ್ಯವೆಂದು 'ಯುದ್ದ ಮತ್ತು ಶಾಂತಿ' ತೋರಿಸಿ ಕೊಟ್ಟಿದೆ.

ಟಾಲ್‌ಸ್ಟಾಯ್‌ರವರ ಲೇಖನಿ ತಾತ್ವಿಕ ವಿಷಯಗಳ ಬಗ್ಗೆ ಬರೆಯುವಾಗ ಗಂಭೀರ ವಾಗುತ್ತದೆ. ಆಗ ಭಾಷೆ ಜಟಿಲವಾಗುತ್ತದೆ. ಸಂಕೀರ್ಣ, ಸಮ್ಮಿಶ್ರ ವಾಕ್ಯಗಳು ಸೃಷ್ಟಿಯಾಗುತ್ತವೆ. ಕೆಲವೊಮ್ಮೆ ಒಂದೊಂದು ವಾಕ್ಯ ಅರ್ಥ ಮುಕ್ಕಾಲು

ಪುಟದಷ್ಟು ಹರಿಯುತ್ತದೆ. ಕೆಲವೊಮ್ಮೆ ಅವು ಸುತ್ತು ಬಳಸೂ ಆಗುತ್ತವೆ. ಇವುಗಳನ್ನು ಭಾಷಾಂತರಿಸುವಾಗ ಅಪಾರ ಜಾಣ್ಮೆ ಪ್ರದರ್ಶಿಸಿದ್ದಾರೆ. ಇಂಗ್ಲಿಷ್ ಭಾಷಾಂತರದಲ್ಲಿ ಕೆಲವೊಂದು ಪುನರಾವರ್ತಿತದೋಷಗಳು ಕಂಡುಬಂದರೆ, ಕನ್ನಡ ಭಾಷಾಂತರದಲ್ಲಿ ಕನ್ನಡ ಜಾಯಮಾನಕ್ಕೆ ಅನುಗುಣವಾಗಿ ಕೆಲವೊಂದು ಬದಲಾವಣೆಗಳಾಗಿವೆ. ಫ್ರೆಂಚ್ ಭಾಷೆಯ ನುಡಿಗಟ್ಟುಗಳು ಜಾರಿಹೋಗಿವೆ. ಆದರೂ ಭಾಷಾಂತರ ಪರಿಶ್ರಮ, ಪ್ರಾಮಾಣಿಕತೆ, ಪ್ರತಿಭೆ, ವಿದ್ವತ್ತು, ಶ್ರದ್ಧೆ, ಸಂಶೋಧನೆಯಿಂದಾಗಿ ಕನ್ನಡ ಭಾಷಾಂತರ ಪರೋಕ್ಷಾನುವಾದವಾದರೂ ಕೂಡ ಟಾಲ್ ಸ್ಟಾಯ್‌ರವರ ಮೂಲ ಕೃತಿಗೆ ದ್ರೋಹ ಬಗೆದಿಲ್ಲವೆಂದು ಯಾವುದೇ ಸಂಕೋಚವಿಲ್ಲದೇ ಹೇಳಬಹುದು.

೫. 'ಯುದ್ಧ ಮತ್ತು ಶಾಂತಿ'ಯ ಕಥಾವಸ್ತು

೧೮೦೫ ರಿಂದ ೧೮೧೫ ರ ವರೆಗೆ ನಡೆದ ನೆಪೋಲಿಯನ್ ಯುದ್ಧಗಳ ಸಮಯದಲ್ಲಿನ ರಷ್ಯಾದ ಕುರಿತಾಗಿ ಹೇಳುವ ಮಹಾನ್ ಕಾದಂಬರಿಯೇ 'ಯುದ್ಧ ಮತ್ತು ಶಾಂತಿ' ಇದರ ಕೊನೆಯಲ್ಲಿ ೧೮೨೦ ರ ಅವಧಿಯ ಉಪ ಸಂಹಾರವಿದೆ. ೧೮೦೫ ರಲ್ಲಿ ತನನ್ನು ಚಕ್ರವರ್ತಿ ಎಂದು ಘೋಷಿಸಕೊಂಡ ನೆಪೋಲಿಯನ್ ಮಧ್ಯ ಯೂರೋಪನ್ನು ಆಕ್ರಮಿಸಿಕೊಳ್ಳಲು ಹೊರಟ ಸನ್ನಿವೇಶವೇ ಈ ಕಾದಂಬರಿಯ ಚಾರಿತ್ರಿಕ ಹಿನ್ನೆಲೆ. ಇವರ ವಿರುದ್ಧ ಜೊತೆಗೂಡಿದವರು-ರಷ್ಯಾ, ಪ್ರಶ್ಯಾ, ಮತ್ತು ಆಸ್ಟ್ರಿಯ. ಇವುಗಳನ್ನು ಉಮ್ ಆಸ್ಟರ್‌ರಿಜ್ ಮತ್ತು ಜೆನಾಗಳಲ್ಲಿ ನಡೆದ ಕದನದಲ್ಲಿ ಸೋಲಿಸಿ ನೆಪೋಲಿಯನ್ ಜಯಗಳಿಸಿದನು. ಸ್ವಲ್ಪ ಸಮಯ ಝಾರ್ ಇವನೊಂದಿಗೆ ರಾಜಿ ಮಾಡಿಕೊಂಡ (ಟಿಲ್‌ಸಿಟ್ ೧೮೦೭) ಹಾಗೂ ತನ್ನ ಹಳೆಯ ಶತ್ರು ಜೊತೆ ಸೇರಿ ಪ್ರಪಂಚವನ್ನು ವಿಭಾಗ ಮಾಡುವ ಕನಸನ್ನೂ ಕಂಡ. ಈ ಶಾಂತಿ ತಾತ್ಕಾಲಿಕವಾಗಿತ್ತು. ೧೮೧೨ರಲ್ಲಿ ಫ್ರೆಂಚರು ಮತ್ತೆ ಪೂರ್ವದ ಮೇಲೆ ಧಾಳಿ ಮಾಡಿದರು. ರಷ್ಯದ ಸೇನೆ ತನ್ನ ನೆಲದ ಮೇಲೆ ಹೋರಾಟ ಮಾಡುತ್ತಾ ಹಿಂದಕ್ಕೆ ಸರಿಯಿತು. ನೆಪೋಲಿಯನ್ ಸೇನೆ ಮುಂದುವರಿಯಿತು. ೧೮೧೨ ರ ಸೆಪ್ಟೆಂಬರ್ ೭ ರಂದು ಬೊರೋಡಿನೋದಲ್ಲಿ ನಡೆದ ಯುದ್ಧದಲ್ಲಿ ರಷ್ಯಾ ಮಾಸ್ಕೋವನ್ನು ಫ್ರೆಂಚರಿಗೆ ಬಿಟ್ಟುಕೊಟ್ಟು ಹಿಂದಕ್ಕೆ ಸರಿಯಿತು. ಈ ಹಂತದಲ್ಲಿ ರಷ್ಯಾ ಶಾಂತಿ ಸಂಧಾನ ಮಾಡಿಕೊಳ್ಳಬಹುದೆಂದು ನೆಪೋಲಿಯನ್ ನಿರೀಕ್ಷಿಸಿದ. ಇದಕ್ಕೆ ಬದಲಾಗಿ ಅವರು ಮಾಸ್ಕೋ ನಗರವನ್ನು ಸುಟ್ಟು ನೆಲಸಮ ಮಾಡಿದರು. ಮಾಸ್ಕೋ ತನಗೆ ದಕ್ಕದಿದ್ದಾಗ ನಪೋಲಿಯನ್ ಮಣ್ಣು ಮತ್ತು ಹಿಮದ ಮಾರ್ಗವಾಗಿ ಪೋಲೆಂಡಿನ ಕಡೆಗೆ ಹಿಂದಿರುಗಿದ. ಆಗ ರಷ್ಯನ್ನರು ಇವನ ಸೇನೆ ಮೇಲೆ ದಾಳಿ ಮಾಡಿ ಕಿರುಕುಳ ಕೊಟ್ಟರು. ೧೮೧೨ ರ ಡಿಸೆಂಬರ್ ಹೊತ್ತಿಗೆ ಫ್ರೆಂಚ್ ಸೈನ್ಯ ಕರಗಿ ಹೋಗಿ ನೆಪೋಲಿಯನ್ ಸೈನ್ಯ ಮರಣಾಂತಕ ಪೆಟ್ಟನ್ನು ತಿಂದಿತು.

ರಷ್ಯಾದ ಆಂತರಿಕ ರಾಜಕೀಯ ಘಟನಾವಳಿಗಳನ್ನು ಪ್ರತಿಬಿಂಬಿಸುತ್ತದೆ. ಝಾರ್ ೧೮೦೧ ರಲ್ಲಿ ಸಿಂಹಾಸನವೇರಿದ. ಆಗ ರಷ್ಯಾದ ಶ್ರೀಮಂತ ವರ್ಗದ ಮೇಲೆ ಫ್ರೆಂಚ ಪ್ರಭಾವ ಹೆಚ್ಚಾಗಿತ್ತು. ಅಲೆಕ್ಸಾಂಡರ್

ಯೂರೋಪಿನ ಉದಾರ ವಾದಕ್ಕೆ ಮರುಳಾಗಿದ್ದ. ಸ್ವಲ್ಪ ಕಾಲ ಕೌಂಟ್ ಸ್ಪೆರಾನ್ಸ್ಕಿಯ ನೇತೃತ್ವದಲ್ಲಿ ರಷ್ಯಾ ಸಂವಿಧಾನ ಸುಧಾರಣೆಯ ಪ್ರಾರಂಭವನ್ನು ಮಾಡಿತು. ೧೮೧೨ರಲ್ಲಿ ದೇಶೀಯ ಪ್ರಜ್ಞೆ ಮರುಕಳಿಸಿ ಫ್ರೆಂಚ್ ವಿರುದ್ಧ ಭಾವನೆ ಎಲ್ಲೆಡೆ ಕಂಡು ಬಂತು. ಸ್ಪೆರಾನ್ಸ್ಕಿಯನ್ನು ವಜಾ ಮಾಡಲಾಯಿತು. ದೇಶೀಯ ಪ್ರಜ್ಞೆ ಸಂರಕ್ಷಕರು ಪುನಃ ಅಧಿಕಾರಕ್ಕೆ ಬಂದರು. ೧೮೨೫ರ ಹೊತ್ತಿಗೆ ಇದು ಕೆಲವು ಮೇಲ್ವರ್ಗದ ಜನ ದಂಗೆ ಏಳಲು (ಡಿಸೆಂಬರಿಗಳ ಪಿತೂರಿ) ಕಾರಣವಾಗಿ ಕೊನೆಗೆ ಧಾರುಣವಾಗಿ ಕೊನೆಗೊಂಡಿತು.

ಈ ಹಿನ್ನಲೆಯಲ್ಲಿ ಟಾಲ್‌ಸ್ಟಾಯ್ ಉನ್ನತ ಸ್ಥಾನದಲ್ಲಿದ್ದ ಮೂರು ಜನ ಯುವಕರ ಕಥೆಯನ್ನು ಈ ಯುದ್ಧ ಮತ್ತು ಶಾಂತಿ' ಯಲ್ಲಿ ಹೇಳುತ್ತಾನೆ. ಇವರ ಜೊತೆಗೆ ಇವರ ಸ್ನೇಹಿತರ ಮತ್ತು ಕುಟುಂಬದವರ ಕಥೆಯು ಸಮ್ಮಿಳನಗೊಂಡಿದೆ. ಝಾರ್‌ನಿಂದ ಗುಲಾಮನವರೆಗೆ ಸುಮಾರು ನೂರು ಪಾತ್ರಗಳನ್ನು ಈ ಕಾದಂಬರಿಯಲ್ಲಿ ಹೆಸರಿಸಲಾಗಿದೆ. ಸಾಮ್ರಾಜ್ಯದ ಮಂಡಳಿಗಳಿಂದ ಹಿಡಿದು ಸಾಮಾನ್ಯ ಸೈನಿಕರ ಸಮಾನರ ಮಾತುಗಳನ್ನು ಒಳಗೊಂಡಂತೆ ಘಟನಾವಳಿಗಳು ಪ್ರತಿಬಿಂಬಿತಗೊಂಡಿವೆ. ಕಾದಂಬರಿಯಲ್ಲಿ ಹೆಚ್ಚು ಬೆಳಕು ಬೀರಿದ್ದು ಈ ಮೂವರ ಮೇಲೆ.ರಾಜಕುಮಾರ ಆಂಡ್ರಿ ಚಾಲ್ಕೋನ್‌ಸ್ಕಿ, ಕೌಂಟ್ ಪೆರಿಬೆಜುಹೋವ್ ಮತ್ತು ಕೌಂಟ್ ನಿಕೊಲಾಯ್ ರೋಸ್ತೋವ್,

೬. ಟಾಲ್‌ಸ್ಟಾಯ್‌ನ ಯುದ್ಧ ಮತ್ತು ಶಾಂತಿ ಕಾದಂಬರಿಯ ಮಹತ್ವ.

'ಯುದ್ಧ ಮತ್ತು ಶಾಂತಿ' ಯಲ್ಲಿ ಟಾಲ್‌ಸ್ಟಾಯ್‌ನ ವೈಯುಕ್ತಿಕ ಬದುಕು ತೋರಿಕೊಂಡಿದೆ. ಅವನ ಕುಟುಂಬದ ಅನೇಕ ಸದಸ್ಯರು ಇಲ್ಲಿ ಪಾತ್ರಧಾರಿಗಳಾಗಿದ್ದಾರೆ. ಹಾಗಾಗಿ ರಾಜಕುಮಾರ ಬಾಲ್ಕೋನ್‌ಸ್ಕಿ ಟಾಲ್‌ಸ್ಟಾಯ್‌ಯ ತಾಯಿ ಕಡೆಯಿಂದ ಅಜ್ಜ, ರಾಜಕುಮಾರ ವಾಲ್ಕೊಂಸ್ಕಿ ನಿಕಲಾಯ್ ಮತ್ತು ಇಲ್ಯಾರೋಸ್ತೋವ್ ಅವನ ತಂದೆ ಹಾಗೂ ತಂದೆ ಕಡೆಯ ಅಜ್ಜ. ಸೋನಿಯಾ ಮತ್ತು ಮರಿಯಾಗಳನ್ನು ಹೋಲುವವರೂ ಕುಟುಂಬದಲ್ಲಿ ಇದ್ದಾರೆ. ಈ ಎರಡೂ ಕುಟುಂಬಗಳ ಸಂಬಂಧ, ಕಾದಂಬರಿಯಲ್ಲಿ ಪ್ರತಿಬಿಂಬಿತವಾಗಿದೆ.

'ಯುದ್ಧ ಮತ್ತು ಶಾಂತಿ' ಟಾಲ್‌ಸ್ಟಾಯ್‌ನ ಮಹತ್ಸಾಧನೆ. ಇದೊಂದು ಕಾದಂಬರಿಯಲ್ಲ. ಮಹಾಗ್ರಂಥ, ಮೂರು ಸಾಮಾನ್ಯ ಕಾದಂಬರಿಗಳಿಗೆ ಬೇಕಾದಷ್ಟು ಕಥಾವಸ್ತು ಇದರಲ್ಲಿದೆ. ಟಾಲ್‌ಸ್ಟಾಯ್ ನಮಗೆ ಮೂರು ಜನ ನಾಯಕರನ್ನು ನೀಡಿದ್ದಾರೆ. ಅವರುಗಳನ್ನು ಸೈನ್ಯಗಳ, ಚಕ್ರವರ್ತಿಗಳ ಮತ್ತು ಐರೋಪ್ಯ ಚರಿತ್ರೆಯ ಏರಿಬರುವ ಅಲೆಗಳ ಹಿನ್ನಲೆಯಲ್ಲಿ ಸ್ಥಾಪಿಸಲಾಗಿದೆ. ಈ ಕಾದಂಬರಿಯನ್ನು ನಾವು ಅನೇಕ ದೃಷ್ಟಿಕೋನದಿಂದ ನೋಡಬಹುದು. ಅದರಲ್ಲಿ ಮುಖ್ಯವಾದುದು ಅದನ್ನು ರಷ್ಯನ್ ಸಮಾಜದ ಹಿನ್ನಲೆಯಲ್ಲಿ ಅದರಲ್ಲೂ ಮುಖ್ಯವಾಗಿ ಶ್ರೀಮಂತ ವರ್ಗದ ಹಿನ್ನಲೆಯಲ್ಲಿ ನೋಡುವುದು. ಇದರಲ್ಲಿ ಮುಂದುವರೆದ ವರ್ಗವಿದೆ.

ಇವರು ಪಾಶ್ಚಾತ್ಯೀಕರಣಗೊಂಡ ಮೇಲ್ವರ್ಗದವರು. ಫ್ರೆಂಚ್ ಭಾಷೆಯನ್ನು ಮಾತೃಭಾಷೆ ಎನ್ನುವಂತೆ ಸಲೀಸಾಗಿ ಮಾತನಾಡುವವರು. ವೈಭವದಿಂದ ಜೀವನ ನಡೆಸುವ ಇವರು ಆಳ್ವಿಕೆ ಮಾಡುವುದಾಗಿಯೇ ಹುಟ್ಟಿಬಂದವರೆನ್ನುವ ಪ್ರಬಲ ನಂಬಿಕೆ ಇಟ್ಟುಕೊಂಡಿರುವ ಜನ. ಇನ್ನೊಂದು ಕಡೆ ಇರುವವರು ಗುಲಾಮರು, ಇವರ ಬದುಕು ಸಮಾಜದ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. ಸಮಾಜದಲ್ಲಿನ ಈ ವೈಪಲ್ಯಗಳನ್ನು ಕಾದಂಬರಿಯಲ್ಲಿ ತೋರಿಸಿದರೂ ಟಾಲ್‌ಸ್ಟಾಯ್ ವರ್ಗ ಸಂಘರ್ಷಕ್ಕೆ ಹೆಚ್ಚು ಒತ್ತು ನೀಡುವುದಿಲ್ಲ. ಒಂದು ಸಂದರ್ಭದಲ್ಲಿ ಬೊಗೋಚರಾನ್‌ನಲ್ಲಿ, ಅತೃಪ್ತಿಯು ಹೊಗೆಯಾಡುತ್ತದೆ. ಆದರೆ ಯಜಮಾನ ಮತ್ತು ಸೇವಕನ ಸಂಬಂಧ ಬಹಳ ಸಹಜವಾಗಿದ್ದು ಎಲ್ಲೂ ಘರ್ಷಣೆಗೆ ಅವಕಾಶವಿಲ್ಲ. ಇಂತಹ ಸಹಜ ಸಂಬಂಧ ರೊಸ್ತೋವ್ ಮತ್ತು ಡ್ಯಾನಿಡೋ ಮಧ್ಯೆ ಅಥವಾ ಇಲಾಗಿನ್ ಮತ್ತು ಅವನ ಮನೆಯಾಳಿನ ಮಧ್ಯೆ ಕಾಣಬಹುದು. ಕಾದಂಬರಿಯಿಂದ ಎದ್ದು ಕಾಣುವ ಒಂದು ವರ್ಗವೆಂದರೆ–ಮಧ್ಯಮವರ್ಗ ; ವ್ಯಾಪಾರಿಗಳು ಸಾಮಾನ್ಯ ಅಧಿಕಾರಿಗಳು, ಮತ್ತು ಸಣ್ಣಪುಟ್ಟ ಪಾದ್ರಿಗಳು. ಶ್ರೀಮಂತ ಟಾಲ್‌ಸ್ಟಾಯ್‌ಗೆ ರಷ್ಯಾದ ಸಾಮಾನ್ಯ ಜನರ ಮೇಲೆ ಪ್ರೀತಿ ವಿಶ್ವಾಸ ಇರುವುದು ಕಂಡು ಬರುತ್ತದೆ. ಆದರೆ ಸಮಾಜದ ಮೆಟ್ಟಿಲು ಹತ್ತುತ್ತಿರುವವರ ಮೇಲೆ ಅಂತಹ ಪ್ರೀತಿ ವ್ಯಕ್ತವಾಗುವುದಿಲ್ಲ.

'ಯುದ್ಧ ಮತ್ತು ಶಾಂತಿ' ಯ ವೇದಿಕೆ ಕೇವಲ ರಷ್ಯಾ ಮಾತ್ರವಲ್ಲ. ಪೂರ್ತಿಯಾಗಿ ಯೂರೋಪನ್ನು ಆವರಿಸಿಕೊಂಡಿದೆ. ಯುರೋಪಿನ ಉದ್ದಗಲಕ್ಕೂ ತಮ್ಮ ತಮ್ಮಲ್ಲೇ ಹೋರಾಡುವ ವಿಭಿನ್ನ ಶಕ್ತಿಗಳ ಬಗ್ಗೆ ಟಾಲ್‌ಸ್ಟಾಯ್ ಗಮನಹರಿಸಿದ್ದಾನೆ. ಚರಿತ್ರೆಯಲ್ಲಿ ಘಟನಾವಳಿಗಳನ್ನು ನಾಯಕರು ನಿಯಂತ್ರಿಸುತ್ತಾರೆಂಬುದು ಪ್ರತೀತಿ. ಆದರೆ ಟಾಲ್‌ಸ್ಟಾಯ್ ಈ ನಾಯಕರುಗಳನ್ನು ಚರಿತ್ರೆಯ ಒಂದು ಉಪಕರಣವನ್ನಾಗಿ ಬಳಸಿದ್ದಾನೆಯೇ ಹೊರತು ಚರಿತ್ರೆಯ ನಿರ್ಮಾಪಕರನ್ನಾಗಿ ಅಲ್ಲ. ಸೇನಾಧಿಪತಿಗಳು ಹಾಗೂ ರಾಜಕಾರಣಿಗಳು ತಾವು ನಿಯಂತ್ರಿಸುತ್ತೇವೆ ಎಂದು ನಂಬಿದ ಶಕ್ತಿಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಇಲ್ಲದವರು. ಟಾಲ್‌ಸ್ಟಾಯ್ ದೃಷ್ಟಿಯಲ್ಲಿ ನೆಪೋಲಿಯನ್ ಕೂಡ ಒಬ್ಬ ತೋರಿಕೆಯ ಸಾಹಸಗಾರ. ಘಟನಾವಳಿಗಳ ಅಲೆ ಅವನ ವಿರುದ್ಧ ಏರಿ ಬಂದಾಗ ಅಸಹಾಯಕತೆಯನ್ನು ವ್ಯಕ್ತಪಡಿಸುವಾತ. ಕಥೆಯಲ್ಲಿ ಬರುವ ಚಾರಿತ್ರಿಕ ವ್ಯಕ್ತಿಗಳ ಬಗ್ಗೆ ಯಾರಿಗೆ ಹೆಚ್ಚು ಟಾಲ್‌ಸ್ಟಾಯ್ ಕರುಣೆ ತೋರಿಸುತ್ತಾನೆ ಅಂದರೆ ಝಾರ್ ಅಲ್ಲ. ಅತಿ ಬುದ್ಧಿವಂತ ಉದಾರವಾದಿ ಮಂತ್ರಿ ಸ್ಪೆರಾನ್‌ಸ್ಕಿ ಅಲ್ಲ. ಒಬ್ಬ ಮುದಿ ಮಂದ, ವಿಚಾರಹೀನ ಸೈನಿಕ ಕುತುಜೋವ್. ಈತ ಅವನಿಗೇ ಬಿಟ್ಟಲ್ಲಿ ಯುದ್ಧ ಮಾಡದೇ ತಪ್ಪಿಸಿಕೊಳ್ಳುವವ ಹಾಗೂ ಇತಿಹಾಸದ ಗತಿ ತನಗೆ ಹೇಗೆ ಅನುಕೂಲಕರವಾಗಿದೆ ಎಂದು ತಿಳಿದುಕೊಳ್ಳುವ ಸಾಮರ್ಥ್ಯ ಇರುವ ರಷ್ಯನ್ ಚಾರಿತ್ರದ ವ್ಯಕ್ತಿ.

ಕಾದಂಬರಿಯ ಹೆಸರೇ ಸೂಚಿಸುವಂತೆ ಯುದ್ಧ ಹಾಗೂ ಶಾಂತಿಯ ಪ್ರಭಾವ

ಕಾದಂಬರಿಯ ಪ್ರತಿಯೊಂದು ಪಾತ್ರದ ಮೇಲೂ ಬಿದ್ದಿದೆ. ಯುದ್ಧ ಮತ್ತು ಶಾಂತಿಯಂತೆಯೇ ಕಾದಂಬರಿಯಲ್ಲಿ ಇನ್ನೂ ಅನೇಕ ವಿರುದ್ಧ ವಿಚಾರಗಳೂ, ತಿಕ್ಕಾಟಗಳನ್ನು ಕಾಣಬಹುದು. ಶ್ರೀಮಂತರ ಹಾಗೂ ಸಾಮಾನ್ಯರ, ಫ್ರೆಂಚ್ ಮತ್ತು ರಷ್ಯನ್ ಭಾಷೆಗಳ, ಆಸ್ಥಾನಗಳ ಹಾಗೂ ಹಳ್ಳಿಗಳ ಠಾಕುಠೀಕಾದ ಹಾಗೂ ಸರಳ ಮನುಷ್ಯರ ದೃವೀಕರಣವನ್ನು ನಾವು ಕಾದಂಬರಿಯಲ್ಲಿ ಕಾಣುತ್ತೇವೆ. ಒಂದು ಕಡೆ ಪಿಯರಿಯಂತಹ ಆತ್ಮೀಯ ವ್ಯಕ್ತಿಗಳ ಪರಿಚಯವಾದರೆ ಇನ್ನೊಂದು ಕಡೆ ಕುರುಗಿನ್ಸ್‌ನಂತಹ ದುಷ್ಟ ಅತ್ತೆ ಮಾವಂದಿರನ್ನು ಕಾಣುತ್ತೇವೆ. ಬುದ್ಧಿವಂತ ಕ್ರಿಯಾಶೀಲ, ವಿಚಾರವಾದಿಗಳಾದ ಬೋಲ್ಕೋಸ್ಕೀನ್ ಒಂದುಕಡೆಯಾದರೆ, ಇಷ್ಟಪಡದಂಥ ಕೆಟ್ಟಸ್ವಭಾವದ ರೊಸ್ತೋನ್ ಇನ್ನೊಂದು ಕಡೆ. ಅತ್ಯಾಧುನಿಕ ಚಟುವಟಿಕೆಯ ಹೊಸ ರಾಜಧಾನಿ ಒಂದು ಕಡೆಯಾದರೆ ಅನುಕೂಲತೆಯುಳ್ಳ, ಹಳೇ ರಾಜಧಾನಿ ಇನ್ನೊಂದು ಕಡೆ. ರಷ್ತೋವನ ಔತಣಕೂಟದ ಅದ್ದೂರಿ ಒಂದು ಕಡೆ. ಕೌಂಟ್ ಬೆಜುವೋವ್‌ನ ಸಾವಿನ ಗಂಭೀರತೆ ಇನ್ನೊಂದು ಕಡೆ. ಆಂಡ್ರಿಯ ಬದುಕಿನ ಹುರುಪು ಒಂದೆಡೆ. ಬದುಕಿನಲ್ಲಿ ನಿರುತ್ಸಾಹ ಇನ್ನೊಂದೆಡೆ. ವೈಜ್ಞಾನಿಕವಾಗಿ ವಿಚಾರ ಮಾಡುವ ಜರ್ಮನ್ ಸೇನಾಧಿಪತಿಗಳ ಹಾಗೂ ಮನಸ್ಸಿಗೆ ತೋಚಿದಂತೆ ನಡೆಯುವ ಬೆಜುವೋವ್ ನಡುವಿನ ಘರ್ಷಣೆ, ಚಕ್ರವರ್ತಿಯನ್ನು ಕೊಲ್ಲಲು ಹೊರಟು ಒಂದು ಮಗುವನ್ನು ಬದುಕಿಸಿದ ಪಿಯರಿಯಂತಹ ವ್ಯಕ್ತಿತ್ವದಲ್ಲಿರುವ ದಂದ್ವ. ಇವೆಲ್ಲವೂ ಒಂದು ರೀತಿಯ ನಾಟಕೀಯ ಒತ್ತಡವನ್ನು ಕಾದಂಬರಿಯಲ್ಲಿ ಸೃಷ್ಟಿಸುತ್ತವೆ. ಇದನ್ನು ಟಾಲ್‌ಸ್ಟಾಯ್ ಚುರುಕಿನ ವೇಗ ಗತಿಯನ್ನು ಸೂಚಿಸುವ ಸಣ್ಣ ವಿಭಾಗಗಳನ್ನಾಗಿ ಮಾಡಿ ಸನ್ನಿವೇಶಗಳನ್ನು ಅಷ್ಟೇ ವೇಗದಲ್ಲಿ ಬದಲಿಸಿ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಬರುವಂತೆ ಮಾಡಿದ್ದು ಈ ಕಾದಂಬರಿಯ ವಿಶೇಷತೆ.

'ಯುದ್ಧ ಮತ್ತು ಶಾಂತಿ' ಕಾದಂಬರಿಯಲ್ಲಿ ಪಾತ್ರಗಳು ಇಡೀ ಕಾದಂಬರಿಯಲ್ಲಿ ತುಂಬಿಕೊಂಡಿವೆ. ಆದರೆ ಇವೆಲ್ಲವೂ ವಿಭಿನ್ನ ಪಾತ್ರಗಳು. ಕೆಲವೊಂದು ಸಾಮಾನ್ಯ ಪಾತ್ರಗಳಾಗಿದ್ದರೂ ನೆನಪಿಡಬಹುದಾದ ತನ್ನದೇ ವ್ಯಕ್ತಿತ್ವ ಹೊಂದಿದವುಗಳು. ಒಟ್ಟನಲ್ಲಿ ಸಾಮಾನ್ಯ ಪಾತ್ರಗಳು ಬೇರೆ ಪಾತ್ರಗಳಿಗೆ ಹೋಲಿಸಿದರೆ ಅಷ್ಟು ವೇಗದಿಂದ ಸಾಗುವುದಿಲ್ಲ. ಅವುಗಳನ್ನು ಅಂದವಾಗಿ ಚಿತ್ರಿಸಿದ್ದರೂ ಹೊರಗಿನಿಂದ ತೋರಿಸಲಾಗಿದೆ. ಅವುಗಳಲ್ಲಿ ಬದಲಾವಣೆ ಅಷ್ಟಾಗಿ ಕಾಣುವುದಿಲ್ಲ. ಬದಲಿಗೆ ಪಿಯರಿ, ಆಂಡ್ರಿ, ನಿಕೊಲಾಯ್ ಮತ್ತು ನತಾಷ ಇವರುಗಳದು ಪ್ರಮುಖ ವಿಸ್ತಾರವಾದ ಪರಿಪೂರ್ಣ ಪಾತ್ರಗಳು. ಇವರುಗಳನ್ನು ನಾವು ಅನೇಕ ದೃಷ್ಟಿಯಿಂದ ನೋಡುತ್ತೇವೆ. ಪರಸ್ಪರರಿಗೆ ಕಾಣಿಸಿಕೊಳ್ಳುವ ರೀತಿಯಲ್ಲಿ, ಅಪರಿಚಿತರಿಗಾಗಿ ಅವರವರ ದೃಷ್ಟಿಯಲ್ಲಿ ಅದಲ್ಲದೆ ಇವರುಗಳು ಪ್ರೌಢರಾದಂತೆ ಬದಲಾವಣೆಯಾಗುತ್ತ ಹೋಗುತ್ತಾರೆ. ನತಾಷ ಒಬ್ಬ ಚಿಕ್ಕ ಹುಡುಗಿಯಿಂದ ಚಂಚಲ ಕನ್ಯೆಯಾಗಿ ಬೆಳೆದು ಒಬ್ಬ ಸ್ಥಿರ ಹೆಂಡತಿಯಾಗಿ ಕೊನೆಗೊಳ್ಳುತ್ತಾಳೆ. ನಿಕೊಲಾಯ್ ಕೆಟ್ಟ ನಡತೆಯನ್ನು ತೋರಿಸಿದರೂ ಕೊನೆಯಲ್ಲಿ ಒಬ್ಬ

ಜವಾಬ್ದಾರಿಯುತ ಹಳ್ಳಿಯ ಮುಖ್ಯಸ್ಥನಾಗಿ ಬೆಳೆಯುತ್ತಾನೆ. ಅದೇ ರೀತಿ ಆಂಡ್ರಿ ಸಾಯಲು ಬಿಟ್ಟಿರುವಾಗ ಜೀವನದುದ್ದಕ್ಕೂ ತೋರದಿದ್ದ ನಿರ್ಲಿಪ್ತತೆ ಹಾಗೂ ಗಾಂಭೀರ್ಯತೆಯನ್ನು ತೋರಿಸುತ್ತಾನೆ. ಎಲ್ಲಾ ಪ್ರಮುಖ ಪಾತ್ರಗಳು ಒಂದಲ್ಲಾ ಒಂದು ರೀತಿಯಲ್ಲಿ ಪರಿಪೂರ್ಣತೆಯನ್ನು ಕಾಣುತ್ತವೆ. ದೊಡ್ಡ ದೊಡ್ಡ ಹೋರಾಟ ಮಾಡುವುದರಿಂದಾಗಲೀ ಅಥವಾ ರಾಜ ಮಹಾರಾಜರು, ರಾಜಕಾರಣಿಗಳು ಮಾಡುವ ಘನ ಕಾರ್ಯವಲ್ಲಿ, ಸುಖ, ಶಾಂತಿ, ಸಮಾಧಾನ ಸಿಗುವುದಿಲ್ಲ. ಸಾಮಾನ್ಯ ಜನರು ಯಾವುದೇ ಕೃತ್ರಿಮ ಬದುಕನ್ನು ಬಾಳದೆ ಪರಸ್ಪರ ಪ್ರೀತಿ ವಿಶ್ವಾಸದಿಂದ ತಮ್ಮ ಬದುಕಿನ ಸಾಮಾನ್ಯ ಬಯಕೆಯನ್ನು ಈಡೇರಿಸಿಕೊಳ್ಳಲು ನಡೆಸುವ ಹೋರಾಟದಲ್ಲಿ ಸುಖಶಾಂತಿ ಸಿಗುತ್ತದೆ ಎಂದು ಈ ಕಾದಂಬರಿಯ ಮೂಲಕ ಸಾರುವುದು ಟಾಲ್‌ಸ್ಟಾಯ್‌ನ ಉದ್ದೇಶವಾಗಿರಬೇಕು ಎಂದು ಅನಿಸುತ್ತದೆ. ಇದಕ್ಕೆ ಕರತೋವ್ ಉತ್ತಮ ಉದಾಹರಣೆ.

ಈ ಕಾದಂಬರಿಯ ದೋಷವೇನಾದರೂ ಇದ್ದರೆ ಅದು ಉದ್ದದ ಉಪದೇಶದಲ್ಲಿ. ಈ ಉಪದೇಶಗಳು ಕೊನೆ ಕೊನೆಯ ಅಧ್ಯಾಯಗಳನ್ನು ಹೆಚ್ಚು ಆವರಿಸಿಕೊಂಡಿವೆ. ಎರಡನೇ ಆವೃತ್ತಿಯಲ್ಲಿ ಇವುಗಳನ್ನು ಕೈಬಿಟ್ಟರೂ ನಂತರ ಅವುಗಳನ್ನು ಪುನಃ ಸ್ಥಾಪಿಸಲಾಯಿತು. ಟಾಲ್‌ಸ್ಟಾಯ್ ಈ ರೀತಿ ಉಪದೇಶ ತುರುಕದೇ ಚರಿತ್ರೆಯೇ ತನ್ನನ್ನು ತಾನು ತೆರೆದಿಡಲು ಬಿಡಬೇಕಾಗಿತ್ತು. ಹಾಗೆಯೇ ಕಾದಂಬರಿ ಕೆಲವು ಕಡೆ ತೆಗೆದುಕೊಳ್ಳುವ ತಿರುವು ಕೂಡ ಸ್ವಲ್ಪ ಕೃತಕವೆನಿಸುತ್ತದೆ. ಉದಾಹರಣೆಗೆ ಘಾಯಗೊಂಡ ಆಂಡ್ರಿ ರಸ್ತೋವ್‌ಗಳಿಂದ ಶುಶ್ರೂಷೆಗೆ ಒಳಗಾಗುವ ಸಂದರ್ಭ. ಏನಿದ್ದರೂ ಇವೆಲ್ಲಾ ಬಹಳ ಸಣ್ಣ ದೋಷಗಳು. ಒಟ್ಟಿನಲ್ಲಿ ಕಾದಂಬರಿ ಒಂದು ಮಹತ್ವ ಉದ್ದೇಶದ ಚೌಕಟ್ಟಿನಲ್ಲಿ, ಹೃದಯ ಮಿಡಿಯುವ ಘಟನಾವಳಿಗಳನ್ನು ಹೊಂದಿದ್ದು, ಮನಸ್ಸಿನಾಳದಲ್ಲಿ ಇಳಿಯುವ ಪಾತ್ರ ಚಿತ್ರಣವನ್ನು ರಚಿಸಿದ್ದು, ವಿವರಣೆಗಳು ಎಷ್ಟು ಸಹಜವಾಗಿವೆ ಎಂದರೆ ಓದುಗ ಒಂದು ಕಾದಂಬರಿಯನ್ನು ಓದುತ್ತಿದ್ದೇನೆಂದು ಭಾವಿಸದೆ ಬದುಕನ್ನೇ ನೋಡುತ್ತಿರುವಷ್ಟು ಸಹಜವಾಗಿ ಮೂಡಿಬಂದಿದೆ.

—ಮುಂದುವರಿಯುವುದು

ಶುದ್ಧವಾದ ಆಹಾರದಿಂದ ಶುದ್ಧ ರಕ್ತ ಮತ್ತು ಶುದ್ಧ ಮನಸ್ಸು ಲಭಿಸುತ್ತದೆ. ಶುದ್ಧ ಮನಸ್ಸಿನಲ್ಲಿ ಭಕ್ತಿ ಹುಟ್ಟುತ್ತದೆ. ದೃಢ ಭಕ್ತಿಯಿಂದ ಎಲ್ಲವನ್ನೂ ಸಾಧಿಸಬಹುದು.

—ವಾಲ್ಮೀಕಿ

ಸರೋದ್ ಸಾಧಕ: ರಾಜೀವ ತಾರಾನಾಥ್

ಹಾಲತಿ ಸೋಮಶೇಖರ್
'ಮೌನ'
ಕುವೆಂಪುನಗರ, ಮೈಸೂರು ೨೩

ಈ ಸಾಲಿನ ಟಿ. ಚೌಡಯ್ಯ ಪ್ರಶಸ್ತಿ ವಿಜೇತ 'ಸರೋದ್' ವಾದನದ ಮೂಲಕ ಅಂತಾರಾಷ್ಟ್ರೀಯ ಮನ್ನಣೆಗೆ ಪಾತ್ರವಾಗಿರುವ ಕರ್ನಾಟಕದ ಏಕಮೇವಾದ್ವಿತೀಯ ಸರೋದ್ ಸಾರ್ವಭೌಮ ಡಾ|| ರಾಜೀವ ತಾರಾನಾಥರು ಅಪರೂಪದ ಕನ್ನಡ ಪ್ರತಿಭೆ. ಸಂಗೀತ—ಸಾಹಿತ್ಯಕ್ಷೇತ್ರಗಳೆರಡಕ್ಕೂ ಬೆಲೆಯುಳ್ಳ ಕಾಣಿಕೆ ನೀಡಿ ನಮ್ಮ ಸಾಂಸ್ಕೃತಿಕ ಶ್ರೀಮಂತಿಕೆಗೆ ಕಾರಣರಾಗಿರುವ ರಾಜೀವರು ಜನಿಸಿದ್ದು ೧೭-೧೦-೧೯೩೨ ರಲ್ಲಿ. ವೈದ್ಯ, ಸಾಹಿತಿ, ವಾಗ್ಮಿ, ಸಂಗೀತಗಾರ, ಯೋಗಾಭ್ಯಾಸಿ, ಕ್ರಾಂತಿಕಾರಿ, ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಪಂಡಿತ ತಾರಾನಾಥರು ಇವರ ತಂದೆ; ಸುಮತಿ ಇವರ ತಾಯಿ. ತುಂಗಭದ್ರ ನದಿಯ ದಂಡೆಯ ಮೇಲಿದ್ದ "ಪ್ರೇಮಾಯತನ ಆಶ್ರಮ"ದಲ್ಲಿ ರಾಜೀವರು ತಮ್ಮ ಬಾಲ್ಯದ ದಿನಗಳನ್ನು ಕಳೆದರು.

ರಾಜೀವರಿಗೆ ಚಿಕ್ಕಂದಿನಿಂದಲೂ ಗೆಳೆಯ, ಗುರು, ಆಪ್ತರೆಂದರೆ ಇವರ ತಂದೆಯೆ. ಎರಡನೆಯ ಒಡನಾಡಿ ಮನೆಯಲ್ಲಿದ್ದ ಗ್ರಾಮಾಫೋನು. ಖ್ಯಾತ ಹಿಂದೂಸ್ತಾನಿ ಗಾಯಕರ ಧ್ವನಿಮುದ್ರಿಕೆಗಳು ಮನೆಯಲ್ಲಿ ಇದ್ದುದಲ್ಲದೆ ಮನೆಯೇ ಸಂಗೀತ ಶಾಲೆಯಂತಿತ್ತು. ಹೀಗಾಗಿ ತಮ್ಮ ಬಿಡುವಿನ ಅವಧಿಯಲ್ಲಿ ಅಬ್ದುಲ್ ಕರೀಂಖಾನರಿಂದ ಹಿಡಿದು ಅನೇಕ ಹಿಂದೂಸ್ತಾನಿ ಗಾಯಕರ ಧ್ವನಿಮುದ್ರಿಕೆಗಳನ್ನು ರಾಜೀವರು ಆಲಿಸುತ್ತಿದ್ದರು. ಭೈರವಿ, ಝಂಝೋಟಿ, ಬಸಂತ, ಜೋಗಿಯಾ, ಜೈಜೈವಂತಿ ಮುಂತಾದ ರಾಗ ಆಲಾಪಗಳನ್ನೂ ಕೇಳುವಾಗಲೇ ಮಕ್ಕಳ ವಿಶ್ವಕೋಶ, ಗಾಂಧೀಜಿ, ವಿವೇಕಾನಂದರ ಜೀವನಚರಿತ್ರೆ, ಶೇಕ್ಸ್‌ಪಿಯರ್, ಚಾರ್ಲ್ಸ್ ಡಿಕನ್ಸ್, ವಾಲ್ಟರ್‌ಸ್ಕಾಟ್, ಬರ್ಟ್ರಂಡ್ ರಸೆಲ್ ಮುಂತಾದವರ ಕೃತಿಗಳನ್ನೂ ಬೈಬಲ್, ವಚನಭಾರತ, ಅಮರಕೋಶ, ಭಗವದ್ಗೀತೆ, ವ್ಯಾಕರಣ' ಭಾಷಾಶಾಸ್ತ್ರ ಮುಂತಾದವನ್ನೂ ಅಭ್ಯಾಸ ಮಾಡುತ್ತಿದ್ದರು. ಮನೆಯಲ್ಲಿ ಕನ್ನಡ. ಸಂಸ್ಕೃತ, ಇಂಗ್ಲೀಷ್, ಉರ್ದು, ಕೊಂಕಣಿ, ಹಿಂದಿ, ಬಂಗಾಲಿ, ತಮಿಳು, ತೆಲುಗು ಹೀಗೆ ಹಲವು ಭಾಷೆಗಳು ಮನೆಮಾತು ಆಗಿದ್ದವು. ಇಂಥ ವೈವಿಧ್ಯಮಯವಾದ ಶ್ರೀಮಂತಬಾಲ್ಯ ರಾಜೀವರದು.

ರಾಜೀವರಿಗೆ ಮನೆಯೆ ಶಾಲೆ, ತಾಯಿ ತಂದೆಗಳೆ ಬೋಧಕರು. ಅನೌಪಚಾರಿಕವಾಗಿ ಇವರು ಕಲಿತದ್ದು. ತಮ್ಮ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯುವ ಸಲುವಾಗಿ ಬೆಂಗಳೂರಿಗೆ ಬಂದು ನೆಲೆಸಿದ ಪಂಡಿತ

ತಾರಾನಾಥರು ರಾಜೀವರು ಚಿಕ್ಕವರಿರುವಾಗಲೇ ಸಂಗೀತ ಪಾಠ ಕಲಿಯುವ ವ್ಯವಸ್ಥೆ ಮಾಡಿದರು. ಮೊದಲಿಗೆ ಶ್ರೀ ಸವಣೂರ ಕೃಷ್ಣಾಚಾರ್ಯರಿಂದ ಶಾಸ್ತ್ರೋಕ್ತ ಸಂಗೀತ ಕಲಿಕೆ ಶುರುವಾಯಿತು ಸವಣೂರರಿಂದ ಯಮನ್, ಭೂಪ, ಮಾರವಾ, ಅಸಾವರಿ, ಪೂರಿಯಾ ಮುಂತಾದ ರಾಗಗಳನ್ನು ರಾಜೀವರು ಕಲಿತರು. ಅನಂತರದಲ್ಲಿ ಸವಾಯಿ ಗಂಧರ್ವರ ಶಿಷ್ಯರಾದ ವೆಂಕಟರಾವ್ ರಾಮದುರ್ಗರ ಮೂಲಕ ಭೈರವಿ ರಾಗವನ್ನು ಕಲಿತಿದ್ದಲ್ಲದೆ ರಾಗಗಳ ಸಂಕೀರ್ಣತೆಯ ಅರಿವುಂಟಾಯಿತು. ೧೯೪೦ರಲ್ಲಿ ಪಂಚಾಕ್ಷರಿ ಗವಾಯಿಗಳಿಂದ ಮುಲ್ತಾನಿ, ಬೋಗಿಯಾ ರಾಗಗಳನ್ನು ಕಲಿತರು. ಒಂಬತ್ತು ವರ್ಷದ ಹುಡುಗ ರಾಜೀವ ಬೆಂಗಳೂರಿನಲ್ಲಿ ಕಟ್ಟಡವೊಂದರ ಉದ್ಘಾಟನೆಗಾಗಿ ಸಂಗೀತ ಕಛೇರಿ ನಡೆಸಿಕೊಟ್ಟು ಜನಪ್ರೀತಿಗೆ ಪಾತ್ರರಾದರು. ಇದು ಅವರ ಮೊಟ್ಟಮೊದಲ ಸಂಗೀತ ಕಛೇರಿ. ಅಂದು ಇವರು ಹಾಡಿದ ರಾಗ ಬಾಗೆಶ್ರೀ ಪ್ರಸ್ತುತ.

೧೯೪೭ರಲ್ಲಿ ಶಂಕರಜೋಶಿ ದೇವಗಿರಿ ಅವರಿಂದ ರಾಜೀವರಿಗೆ ಸಂಗೀತಪಾಠ ಹೇಳಿಸುವ ವ್ಯವಸ್ಥೆಯನ್ನು ಪಂಡಿತ ತಾರಾನಾಥರು ಮಾಡಿದ್ದರು. ತಾ॥ ೩೧–೧೦–೪೭ ರಂದು ದೇವಗಿರಿಯವರು ಪಾಠ ಹೇಳಲು ಬಂದ ದಿನ ಎಂತಹದ್ದೆಂದರೆ ಆಗತಾನೆ ಪಂಡಿತ ತಾರಾನಾಥರು ತೀರಿಕೊಂಡು ಒಂದೆರಡು ಗಂಟೆಗಳಾಗಿದ್ದವು. ಹತ್ತು ವರ್ಷದ ರಾಜೀವ ತಂದೆಯವರನ್ನು ಕಳೆದುಕೊಂಡು ತಬ್ಬಲಿಯಾಗಿದ್ದ. ಧೃತಿಗೆಡದ ರಾಜೀವರ ತಾಯಿ ಮಗನಿಗೆ ಜೋಶಿಯವರಿಂದ ಸಂಗೀತಪಾಠ ಹೇಳಿಸುವ ವ್ಯವಸ್ಥೆ ಮಾಡಿದ್ದರು. ಸುಮಾರು ಒಂಬತ್ತು ವರ್ಷಗಳ ಕಾಲ ರಾಜೀವರು ಶಂಕರಜೋಶಿಯವರಿಂದ ಸಂಗೀತ ವ್ಯಾಸಂಗ ಮಾಡಿದರು.

ಹೀಗೆ ಸಂಗೀತಾಭ್ಯಾಸದಲ್ಲಿ ತೊಡಗಿದ್ದ ರಾಜೀವರು ಅನಂತರದಲ್ಲಿ ಹೊರಳಿದ್ದು ಶಿಕ್ಷಣಾಭ್ಯಾಸದ ಕಡೆಗೆ; ಮನೆಯಲ್ಲಿಯೇ ಕಲಿಯುತ್ತಿದ್ದ ರಾಜೀವರು ೧೯೪೯ರಲ್ಲಿ ನೇರವಾಗಿ ಸೀನಿಯರ್ ಕೇಂಬ್ರಿಜ್ ಪರೀಕ್ಷೆಗೆ ಕುಳಿತು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು. ೧೯೫೫ರ ವೇಳೆಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎ. ಆನರ್ಸ್ ಪದವಿ ಪಡೆದು ಅದೇ ಕಾಲೇಜಿನಲ್ಲಿ ಅಧ್ಯಾಪಕರಾದರು. ೧೯೬೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ಮಾಡಿ ಇಂಗ್ಲಿಷ್ ಎಂ.ಎ. ಪದವಿಯನ್ನು ಪ್ರಥಮ ರ‍್ಯಾಂಕ್‌ನೊಂದಿಗೆ ಪಡೆದರು. ಕೂಡಲೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ನೇಮಕವಾದರು. ಯು.ಜಿ.ಸಿ ಶಿಷ್ಯವೇತನ ಪಡೆದು ೧೯೬೯ರಲ್ಲಿ ಪ್ರೊ॥ ಸಿ. ಡಿ. ನರಸಿಂಹಯ್ಯನವರ ಮಾರ್ಗದರ್ಶನದಲ್ಲಿ ದಿ ಇಮೇಜ್ ಇನ್ ದಿ ಪೊಯಿಟ್ರಿ ಆಫ್ ಟಿ. ಎಸ್. ಎಲಿಯಟ್ ಎಂಬ ಸಂಶೋಧನ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಪಿ.ಎಚ್.ಡಿ. ಪದವಿ ಪಡೆದರು.

ರಾಜೀವರ ಬದುಕಿನಲ್ಲಿ ಮಹತ್ವದ ತಿರುವು ಮೂಡಿಸಿದ್ದೆಂದರೆ ೧೯೫೭ರಲ್ಲಿ ಬೆಂಗಳೂರಿನಲ್ಲಿ ನಡೆದ ಪಂಡಿತ ರವಿಶಂಕರ್ ಮತ್ತು ಉಸ್ತಾದ್ ಅಲಿಅಕಬರ ಖಾನರ ಸಿತಾರ್ ಸರೋದ್ ಜುಗಲಬಂದಿ. ಅದುವರೆವಿಗೆ

ರಾಜೀವರಿಗೆ ಸರೋದ್ ವಾದ್ಯದ ಮಹತ್ವ ತಿಳಿದಿರಲಿಲ್ಲ ; ಅಲ್ಲದೆ ಸರೋದ್ ವಾದ್ಯವನ್ನು ಅವರು ಅದೊಂದು ಮರದ ತುಂಡು, ಅದಕ್ಕೆ ಚರ್ಮದ ಹೊದ್ದಿಕೆ, ನರಗಳನ್ನು ಮೀಟುವುದು ಅದೊಂದು ವಾದ್ಯವೆ? ಸೀಮೆಎಣ್ಣೆ ಡಬ್ಬದ ಶಬ್ದದಂತೆ ಅದರ ವಾದನ; ನೋಡಲು ಅಸಹ್ಯ; ಕೇಳುವುದು ಅಸಾಧ್ಯ ಎಂದು ಕೊಂಡಿದ್ದರು. ವಾದ್ಯಗಳ ರಾಜ ಎಂದರೆ "ಸಿತಾರ್" ಎಂದು ಮೆಚ್ಚುತ್ತಿದ್ದರು. ಸಿತಾರ್ ಕೇಳುವ ಕುತೂಹಲಕ್ಕೆ ಅದರಲ್ಲೂ ಪಂಡಿತ ರವಿಶಂಕರ್ ಅವರ ಸಿತಾರ್ ಕೇಳಲು ಆ ಜುಗಲಬಂದಿಗೆ ಬಂದವರು. ಅಂದು ಅಲಿ ಅಕಬರ್ ಖಾನರು ನುಡಿಸಿದ್ದು "ಪೂರ್ಯಾ ಕಲ್ಯಾಣಿ" ರಾಗ. ಅದರ ಮೊದಲ ಸಂಚಾರ ಗಳು ಮೂಡಿಬರುತ್ತಿದ್ದಂತೆಯೇ ರಾಜೀವರ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾ ಯಿತು. ಆ ರಾಗ ಮುಗಿಯುವ ವೇಳೆಗೆ ರಾಜೀವರು ಆ ವಾದನದ ವಶವಾಗಿ ಹೋಗಿ ದ್ದರು. ಆ ರಾಗ ಅವರ ಮೂಲಭೂತ ಧೋರಣೆಯನ್ನೇ ಬದಲಿಸಿತು. ಸರೋದ್ ವಾದನ ರಾಜೀವರ ಭಾವಕೋಶದಲ್ಲಿ ಹೆಪ್ಪು ಗಟ್ಟತೊಡಗಿತು. ಸರೋದ್ ಕಲಿಯಲೇ ಬೇಕು ; ಕಲಿತರೆ ಅಲಿ ಅಕಬರ ಖಾನರ ಹತ್ತಿರವೇ ಕಲಿಯಬೇಕು ಎಂದು ಅಂದೇ ನಿರ್ಧರಿಸಿದರು. ಅದುವರೆವಿಗೆ ತಾನು ಏನಾಗಬೇಕೆಂದು, ತನ್ನ ಮೂಲ ಸತ್ವ ಯಾವುದೆಂದು ಹುಡುಕಾಟ ನಡೆಸಿದ್ದ ರಾಜೀವರ ಮನಸ್ಸಿಗೆ ಒಂದು ನೆಲೆ ದೊರೆ ತದ್ದು ಮಾರ್ಗಸೂಚಿಯಾಗಿದ್ದು ಖಾನ್ ಸಾಹೇಬರ ಆ ಸಂಗೀತ ಕಛೇರಿ.

ರಾಜೀವರು ಹೇಳುತ್ತಾರೆ ನನ್ನ ಮನೆ ಯಲ್ಲಿ ನಾನು ಏಕಾಂಗಿಯಾಗಿದ್ದೆ, ನನ್ನ ಸ್ವಂತಿಕೆ ರೂಪಿಸಿಕೊಳ್ಳಲು ಮನೆಯ ವಾತಾವರಣ ಅನುವುಮಾಡಿಕೊಡಲಿಲ್ಲ. ನನಗೆ ನನ್ನದೆ ಆದ ಭಾಷೆ, ಸ್ಥಳ, ಪುರಾಣ, ಜಾನಪದ ಇರಲಿಲ್ಲ. ಹಲವು ಭಾಷೆಗಳ, ಹಲವು ಸಂಸ್ಕೃತಿಗಳ ನಿಮಿಕ್ ಆಗಿದ್ದೆ, ಚಂದ್ರಶೇಖರ ಕಂಬಾರ ಅಥವಾ ಯು. ಆರ್. ಅನಂತಮೂರ್ತಿ ಇವರಿಗೆ ಇರುವಂತೆ ನನ್ನ ಬದುಕಿನಲ್ಲಿ ಮೂಲ ಮಾತೃಕೆಗಳು ನನಗೆ ಗೊತ್ತಿರಲಿಲ್ಲ. ಭಾರತೀ ಯತೆ ಏನು ಎಂಬುದು ನನಗೆ ತಿಳಿದಿರಲಿಲ್ಲ. ನನ್ನ ಎಲ್ಲ ಚಿಂತನೆಗಳು ಇಂಗ್ಲಿಷ್ ಸೆನ್ಸಿಬಿಲಿಟಿ ಯಲ್ಲಿ ಅರಳಿದವು. ಆ ಮೂಲಕವೇ ನನ್ನ ವ್ಯಕ್ತಿತ್ವ ರೂಪುಗೊಂಡಿದ್ದರಿಂದ ಆ ಹಿನ್ನೆಲೆ ಪ್ರಭಾವಗಳಿಂದಲೇ ನನ್ನೆದುರಿನ ಬದುಕನ್ನು ಮಾಡುತ್ತಿದ್ದೆ. ನನ್ನ ಭಾವನೆಗಳಿಗೂ ನಾನು ಬದುಕುತ್ತಿದ್ದ ಪರಿಸರದಲ್ಲಿ ನಡೆಯುತ್ತಿದ್ದ ಕ್ರಿಯೆಗಳಿಗೂ ಹೊಂದಿಕೆಯಿರಲಿಲ್ಲ. ಈ ರೀತಿಯ ಗೊಂದಲದಲ್ಲಿ ಮುಳುಗಿ ಗಲಿಬಲಿ ಗೊಂಡಿದ್ದಾಗ ಅಲಿಅಕಬರಖಾನ್ ನನ್ನ ಜೀವನಕ್ಕೆ ಬಂದರು. ಖಾನ್ ಸಾಹೇಬರ ಸಂಗೀತದ ಮೂಲಕ ನನಗೆ ನನ್ನ ಭಾರತೀಯ ತೆಯ ಎಳೆ ದೊರೆಯಿತು ; ನನ್ನ ಭಾವನೆ ಗಳಿಗೆ ಮೂರ್ತರೂಪ ಸಿಕ್ಕಿತು. ಈ ಭಾರತೀ ಯತೆಯ ಗುರುತನ್ನು ಬಹಳ ಹೆಮ್ಮೆಯಿಂದ ಇಟ್ಟುಕೊಂಡಿದ್ದೇನೆ.

ಸರೋದ್ ಕಲಿಯುವ ಅಧಮ್ಯ ಆಸೆ ಮತ್ತು ಅಲಿ ಅಕಬರಖಾನರ ಬಗ್ಗೆ ಪರಮ ಪೂಜ್ಯ ಭಾವನೆಯಿಂದ ಮುಂಬಯಿಗೆ ಹೋಗಿ ಖಾನ್ ಸಾಹೇಬರನ್ನು ಕಂಡು ತಮ್ಮ ಅಭಿಲಾಷೆಯನ್ನು ರಾಜೀವರು ತಿಳಿಸಿ ದಾಗ, ಅವರು ಹೇಳಿದ್ದು "ನಿನಗೆ ಸರೋದ್

ಕಲಿಯುವ ವಯಸ್ಸು ಮೀರಿದೆ. ಈ ವಾದ್ಯದ ಶಿಕ್ಷಣ ಬಹುಪೂರ್ವ ವಯಸ್ಸಿನಲ್ಲಿಯೇ ಆಗಬೇಕು, ಇಪ್ಪತ್ತು ವರ್ಷ ದಾಟಿರುವ ನಿನಗೆ ಉಗುರಿನಿಂದ ನುಡಿಸುವ ಸರೋದ್ ಪಳಗಿಸುವುದು ತುಂಬಾ ಕಷ್ಟಕರ" ಎಂದು. ಆದರೂ ರಾಜೀವರ ಉತ್ಸಾಹ ನೋಡಿ ತಮ್ಮಲ್ಲಿದ್ದ ಚಿಕ್ಕದೊಂದು ಸರೋದನ್ನು ಕೈಗಿತ್ತು ಒಂದೆರಡು ವಾರ ಕಾಲ ಅಭ್ಯಾಸಮಾಡು ನೋಡೋಣ ಎಂದರು. ಬುದ್ಧಿವಂತ, ಛಲವಂತ, ಹಿಡಿದ ಕೆಲಸದಲ್ಲಿ ತನ್ಮಯತೆಯಿಂದ ತೊಡಗಿಸಿಕೊಂಡು ಹಿಡಿತ ಸಾಧಿಸುವ ಸಂಗೀತ ತಪಸ್ವಿ ತಾರಾನಾಥರು ಅದುವರೆವಿಗೆ ಕೈಯಲ್ಲಿಯೂ ಹಿಡಿಯದಿದ್ದ, ನುಡಿಸುವ ಬಗೆಯನ್ನು ಅರಿಯದ ಸರೋದ್ ನುಡಿಸಿ ಉಗುರು ಕಣ್ಣಿನಿಂದ ರಕ್ತಬರಿಸಿಕೊಂಡು ನಾಲ್ಕಾರು ದಿನಗಳಲ್ಲಿಯೇ ಬೆರಳುಗಳನ್ನು ಗಾಯಮಾಡಿಕೊಂಡರು. ಆದರೆ ಇದಾವುದೂ ಅವರ ಕಲಿಯುವ ಉತ್ಸಾಹ, ಲವಲವಿಕೆಯನ್ನು ಹತ್ತಿಕ್ಕಲಿಲ್ಲ. ದಿನಗಳುರುಳಿದಂತೆ ಅವರಲ್ಲಿ ಸರೋದ್ ಕಲಿಯುವ ಉತ್ಸಾಹ ಚಿಮ್ಮತೊಡಗಿತು.

೧೯೫೨ ರಿಂದ ೫೫ರವರೆಗೆ ಬೊಂಬಾಯಿ-ಬೆಂಗಳೂರುಗಳಿಗೆ ಓಡಾಟವಿಟ್ಟುಕೊಂಡೆ ಖಾನ್ ಸಾಹೇಬರಲ್ಲಿ, ಸರೋದಭ್ಯಾಸ ಇತ್ತ ಅಧ್ಯಾಪನ ಎರಡನ್ನು ನಡೆಸಿಕೊಂಡು ಬಂದರು. ಅನಂತರ ಅವರ ತಾಯಿ ತೀರಿಕೊಂಡಮೇಲೆ ೧೯೫೫ರಲ್ಲಿ ಅಧ್ಯಾಪಕ ವೃತ್ತಿಗೆ ರಾಜಿನಾಮೆ ಸಲ್ಲಿಸಿ ಬೊಂಬಾಯಿಗೆ ಹೋಗಿ ನೆಲದ ಜೀವನಕ್ಕೆ "ಆರ್ಯನ್ ಪಾದ್" ಪತ್ರಿಕಾಲಯ ಮತ್ತು ಭಾರತೀಯ ಭವನ ಶಾಲೆಯಲ್ಲಿ ಕೆಲಸ ಮಾಡುತ್ತಾ ತಮ್ಮ ಸರೋದಭ್ಯಾಸವನ್ನು ಮುಂದುವರಿಸಿದರು ಹೀಗೆ ಖಾನ್ ಸಾಹೇಬರು ರಾಜೀವರ ಕಲಾಗುರುವಾದರು.

ಕೆಲದಿನಗಳಲ್ಲಿಯೇ ಅಲಿಅಕಬರಖಾನರು ತಮ್ಮ ಶಿಷ್ಯನನ್ನು ಕಲಕತ್ತಗೆ ಬರುವಂತೆ ತಿಳಿಸಿ ತಾವು ಕಲಕತ್ತೆಗೆ ಹೋಗಿ ನೆಲಸಿದರು. ರಾಜೀವರು ಅನಿವಾರ್ಯವಾಗಿ ಕಲಕತ್ತೆಗೆ ಹೋದರು. ಕಡುಕಷ್ಟದ ದಿನಗಳವು. ಒಂದು ಹೊತ್ತಿನ ಊಟಸಿಗುವುದು ದುರ್ಲಭವಾಗಿತ್ತು. ರಾಜೀವರ ತಾಳ್ಮೆ, ಸಂಯಮ, ಕಷ್ಟನಿಷ್ಠೂರಗಳನ್ನು ಧೈರ್ಯದಿಂದ ಎದುರಿಸಿ ಗೆಲ್ಲುವ ಛಲ ಎಲ್ಲ ಕೊರತೆಗಳನ್ನು ಹತ್ತಿಕ್ಕಿ ಸರೋದಭ್ಯಾಸ ನಡೆಸುವ ಧ್ಯಾನಶೀಲ ಮನಸ್ಸು ಅವರನ್ನು ಮಹಾನ್ ಸಾಧಕರನ್ನಾಗಿ ಮಾಡಿತು. ೧೯೫೫ ರಿಂದ ೧೯೬೦ರ ವರೆಗೆ ನಿರಂತರವಾಗಿ ರಾಜೀವರು ಖಾನ್ ಸಾಹೇಬರಲ್ಲಿ ಸರೋದ್ ಅಭ್ಯಾಸ ನಡೆಸಿದರು.

ಸರೋದ್‌ವಾದನಾಭ್ಯಾಸದಲ್ಲಿ ಒಂದು ಪರಿಪಕ್ವತೆಯ ಘಟ್ಟ ತಲುಪಿದ ರಾಜೀವರು ಮತ್ತೆ ಹಿಂದಿರುಗಿದ್ದು ಇಂಗ್ಲಿಷ್ ಬೋಧನೆ ಕಡೆಗೆ. ೧೯೬೦ರಲ್ಲಿ ಮೈಸೂರಿನ ಬನುಮಯ್ಯ ಕಾಲೇಜು, ೧೯೬೧ರಲ್ಲಿ ರಾಯಚೂರಿನ ಎಲ್. ಡಿ. ವಿ. ಕಾಲೇಜು, ೧೯೬೪ರಲ್ಲಿ ಧಾರವಾಡದ ಕರ್ನಾಟಕ ಕಾಲೇಜು, ೧೯೬೫ರಲ್ಲಿ ಮೈಸೂರಿನ ರೀಜನಲ್ ಕಾಲೇಜ್ ಆಫ್ ಎಜುಕೇಷನ್ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ದುಡಿದರು. ೧೯೬೮ರಲ್ಲಿ ತಿರುಚಿಯ ರೀಜನಲ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಇಂಗ್ಲಿಷ್ ಬೋಧಕರಾಗಿದ್ದ ರಾಜೀವರು

೧೯೬೮ರಲ್ಲಿ ಪಿಎಚ್‌ಡಿ ಪದವಿ ಪಡೆದಮೇಲೆ ಹೈದರಾಬಾದಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಆಂಡ್ ಫಾರಿನ್ ಲಾಂಗ್ವೇಜ್ (ಸಿ ಐ ಇ ಎಫ್ ಎಲ್) ನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನೇಮಕವಾದರು. ಬೋಧನ ವೃತ್ತಿಯಲ್ಲಿ ಹೆಚ್ಚು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೆಂದರೆ ರಾಜೀವರು ಹೈದರಬಾದಿನಲ್ಲಿಯೆ. ೧೯೮೬ರ ನಂತರ ಅಲ್ಲಿನ ಪ್ರಾಧ್ಯಾಪಕ ಹುದ್ದೆಗೂ ರಾಜೆನಾಮೆ ಸಲ್ಲಿಸಿ ಸರೋದ್ ವಾದನಕ್ಕೆ ತಮ್ಮನ್ನೆ ಅರ್ಪಿಸಿಕೊಂಡು ಬೆಂಗಳೂರಿನಲ್ಲಿ ನೆಲಸಿದ್ದಾರೆ. ಈ ನಡುವೆ ಪುಣೆಯ ಫಿಲಂ ಇನ್‌ಸ್ಟಿಟ್ಯೂಟನಲ್ಲಿ ಸಂಗೀತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಸಂದರ್ಶನಪ್ರಾಧ್ಯಾಪಕರಾಗಿ ಮುಂದುವರೆದಿದ್ದಾರೆ.

ರಾಜೀವರ ಪತ್ನಿ ಶ್ರೀಮತಿ ಮಾಧವಿ ಅವರು. ಅವರ ಏಕೈಕ ಪುತ್ರ ಚೇತನ್ ತಾರಾನಾಥ್ ಈಗ ಅಮೆರಿಕದಲ್ಲಿದ್ದಾರೆ. ಬದುಕಿನಲ್ಲಿ ಹಲವಾರು ಏರಿಳಿತಗಳನ್ನು ಕಂಡಿರುವ ರಾಜೀವರು ತುಂಬಾ ಸಂಚಾರಿ ಸ್ವಭಾವದವರು. ಹೊಸದರ ಅನ್ವೇಷಕರು. ಸ್ವತಂತ್ರ ಮನೋಧರ್ಮ ಇವರದು. ನಿರಂತರ ಶೋಧ ಇವರ ಗುಣ. ಏಕಾಗ್ರತೆ ಮತ್ತು ಚದುರಿಕೊಳ್ಳುವುದು ಇವರ ಬದುಕಿನ ಮೂಲಭಿತ್ತಿ; ಇದರಿಂದಾಗಿಯೇ ಇವರು ಕೊನೆಯವರೆವಿಗೂ ಯಾವುದೇ ಖಾಯಂ ನೌಕರಿ ಹೊಂದಲಿಲ್ಲ. ಹಾಗೆಂದು ತಮ್ಮ ಅಲೆದಾಟ ಮತ್ತು ಹುಡುಕಾಟಗಳನ್ನು ನಿಲ್ಲಿಸಲಿಲ್ಲ. ಖಾಯಂ ಸಂಬಳಕ್ಕಾಗಿ ಹಪಹಪಿಸಲಿಲ್ಲ. ನಿಯಮಿತವಾಗಿ ಯಾವುದೇ ವೃತ್ತಿಯಲ್ಲಿ ದುಡಿಯದೆ ಎಲ್ಲವನ್ನೂ ಅರ್ಥಕ್ಕೆ ಬಿಟ್ಟು ಅನ್ಯವಸ್ಥಿತವಾಗಿ ಮುನ್ನಡೆಯುವ ಗುಣ ರಾಜೀವರದು ; ಆದರೆ ಕಳೆದ ನಲವತ್ತು ವರ್ಷಗಳಿಂದ ಪ್ರತಿದಿನ ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಸರೋದ್ ಅಭ್ಯಾಸ ಮಾಡುವುದು ಮಾತ್ರ ಕಡ್ಡಾಯವಾಗಿ, ನಿಯಮಿತವಾಗಿ ನಡೆದುಕೊಂಡು ಬರುತ್ತದೆ. ಕ್ಲುಪ್ತ ಅವಧಿಗೆ ಏಳುವುದು, ವ್ಯಾಯಾಮ, ಯೋಗಾಸನ, ಸರೋದ್ ವಾದನ, ಅಧ್ಯಯನ, ಚಿಂತನ, ಸಂಶೋಧನೆಗಳು ಇವರ ದಿನಚರಿಯಲ್ಲಿ ಸೇರಿಹೋಗಿವೆ.

ರಾಜೀವ ತಾರಾನಾಥರಿಗೆ ಈಗ ಅರವತ್ತೈದು ವರ್ಷ ವಯಸ್ಸು. ಸರೋದ್ ವಾದನದಲ್ಲಿ ಅಪಾರ ಸಿದ್ಧಿಗಳಿಸಿದ್ದಾರೆ, ಹಿಂದೂಸ್ತಾನಿ ಸಂಗೀತದಲ್ಲಿ ಸರೋದ್ ವಾದಕರೆ ಇಲ್ಲ ಎನ್ನುವಷ್ಟರಮಟ್ಟಿಗೆ ಅವರ ಸಂಖ್ಯೆ ಇಳಿದಿರುವಾಗ ರಾಜೀವರು ದೊಡ್ಡ ಸರೋದ್ ಕಲಾವಿದರಾಗಿ ಸೆನಾಯಿಘರಾನಾ ಸಂಗೀತ ಪರಂಪರೆಗೆ ಸೇರಿದ್ದಾರೆ. ಸರೋದ್ ವಾದ್ಯದ ನುಡಿಸುವಿಕೆ ಕಷ್ಟಕರವಾದದ್ದು. ಅದರಲ್ಲಿ ಸ್ವರ ಸ್ಥಾನಗಳನ್ನು ಸೂಚಿಸುವ ಮೆಟ್ಟಿಲುಗಳಿಲ್ಲ. ಬೆರಳುಗಳು ಜಾರಿಹೋಗುವಂತಹ ಒಂದು ಉಕ್ಕಿನತಗಡು ಅದು ಅಲ್ಲದೆ ಬಹುಸಂಖ್ಯೆಯ ಪ್ರತಿಧ್ವನಿಸುವ ತಂತಿಗಳು ಅದಕ್ಕಿವೆ. ಇಂತಹ ವಿಚಿತ್ರವಾದ್ಯವನ್ನು ರಾಜೀವರು ಬುದ್ಧಿವಂತಿಕೆಯಿಂದ ತಮ್ಮದನ್ನಾಗಿಸಿಕೊಂಡಿದ್ದಾರೆ.

ರಾಜೀವರು ದೇಶದಾದ್ಯಂತ ಕಛೇರಿಗಳನ್ನು ನಡೆಸಿರುವುದಲ್ಲದೆ ಪ್ರಪಂಚದ ಅನೇಕ ದೇಶಗಳಲ್ಲಿ ತಮ್ಮ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ — ಕಲಕತ್ತೆಯ ಅಖಿಲಭಾರತ ಸಂಗೀತೋತ್ಸವ,

ಮುಂಬಯಿಯ ಭಾತಖಂಡೆ ಸಮ್ಮೇಳನ, ಗ್ವಾಲಿಯರಿನ ತಾನಸೇನ ಸಮಾರೋಹ, ೧೯೮೬ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಅಖಿಲಭಾರತ ಸಾಂಸ್ಕೃತಿಕ ಸಮ್ಮೇಳನ, ೧೯೭೮ ರಲ್ಲಿ ದೆಹಲಿಯಲ್ಲಿ ಜರುಗಿದ ರಾಷ್ಟ್ರೀಯ ಕಲಾ ಉತ್ಸವ ಮುಂತಾದವು ಗಳು ಮುಖ್ಯವಾದವು.

ಹೊರದೇಶಗಳಲ್ಲಿ ಅವರು ನೀಡಿರುವ ಕಾರ್ಯಕ್ರಮಗಳೆಂದರೆ ೧೯೭೪ರಲ್ಲಿ ಅಸ್ಟ್ರೇಲಿಯದಲ್ಲಿ ಪ್ರವಾಸಮಾಡಿ ಸಿಡ್ನಿ, ಮೆಲ್ಬೋರ್ನ್, ಅಡಿಲಿಡ್, ಕ್ಯಾನ್‌ಬೆರಾ ಗಳಲ್ಲಿ ಕಛೇರಿ ನಡೆಸಿದ್ದಾರೆ. ಸಿಡ್ನಿಯ "ಅಪೇರಾ ಹೌಸ್"ನಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕಛೇರಿ ನಡೆಸಿರುವ (೧೯೭೪) ಪ್ರಪ್ರಥಮ ಭಾರತೀಯನೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಅಮೆರಿಕದ ಕ್ಯಾಲಿಫೋರ್ನಿಯದಲ್ಲಿರುವ ಅಲಿ ಅಕಬರ ಖಾನ್ ಸಂಗೀತ ಶಾಲೆಯಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಈಗಲೂ ದುಡಿಯು ತ್ತಿದ್ದಾರೆ. ವಾಲ್‌ಡಿಸ್ನಿ ಯೂನಿವರ್ಸಿಟಿ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್ ಎಂಬಲ್ಲಿ ಸಂದರ್ಶನ ಪ್ರಾಧ್ಯಾಪಕರಾಗಿದ್ದಾರೆ. ಇಲ್ಲಿ ಪ್ರಾಧ್ಯಾಪಕರಾಗಿರುವ ಭಾರತೀಯರಲ್ಲಿ ಪಂಡಿತ ರವಿಶಂಕರ್ ಮೊದಲಿಗರಾದರೆ ಡಾ॥ ರಾಜೀವತಾರಾನಾಥರೆ ಎರಡನೆ ಯವರು.

ರಾಜೀವರದು ವೈವಿಧ್ಯಮಯವಾದ ಆಸಕ್ತಿ. ಒಂದು ಕಡೆ ಬೋಧಕರು, ಮತ್ತೊಂದೆಡೆ ಸರೋದ್‌ವಾದಕರು, ವಿಚಾರವಾದಿಗಳು, ವಿಮರ್ಶಕರು, ಹಿನ್ನೆಲೆ ಗಾಯಕರು, ಸಂಗೀತ ನಿರ್ದೇಶಕರು— ಹೀಗೆ ಇವರದು ಬಹುಮುಖ ಪ್ರತಿಭೆ.

ಇವರು ಸಿನಿಮಾ ಜಗತ್ತಿಗೆ ನೀಡಿರುವ ಕೊಡುಗೆ ಕೂಡ ಗಮನಾರ್ಹವಾದುದು. ಎಂಬತ್ತರ ದಶಕದಲ್ಲಿ ಆರಂಭವಾದ ಹೊಸ ಅಲೆಯ ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿ ತಮ್ಮ ಸೃಜನಶೀಲತೆಯನ್ನು ಮೆರೆದಿ ದ್ದಾರೆ. ಮೊದಮೊದಲಿಗೆ ತಮ್ಮ ಗುರುಗಳ ಜೊತೆಗೂಡಿ ಬಂಗಾಲಿ ಚಲನಚಿತ್ರಗಳಿಗೆ ಸಂಗೀತ ನಿರ್ದೇಶನ ನೀಡುತ್ತಿದ್ದ ರಾಜೀದರು ೧೯೭೦ರಲ್ಲಿ ಯು. ಆರ್. ಅನಂತಮೂರ್ತಿ ಯವರ 'ಸಂಸ್ಕಾರ' ಕನ್ನಡ ಚಲನಚಿತ್ರಕ್ಕೆ ಸಂಗೀತ ನಿರ್ದೇಶನ ನೀಡಿದರು. ಇದು ವರ್ಷದ ಅತ್ಯುತ್ತಮ ಚಿತ್ರನೆಂದು ರಾಷ್ಟ್ರ ಪ್ರಶಸ್ತಿ ಪಡೆಯಿತು. ೧೯೭೫ರಲ್ಲಿ ಬಂದ ಪಿ. ಲಂಕೇಶ್‌ರ "ಪಲ್ಲವಿ" ಚಿತ್ರಕ್ಕೂ ಇವರು ಸಂಗೀತ ನಿರ್ದೇಶನ ನೀಡಿದರು: ಈ ಚಿತ್ರ ವರ್ಷದ ಅತ್ಯುತ್ತಮ ಹಿನ್ನೆಲೆಸಂಗೀತವುಳ್ಳ ಚಿತ್ರ ಎಂದು ರಾಷ್ಟ್ರಪ್ರಶಸ್ತಿ ಪಡೆಯಿತು. ಇವರು ಸಂಗೀತ ನೀಡಿದ ೧೯೭೮ರಲ್ಲಿ ಬಿಡುಗಡೆಯಾದ ಕಾಂಚನಸೀತ ಎಂಬ ಮಲೆಯಾಳಂ ಚಲನಚಿತ್ರ ರಾಷ್ಟ್ರಪ್ರಶಸ್ತಿ ಗಳಿಸಿತು. ೧೯೮೧ರಲ್ಲಿ ಪೂಕುವೆಯಲ್ ಎಂಬ ಮಲೆಯಾಳಂ ಚಿತ್ರಕ್ಕೆ ಇವರು ಸಂಗೀತ ನೀಡಿದರು. ಈ ಚಿತ್ರ ಕೂಡ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಿಸಿತು. ಇವರು ಸಂಗೀತ ನಿರ್ದೇಶನ ನೀಡಿದ, ೧೯೮೭ರಲ್ಲಿ ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಬಿಡುಗಡೆಯಾದ ಪೇಪರ್ ಬೋಟ್ಸ್ ಎಂಬ ಚಲನ ಚಿತ್ರ ರಾಜ್ಯಪ್ರಶಸ್ತಿಗೆ ಪಾತ್ರವಾಗಿದೆ. ೧೯೯೧ರಲ್ಲಿ ಬಿಡುಗಡೆಯಾದ ಇವರು ಸಂಗೀತ ನೀಡಿದ 'ಕದವು' ಎಂಬ ಮಲೆಯಾಳಂ ಚಲನಚಿತ್ರ ಸಿಂಗಪೂರಿನಲ್ಲಿ ನಡೆದ ಏಷ್ಯ ಚಲನ

ಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರವೆಂದು ಮನ್ನಣೆಗಳಿಸಿತು. ಇದಲ್ಲದೆ ೧೯೭೦ರಲ್ಲಿ ಚದುರಂಗರು ನಿರ್ದೇಶಿಸಿರುವ ಕುವೆಂಪು ಸಾಕ್ಷ್ಯ ಚಿತ್ರಕ್ಕೆ ರಾಜೀವತಾರಾನಾಥರು ಸಂಗೀತ ನಿರ್ದೇಶನ ನೀಡಿದ್ದಾರೆ. ಹೀಗೆ ರಾಜೀವರು ಸಿನಿಮಾಕ್ಷೇತ್ರಕ್ಕೆ ನೀಡಿರುವ ಕೊಡುಗೆ ಗಮನಾರ್ಹವಾದುದು.

ರಾಜೀವರಿಗೆ ಅತ್ಯಾಸಕ್ತಿಯ ವಿಷಯ ವೆಂದರೆ ಸಂಗೀತ. ಸಂಗೀತದ ತರುವಾಯದ ಆಸಕ್ತಿ ಅವರಿಗೆ ಸಾಹಿತ್ಯ. ಸಾಹಿತ್ಯವನ್ನು ಸಂಗೀತದ ಸಂವೇದನೆಯಿಂದಲೇ ಗ್ರಹಿಸುವ ಮನಸ್ಸು ಅವರದು. ಇಂಗ್ಲಿಷ್ ಸಾಹಿತ್ಯದ ಮೂಲಕ ಸಾಹಿತ್ಯ ಲೋಕವನ್ನು ಪ್ರವೇಶಿಸಿದ ಅವರು ವಿಶ್ವದ ಅತ್ಯುತ್ತಮ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಿದ್ದಾರೆ. ಯು. ಆರ್. ಅನಂತಮೂರ್ತಿಯವರ ಮೂಲಕ ಕನ್ನಡ ಸಾಹಿತ್ಯ ಪ್ರೀತಿಯನ್ನು ಗಳಿಸಿಕೊಂಡು ನವ್ಯದ ತಲೆಮಾರಿನ ಅನೇಕ ಲೇಖಕರ ಕೃತಿಗಳನ್ನು ಓದಿಕೊಂಡಿದ್ದಾರೆ. ಅಲ್ಲದೆ ನವ್ಯವಿಮರ್ಶಕರಲ್ಲಿ ಮುಖ್ಯರೆನಿಸಿದ್ದಾರೆ. ಸಂಗೀತದಲ್ಲಿರುವ ಅವರ ಸೃಜನಶೀಲತೆ ಸಾಹಿತ್ಯವಲ್ಲಿ ಪ್ರಖರವಾಗಿ ಕಂಡು ಬರದಿದ್ದರು ವಿಮರ್ಶನ ಪ್ರಜ್ಞೆ ತುಂಬಾ ಪ್ರಖರವಾಗಿ ಕೆಲಸಮಾಡುವುದನ್ನು ಕಾಣಬಹುದಾಗಿದೆ. ಸಾಹಿತ್ಯವಲ್ಲಿ ಅವರ ಬರಹಗಳು ಕಡಿಮೆ ಎನಿಸಿದರೂ ತುಂಬಾ ಅರ್ಥಪೂರ್ಣ ಬರಹಗಳಿವೆ. ಟಿ. ಎಸ್. ಎಲಿಯಟ್‌ನ ಕಾವ್ಯದ ಮೇಲೆ ಸಂಶೋಧನೆ ನಡೆಸಿ ಆ ಕಾವ್ಯದ ಒಳ ಸೂಕ್ಷ್ಮಗಳನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸಿರುವುದನ್ನು ಕಾಣುತ್ತೇವೆ. ಶೇಕ್ಸ್‌ಪಿಯರ್‌ನ ಕಾರಿಯೊಲನಸ್ ನಾಟಕ ಮತ್ತು ಎಲಿಯಟನ ದಿ ವೇಸ್ಟ್ ಲ್ಯಾಂಡ್ ಕಾವ್ಯವನ್ನು ಪರಸ್ಪರ ಹೋಲಿಸಿ ಅಧ್ಯಯನ ನಡೆಸಿ ಮಂಡಿಸಿರುವ ಪ್ರಬಂಧವು ಜಗತ್ತಿನ ಶ್ರೇಷ್ಠ ವಿಮರ್ಶಕರ ಪ್ರಶಂಸೆಗೆ ಪಾತ್ರವಾಗಿದೆ. ಇದೊಂದು ಅಪರೂಪದ ಬರೆವಣಿಗೆ. ಶೇಕ್ಸ್‌ಪಿಯರನ ನಾಟಕಗಳ ಬಗ್ಗೆ ಬಂದಿರುವ ಜಗತ್ತಿನ ಉತ್ತಮ ವಿಮರ್ಶೆಗಳಲ್ಲಿ ಇದೂ ಒಂದೆಂದು ಪರಿಗಣಿತವಾಗಿದೆ. ಈ ಸಂಗತಿ ರಾಜೀವರ ಬೌದ್ಧಿಕತೆಯ ಆಳ ವಿಸ್ತಾರಗಳನ್ನು ತಿಳಿಸುತ್ತದೆ.

ಕನ್ನಡದಲ್ಲಿ ರಾಜೀವರು ಬರೆದಿರುವ ಲೇಖನಗಳು ಕಡಿಮೆ. ಒಂದು ಪೂರ್ಣ ಪ್ರಮಾಣದ ಪುಸ್ತಕಕೂಡ ಇವರ ಹೆಸರಿನಲ್ಲಿ ಬಂದಿಲ್ಲ ; ಆದರೆ ಎರಡು ಪುಸ್ತಕಗಳಿಗಾಗುವಷ್ಟು ಲೇಖನಗಳನ್ನು ಬರೆದಿದ್ದಾರೆ. ಪ್ರೊ॥ ಎಚ್. ಎಂ. ಚನ್ನಯ್ಯನವರ ಕಾವಿ, ಆಮೆ ಎಂಬ ಕವನ ಸಂಕಲನಗಳು, ನ. ರತ್ನ ಅವರ ಎಲ್ಲಿಗೆ? ನಾಟಕ, ಯು. ಆರ್. ಅನಂತಮೂರ್ತಿಯವರ ಪ್ರಶ್ನೆ ಕಥಾಸಂಕಲನ—ಇವುಗಳಿಗೆ ಅರ್ಥಪೂರ್ಣವಾದ ಮುನ್ನುಡಿಗಳನ್ನು ಬರೆದಿದ್ದಾರೆ. ಗಿರೀಶ್‌ಕಾರ್ನಾಡರ 'ತುಘಲಕ್" ಮತ್ತು ಚಂದ್ರಶೇಖರ ಕಂಬಾರರ ನಾಟಕಗಳ ಬಗ್ಗೆ ಬಹುತೂಕವಾದ ವಿಮರ್ಶೆ ಮಾಡಿದ್ದಾರೆ. ಮನ್ವಂತರದಲ್ಲಿ ಬರೆದ 'ನಾಟಕ ಪ್ರಜ್ಞೆ' 'ನಾಟಕ ಮತ್ತು ಕ್ರಿಯಾವಿಧಿ', ಸಾಹಿತ್ಯ ಮತ್ತು ವೈಚಾರಿಕತೆ, "ಕದಡಿದ ನೀರು" ಕೃತಿ ಕುರಿತ ವಿಮರ್ಶೆಗಳು ಇವರನ್ನು ಕನ್ನಡ ನವ್ಯ ವಿಮರ್ಶಕರ ಸಾಲಿನಲ್ಲಿ ಮುಖ್ಯರನ್ನಾಗಿಸಿವೆ. ಕನ್ನಡದ ಬಗ್ಗೆ ಅಪಾರ ಕಳಕಳಿ ಹೆಮ್ಮೆ ಇಟ್ಟುಕೊಂಡಿರುವ ರಾಜೀವರು ಸಂಸ್ಕೃತ ಮತ್ತು ಇಂಗ್ಲಿಷ್

ಕನ್ನಡದ ಸೊಲ್ಲನ್ನು ಅಡಗಿಸಿವೆ ಎಂದು ವ್ಯಾಕುಲಗಳ್ಳುತ್ತಾರೆ. ಉತ್ತರ ಕರ್ನಾಟಕದಲ್ಲಿರುವಂತಹ ಕನ್ನಡದ ಅಸಲಿತನ ದಕ್ಷಿಣ ಕರ್ನಾಟಕದಲ್ಲಿ ಮಾಯವಾಗಿ ಕನ್ನಡಬ್ರಾಹ್ಮಣ್ಯೀಕರಣಗೊಳ್ಳುತ್ತಿದೆಎಂದು ಖೇದಗೊಳ್ಳುತ್ತಾರೆ. "ಕನ್ನಡಿಗರಿಗೆ ತಮ್ಮವರನ್ನು ಗುರುತಿಸಿ ಮೆರೆಸುವ ಧೈರ್ಯವಾಗಲಿ, ಗಡಸುತನವಾಗಲಿ, ಸರಳವಾಗಿ ನಿಜಕಾಣುವ ಗುಣವಾಗಲಿ ಒಂದೂ ಇಲ್ಲ, "ಆದ್ದರಿಂದಲೇ ಕರ್ನಾಟಕವೇ ಗುರುತಿಸಿದ ಒಬ್ಬನೇ ಒಬ್ಬ ಸಂಗೀತಗಾರನೂ ಇಲ್ಲ" ಎಂದು ನಮ್ಮನ್ನು ಆತ್ಮಶೋಧನೆಗೆ ಹಚ್ಚುತ್ತಾರೆ.

ಇಂದು ಸಂಗೀತವನ್ನು ಜನಪ್ರಿಯ ಮಾಧ್ಯಮವಾಗಿಸಿಕೊಳ್ಳುವ ಅಗ್ಗದ ಧೋರಣೆಯ ಬಗ್ಗೆ ರಾಜೀವರಿಗೆ ಅಪಾರ ಸಿಟ್ಟು. ಈ ಅಗ್ಗದ ಜನಪ್ರಿಯತೆಯಿಂದ ಸಂಗೀತ ಎಂದರೆ ಇಷ್ಟೆ ಎಂಬ ಸರಳ ತೀರ್ಮಾನಕ್ಕೆ ನಮ್ಮ ಶ್ರೋತೃಗಳು ಬಂದುಬಿಟ್ಟಿದ್ದಾರೆ. ಸಂಗೀತದ ಆಳ ವಿಸ್ತಾರಗಳನ್ನು ಅರ್ಥಮಾಡಿಸುವ ವಿದ್ವಾಂಸರು, ಅರ್ಥೈಸುವ ಶ್ರೋತೃಗಳನ್ನು ರೂಪಿಸುವಲ್ಲಿ ನಾವು ಸೋತಿದ್ದೇವೆ, ಹೀಗಾಗಿ ಸಂಗೀತದ ಗಹನತೆ ಜನತೆಗೆ ತಿಳಿಯುತ್ತಿಲ್ಲ ಎಂದು ಈಗ ಸಂಗೀತ ಕಛೇರಿಗಳು ನಡೆಯುತ್ತಿರುವ ದಿಕ್ಕನ್ನು ವಿಶ್ಲೇಷಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸಂಗೀತದ ನಿಜಕಲಾವಿದರಿಗೆ ಸಿಗಬೇಕಾದ ಮನ್ನಣೆ ಸಿಗುತ್ತಿಲ್ಲವೆಂಬ ದೊಡ್ಡ ಕೊರಗು ವಿಷಮತೆ ರಾಜೀವರದು.

ರಾಜೀವರು ಸಾಹಿತ್ಯ ಮತ್ತು ಸಂಗೀತ ಕುರಿತಂತೆ ಇಂಗ್ಲಿಷ್‌ನಲ್ಲಿ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ.

ರಾಜೀವರ ಸಾಧನೆಯನ್ನು ಗುರುತಿಸಿ ಇವರಿಗೆ ಅನೇಕ ಪುರಸ್ಕಾರಗಳು ಲಭ್ಯವಾಗಿವೆ.

—೧೯೮೦ರಲ್ಲಿ ಏಡನ್ ಟೆಲಿವಿಷನ್ ಸಂಸ್ಥೆ ರಾಜೀವ ತಾರಾನಾಥರನ್ನು ಕುರಿತು ಫಿನಾರ್‌ವಿನ್ ಆಲ್ ಹಿಂದ್ (ಭಾರತದ ಕಲಾವಿದ) ಎಂಬ ಸಾಕ್ಷ್ಯಚಿತ್ರವನ್ನು ತಯಾರಿಸಿದೆ.

—೧೯೮೩ರಲ್ಲಿ ಕರ್ನಾಟಕ ಸರ್ಕಾರ "ಕರ್ನಾಟಕದ ಸಂಗೀತಗಾರ" ಎಂಬ ಹೆಸರಿನಲ್ಲಿ ರಾಜೀವರ ಸಾಕ್ಷ್ಯಚಿತ್ರವನ್ನು ಹೊರತಂದಿದೆ.

—೧೯೮೮ರಲ್ಲಿ ಹಿಂದೂಸ್ತಾನಿ ಸಂಗೀತ ಕಲಾಕಾರ ಮಂಡಳಿಯಿಂದ ಅಭಿನಂದನೆಯ ಮನ್ನಣೆ ದೊರೆತಿದೆ.

—ಸಂಗೀತದ ಅಧ್ಯಯನಕ್ಕಾಗಿ ಇವರಿಗೆ ೧೯೮೯–೯೨ರ ಆವಧಿಗೆ ಅಮೆರಿಕದ ಫೋರ್ಡ್‌ಫೌಂಡೇಶನ್ ಫೆಲೋಶಿಪ್ ದೊರತಿದೆ.

ಇವೆಲ್ಲಕ್ಕೂ ಮಿಗಿಲಾಗಿ ಕರ್ನಾಟಕ ಸರ್ಕಾರ ನೀಡುವ ಪಿಟೀಲು ಟಿ. ಚೌಡಯ್ಯ ಪ್ರಶಸ್ತಿಯು ಪ್ರಸ್ತುತ ಡಾ॥ ರಾಜೀವ ತಾರಾನಾಥರಿಗೆ ಲಭಿಸಿದೆ.

ಚಂದ್ರಯಾನದ ಒಂಟಿ ಪಯಣಿಗ

ಮಾಧವರಾವ್ ಮುಧೋಳ್
'ರಮಾಶ್ರೀ' ೧೧೬೭-ಬಿ೧, ೧ನೇ ಮುಖ್ಯರಸ್ತೆ
೧ನೇ ತಿರುವು, ಶ್ರೀರಾಂಪುರ, ೨ನೇ ಹಂತ
ಮೈಸೂರು-೫೭೦ ೦೨೩

ನೀಲಾಕಾಶದ ಚಂದಿರನಿಗೂ ನನಗೂ ಸಂಬಂಧವಿದೆ. ಅವನಲ್ಲಿಯ ಕಪ್ಪು ಕಲೆಯನ್ನು ಕಂಡು, ನನ್ನ ಸಂವೇದನೆ ಮಿಡಿದು, ಕಿಡಿಯಾಗುತ್ತದೆ. ಮನದ ಉಮ್ಮಳ ಹೆಚ್ಚಿ ಕೋಪಬರುತ್ತದೆ. ಅದರಿಂದಾಗಿ ಚಂದಿರನೇ ಹಳದಿಯಾಗಿ ಕಾಣುತ್ತಾನೆ. ಅವನಲ್ಲಿ ನನಗೆ ಮಹೇಶನ ಮುಖ ಕಾಣುತ್ತದೆ.

ನಾನು ಮಹೇಶನನ್ನು ಕಂಡದ್ದು ಆಸ್ಪತ್ರೆಯಲ್ಲಿ. ನನ್ನನ್ನೂ ಆಸ್ಪತ್ರೆಗೆ ಸೇರಿಸಿದ್ದರು. ಅದು ಮನೆಯಿಂದ ಐದುನೂರು ಮೈಲಿ ದೂರದ ಆಸ್ಪತ್ರೆ. ಅಲ್ಲಿಗೆ ನನ್ನನ್ನು ತರಲಾಗಿತ್ತು. ಆ ಆಸ್ಪತ್ರೆಯಲ್ಲಿಯೇ ನಾನು ಒಂದೂವರೆ ವರ್ಷ ಕಳೆಯಬೇಕಾಗುವುದೆಂಬುದೂ ಗೊತ್ತಾಗಿತ್ತು. ಡಾಕ್ಟರ್ ಧೋಲಕ್ಯಾ ಅವರು ನನ್ನನ್ನು ಪರೀಕ್ಷಿಸಿ, ಮೂರು ಆಪರೇಷನ್‌ಗಳು ಯಶಸ್ವಿಯಾದ ನಂತರ, ಮುಂದೆ ಯಾವುದಕ್ಕೂ ಖಚಿತವಾಗಿ ಹೇಳಬಹುದೆಂದು, ಸ್ಪಷ್ಟವಾಗಿ ನನ್ನ ತಂದೆಯವರಿಗೆ ಹೇಳಿದ್ದರು.

ಆಸ್ಪತ್ರೆ ಸೇರಿದನಂತರ ವಾರ್ಡ್‌ಬಾಯಿ ನನಗೆ ಸ್ನಾನಮಾಡಿಸಿ, ಬಿಳಿಚಾದರ ಹೊದಿಸಿದ, ಒಂದು ಮಂಚದ ಮೇಲೆ ಮಲಗಿಸಿದ. ಆಗ ನನಗೊಂದುಥರ ವಿಚಿತ್ರ ಕಲ್ಪನೆ. ಅವು ನನ್ನ ಕೊನೆಯ ದಿನಗಳಾಗಿರಬಹುದೆ? ಎಂದು. ದೈಹಿಕ ಬಾಧೆಯನ್ನೇ ತಡೆದುಕೊಳ್ಳುವ ಶಕ್ತಿ ನನ್ನಲ್ಲಿರದಾಗ, ಈ ಮೂರು ಆಪರೇಷನ್‌ಗಳನ್ನು ಹೇಗೆ ಎದುರಿಸುವುದೆಂಬ ವಿಚಾರ ಬಂದಿತು. ನಾಲ್ಕಾರು ದಿವಸಗಳನಂತರ ನನ್ನ ತಂದೆಯವರೂ ಮನೆಗೆ ಹಿಂದಿರುಗುವವರಿದ್ದರು. ಅವರು ತಿರುಗಿ ಹೋದನಂತರ ಒಬ್ಬೊಂಟಿಗನಾಗಿ ನಾನು ಇರಬೇಕಾದ ವಿಚಾರ ನನ್ನನ್ನು ವ್ಯಸನಕ್ಕೀಡುಮಾಡಿತು. ನನಗೆ ಆಪರೇಷನ್ ಮಾಡಿಸಬಾರದೆಂದು ಹಟಮಾಡಿದೆ. ಮುಂಬಯಿಯ ಈ ಆರ್ಥೋಪೆಡಿಕ್ ಆಸ್ಪತ್ರೆ ವಿಶಿಷ್ಟ ಮೊದಲನೆಯ ಸ್ಥಾನ ಪಡೆದಿದ್ದರೆ ಇರಲಿ, ಇಂಥ ಆಸ್ಪತ್ರೆ ನಾನಿರುವ ಪಟ್ಟಣದಲ್ಲಿ ಆದಾಗ ನಾನು ಆಪರೇಷನ್ ಮಾಡಿಸಿಕೊಳ್ಳುವೆನೆಂದು ಹೇಳುತ್ತಿರುವಾಗ, ಬದಿಯ ಪಲ್ಲಂಗದಿಂದ ಮಹೇಶನ ಧ್ವನಿ ಕೇಳಿಸಿತು.

"ನಾನೂ ಹೀಗೆಯೇ ಆಲೋಚಿಸಿದ್ದೆ. ನನ್ನ ತಂದೆಯವರಿಗೆ ಹೀಗೇನೆ ಹೇಳಿದ್ದೆ. ಆದರೆ ಅಷ್ಟೊತ್ತಿಗೆ ನಾನು ಬೆಳೆದು ದೊಡ್ಡವನಾಗಿರುತ್ತೇನೆ. ಮಕ್ಕಳು ದೊಡ್ಡವರಾಗು

ಮೂಲ : RAZAUL JABBAR—CANADA ಇವರ ಉರ್ದು ಕಥೆ.

ತ್ತಲು ಅವರ ಮೂಳೆಗಳು ಬಲಿತು ಬಿರುಸಾಗಿ ಬಿಡುತ್ತವೆ. ಆಗ ಆಪರೇಷನ್ ಬಹಳ ಕಷ್ಟಕರವಾಗುತ್ತದೆ ಎಂದು ನನ್ನ ತಂದೆ ಯವರು ಹೇಳಿದ್ದರು. ಅದಕ್ಕೇ ಗೆಳೆಯಾ! ಬೇಗ ಚಿಕಿತ್ಸೆಮಾಡಿಸಿಕೊ. ನಿನ್ನ ಕಾಲಿನ ಮೇಲೆ ನೀನು ನಿಲ್ಲು."

ಮಹೇಶನ ಉಪದೇಶದ ಅವಶ್ಯಕತೆ ನನಗೆ ಇರಲಿಲ್ಲ. ಅದಕ್ಕಾಗಿ ನಾನು ಅವನೆಂದುದಕ್ಕೆ ಲಕ್ಷ್ಯವನ್ನೇ ಕೊಡಲಿಲ್ಲ. ನನ್ನ ಕಣ್ಣುಗಳು ಅಶ್ರುಗಳಿಂದ ತುಂಬಿದ್ದವು. ನನ್ನನ್ನು ವಾಪಸ್ಸು ಕರೆದುಕೊಂಡು ಹೋಗಲು, ತಂದೆಯವರನ್ನು ಪರಿಪರಿ ಯಾಗಿ ಯಾಚಿಸಿಕೊಂಡೆ. ಮಹೇಶ ಈ ಸಲ ಮತ್ತೊಮ್ಮೆ ನನ್ನ ತಂದೆಯನ್ನೇ ನೇರ ಉದ್ದೇಶಿಸಿ ಹೇಳ ತೊಡಗಿದ.

"ತಾವು ಏನೂ ಚಿಂತಿಸಬೇಡಿ ಅಂಕಲ್! ಇಲ್ಲಿಗೆ ಬಂದ ಹುಡುಗರೆಲ್ಲ ಮೊದಲದಿನ ಅಳುತ್ತಾರೆ. ಆಮೇಲೆ ಅವರಿಗೆ ಈ ಆರ್ಥೋಪೆಡಿಕ್ ಆಸ್ಪತ್ರೆಯಲ್ಲಿರುವ ರೋಗಿ ಗಳು, ನಿಜವಾಗಲು ರೋಗಿಗಳಲ್ಲ, ಯಾವುದೋ ಬೋರ್ಡಿಂಗಿನಲ್ಲಿರುವ ಹುಡುಗರು ಎಂದು ಅನಿಸುತ್ತದೆ. ಅವರಿಗೆ ಇನ್‌ಡೋರ್‌ಗೇಮ್ಸ್ ಆಡಲು ಅವಕಾಶ ಸಿಕ್ಕುತ್ತದೆ. ನಗುಚೇಷ್ಟೆಗಾಗಿ ಜೊತೆ ಗಾರರು, ಓದಲು ಒಳ್ಳೊಳ್ಳೆಯ ಪುಸ್ತಕ ಗಳು ದೊರೆಯುತ್ತವೆ. ಆಗ ಅವರು ಅಳುವು ದನ್ನೂ, ತಮ್ಮ ಮನೆಗಳನ್ನೂ ಮರೆತು ಬಿಡುತ್ತಾರೆ. ತಮ್ಮ ತಂದೆ ತಾಯಿಗಳಿಗೆ ಕಾಗದ ಬರೆಯಲೂ ಸಮಯ ಉಳಿಸಿ ಕೊಳ್ಳದ ಅದೆಷ್ಟೋ ಹುಡುಗರನ್ನು ಹೆಸರಿಸ ಬಲ್ಲೆ. ತಂದೆ ತಾಯಿಗಳು ಅನೇಕಬಾರಿ ಆ ಹುಡುಗರಿಗೆ ಕಾಗದ ಬರೆಯುತ್ತಾರೆ. ಹುಡುಗರಿಂದ ಉತ್ತರ, ಅವರಿಗೆ ಹೋಗುವು ದಿಲ್ಲ. ಆಗ ವ್ಯಥೆಗೊಂಡು ಆಸ್ಪತ್ರೆ ಡಾಕ್ಟರು ಗಳಿಗೆ ಕಾಗದ ಬರೆದು, ತಮ್ಮ ಮಕ್ಕಳ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಾರೆ. ಇದರಂತೆ ತಂದೆ ತಾಯಿಗಳ ಪತ್ರಗಳಿಗೆ ಅನೇಕಬಾರಿ ಡಾಕ್ಟರುಗಳೇ ಉತ್ತರಿಸು ತ್ತಾರೆ."

ವಾಕ್ಯವನ್ನು ಪೂರ್ತಿಮಾಡಿ ನಗಲಾರಂಭಿ ಸಿದ. ಮಹೇಶ ಬರಿಯ ವಾಚಾಳಿ ಮಾತ್ರ ಅಲ್ಲ, ಹಸನ್ಮುಖಿಯಾಗಿಯೂ ಇದ್ದಾನೆ. ಇವನ ಮಾತಿನಲ್ಲಿ ನನಗೂ ಹೊತ್ತು ಹೋಗುವುದೆಂದು ಲೆಕ್ಕಹಾಕಿ ಕೊಂಡೆ.

ತಂದೆಯವರು ಊರಿಗೆ ಹೊರಟುಹೋದ ಮೇಲೆ ಮಹೇಶನನ್ನು ಸಹಜವಾಗಿ ವಿಚಾರಿ ಸಿದೆ.

"ಏನು? ನಿನ್ನ ತಂದೆ ತಾಯಿಯವರ ಪತ್ರಕ್ಕೆ ನೀನೂ ಉತ್ತರಿಸುವುದಿಲ್ಲವೆ?"

"ನನ್ನ ಮಾತು ಬಿಡು. ಅದು ಬೇರೆ...."

ಈ ಸಲ ಮಹೇಶನನ್ನು ದೃಷ್ಟಿಗೊಟ್ಟು ಹತ್ತಿರದಿಂದ ನೋಡಿದೆ. ನನ್ನ ಕಾಲುಗಳನ್ನು ಮಾತ್ರ ಪೋಲಿಯೋ ಆಕ್ರಮಿಸಿತ್ತು. ಅದರಿಂದ ನನ್ನ ಕಾಲುಗಳು ಕೆಲಸಕ್ಕೆ ಬಾರ ದಂತಾಗಿದ್ದವು. ಇಷ್ಟರಿಂದಲೇ ನಾನು ನನ್ನಷ್ಟಕ್ಕೆ ಬಹಳ ಅದೃಷ್ಟಹೀನನೆಂದು ತಿಳಿದುಕೊಂಡಿದ್ದೆ. ಆದರೆ ನನ್ನ ಹತ್ತಿರವೇ ಇಲ್ಲಿ ಪಲ್ಲಂಗದಲ್ಲಿ ಕುಳಿತಿರುವ ಮಹೇಶ ಇದ್ದಾನೆ. ಅವನ ಪೂರ್ತಿ ದೇಹವೇ ಕೆಲಸಕ್ಕೆ ಬಾರದಾಗಿರುವುದೆಂದೆನಿಸುತ್ತದೆ. ಅವನ ಕೈಗಳು ಭುಜಗಳಿಂದ ಇಳಿಬಿದ್ದುದನ್ನು ನೋಡಿದರೆ, ಹಳೆಯ ಆಲದಮರಕ್ಕೆ ಜೋತುಬಿದ್ದ ಬಾವಲಿಗಳಂತಿದೆ. ಸ್ನಾಯು

ಗಳು ಬಲಹೀನವಾಗಿರುವುದರಿಂದ ಹೊಟ್ಟೆ ಜೋತು ಬಿದ್ದಂತಿದೆ. ಕೇವಲ ಕತ್ತು ಮತ್ತು ಅದರ ಮೇಲಿರುವ ತಲೆಮಾತ್ರ ಆರೋಗ್ಯ ಕರವಾಗಿ ಕಾಣುತ್ತದೆ. ಕೈಗಳನ್ನು ಅಲ್ಲಾಡಿಸ ಬೇಕಾದರೆ, ಭುಜಗಳನ್ನು ಅವನು ಶಕ್ತಿಯಿಂದ ಕೊಡುವುತ್ತಾನೆ. ಆಗ ಅಲ್ಲಾಡುತ್ತಿರುವ ಅವನ ಕೈಗಳು ಹಿಂದಿನಿಂದ ಮುಂದಕ್ಕೆ, ಮುಂದಿನಿಂದ ಹಿಂದಕ್ಕೆ ಹೋಗುತ್ತವೆ. ಆದರೆ ಅವನ ಕಣ್ಣುಗಳಲ್ಲಿ ನಿಸ್ಸಂದೇಹವಾಗಿ ತೀಕ್ಷ್ಣಮತಿಯ ಮಿಂಚಿದೆ. ಯಾವಾಗ ಅವನು "ನನ್ನ ಮಾತುಬಿಡು. ಅದು ಬೇರೆ...." ಅಂದನೋ ಆಗ ಅವನ ಕಣ್ಣಿನ ಮಿಂಚು ಕಡಿಮೆಯಾಗಿ ಕಣ್ಣುಗಳು ತೇವಾದುದನ್ನು ಕಂಡೆ.

ನಾಲ್ಕು ದಿವಸಗಳ ಮೇಲೆ ನನ್ನದೊಂದು ದೊಡ್ಡ ಆಪರೇಷನ್ ಆಗಬೇಕಿತ್ತು. ನನ್ನ ತೊಡೆಗಳ ಮೂಳೆಗಳ ಬೆಳವಣಿಗೆ ವಿಕೃತವಾಗಿ ಬೆಳೆದಿದ್ದವು. ನನ್ನನ್ನು ಕ್ಯಾಲೀಪರುಗಳಿಂದ ನಿಲ್ಲಿಸುವುದಕ್ಕಾಗಿ, ವಿಕೃತವಾಗಿ ಬೆಳೆದ ಆ ಮೂಳೆಗಳನ್ನು ಕಡಿದು ಸರಿಯಾಗಿಸಬೇಕಿತ್ತು. ಆಪರೇಷನ್ ಕೊಠಡಿಗೆ ಹೋಗುವ ಮೊದಲು, ಮಹೇಶ ನನ್ನನ್ನು. "ಅಸಗರ್! ನೀನು ಆಪರೇಷನ್ನಿನ ಭಯಾನಕ ಚಿತ್ರವನ್ನು ಮನಸ್ಸಿನಲ್ಲಿ ತಂದುಕೊಳ್ಳುತ್ತಿರುವೆ. ಅದಕ್ಕಾಗಿ ನಿನಗೆ ಭಯ ಬರುತ್ತಿದೆ. ನೀನು ಆಪರೇಷನ್ ಕೊಠಡಿ ಒಳಕ್ಕೆಹೋಗುತ್ತಲೂ ಕ್ಲೋರೋಫಾರ್ಮ್ ಇಂಜಕ್ಷನ್ನಿನಿಂದ ನಿನ್ನನ್ನು ಎಚ್ಚರ ತಪ್ಪಿಸುತ್ತಾರೆ. ಆಗ ನಿನಗೆ ಯಾವ ದೊಡ್ಡ ಆಪರೇಷನ್ನಿನ ಸುಳಿವೂ ಸಿಕ್ಕುವುದಿಲ್ಲ. ಎಷ್ಟೋ ಗಂಟೆಗಳ ನಂತರ ನಿನಗೆ ಎಚ್ಚರ ಬರುತ್ತದೆ. ಆಗ ಕೆಲವು ಕ್ಷಣಗಳ ಮೊದಲು ಎಚ್ಚರತಪ್ಪಿದಂತೆ ನಿದ್ರೆಬಂದಂತಾಗಿತ್ತು ಎನಿಸುವುದು" ಎಂದು ಹೇಳಿ ನನ್ನಲ್ಲಿ ಧೈರ್ಯತುಂಬಿದ್ದ.

ನನಗೆ ಅದುದೂ ಹೀಗೇ. ನನಗೆ ಎಚ್ಚರ ಬಂದಾಗ ನಾನು ದಪ್ಪ ಮತ್ತು ಬಿರುಸಾದ ಪ್ಲಾಸ್ಟರಿನಿಂದ ಬಿಗಿಯಲ್ಪಟ್ಟು, ಪಲ್ಲಂಗದ ಮೇಲೆ ಉರುಳಿಕೊಂಡಂತಿತ್ತು. ಅಂಗಾಲಿನಿಂದ ಎದೆಯವರೆಗೂ ಪ್ಲಾಸ್ಟರ್ ಹಾಕಿದ್ದರು. ನನಗೆ ಏಳುವುದಕ್ಕೂ ಆಗುತ್ತಿರಲಿಲ್ಲ ಹೊರಳುವುದಕ್ಕೂ ಬರುತ್ತಿರಲಿಲ್ಲ. ಕೆಳಗೆ ಅಂಗಾಲುಗಳೂ ಪ್ಲಾಸ್ಟರಿನಲ್ಲಿದ್ದವು. ಆದರೆ ಕಾಲಿನ ಬೆರಳುಗಳು ಸ್ವಲ್ಪ ಸ್ವಲ್ಪ ಹೊರಗೆ ಬಂದಿದ್ದವು. ಡಾಕ್ಟರ್ ಮತ್ತು ನರ್ಸುಗಳು, ಅವುಗಳನ್ನು ಅಲುಗಾಡಿಸುತ್ತಿರಲು ಮೇಲಿಂದ ಮೇಲೆ ಹೇಳುತ್ತಿದ್ದರು ಮತ್ತು ಅವುಗಳನ್ನು ಮುಟ್ಟಿ ಮುಟ್ಟಿ ನೋಡಿ, ಅವು ನಿಶ್ಚೇಷ್ಟಿತವಾಗಿಲ್ಲೆಂಬುದನ್ನು ಖಾತ್ರಿ ಮಾಡಿಕೊಳ್ಳುತ್ತಿದ್ದರು. ನಾನು ಹೀಗೆಯೇ ಮಲಗಿ ಮೂರು ನಾಲ್ಕು ತಿಂಗಳುಗಳನ್ನು ಹೇಗೆ ಕಳೆಯಬೇಕೆಂದು ಗಾಬರಿಗೊಂಡಿದ್ದೆ. ಆದರೆ ಮಹೇಶ ನನ್ನಲ್ಲಿ ಮತ್ತೊಮ್ಮೆ ಧೈರ್ಯ ತುಂಬಿದ್ದ.

"ನಿನಗೆ ಹಾಕಿದ ಪ್ಲಾಸ್ಟರ್ ಒಣಗಿ ಬಿಡಲಿ, ಅಸಗರ್! ಆಗ ನೀನು ನರ್ಸನ್ನು ಕೇಳಿಕೊಂಡು, ಹೊಟ್ಟೆಕೆಳಕ್ಕೆ ಮಾಡಿಸಿಕೊಂಡು ಮಲಗಿಕೊ. ಹೊಟ್ಟೆ ಮತ್ತು ಮೊಣಕಾಲಿನ ಪ್ಲಾಸ್ಟರಿನ ಕೆಳಗೆ ದೊಡ್ಡದೊಡ್ಡ ಎರಡು ಮೂರು ದಿಂಬುಗಳನ್ನು ಇರಿಸಿಕೊ. ಆಗ ನೀನು ಬರಿಯ ಓದು ಬರಹದ ಕೆಲಸವೊಂದೇ ಏಕೆ, ನಿನ್ನ ಕೈಗಳಿಂದ ಊಟವನ್ನೂ ಮಾಡಬಲ್ಲೆ" ಎಂದು ಹೇಳಿದ್ದ.

ಮಹೇಶನ ಮಾತು ನಿಜವಾಗಿತ್ತು. ನಾನು ಹೊಟ್ಟೆಕೆಳಗಾಗಿ ಮಲಗಿದ್ದಾಗ ಮೊಟ್ಟಮೊದಲು ಅವನು ತನ್ನ ತಾಯಿಗೆ ನನ್ನಿಂದ ಪತ್ರ ಬರೆಸಿದ. ಪ್ರತಿ ಪತ್ರದಲ್ಲೂ ಅವನು ತನ್ನ ಅಣ್ಣ ಮತ್ತು ಅತ್ತಿಗೆಯನ್ನು ಜ್ಞಾಪಿಸುತ್ತಿದ್ದ. ಚಿಕ್ಕತಂಗಿ ಸುಧಾ ತಮ್ಮ ರಮೇಶನದು ಯಾವಾಗಲೂ ಅವನಿಗೆ ನೆನಪು ಕಾಡುತ್ತಿತ್ತು. ಪ್ರತಿ ಪತ್ರದಲ್ಲೂ ಅವರೆಲ್ಲರನ್ನು ನೋಡುವ, ಅವರೊಡನೆ ಮಾತನಾಡಿ ಬರುವ ಅವನ ತಳಮಳ ತುಂಬಿರುತ್ತಿತ್ತು. ಪ್ರತಿವಾರ ಅವನು ತಪ್ಪದೇ ಎರಡು ಕಾಗದಗಳನ್ನು ನನ್ನಿಂದ ಬರೆಸುತ್ತಿದ್ದ ಮತ್ತು ಅವುಗಳನ್ನು ಆಯಾಳ ಕೈಯಿಂದ ಪೋಸ್ಟಮಾಡಿಸುತ್ತಿದ್ದ, ಲಕ್ಷ್ಮೀಬಾಯಿ ಮಹೇಶನ ಅಚ್ಚುಮೆಚ್ಚಿನ ಆಯಾ ಆಗಿದ್ದಳು. ಅವನು ಲಕ್ಷ್ಮೀಬಾಯಿಯನ್ನು ಬಹಳ ಪ್ರೀತಿಯಿಂದ "ಅಮ್ಮಾ" ಎಂದು ಕರೆಯುತ್ತಿದ್ದ. ಲಕ್ಷ್ಮೀಬಾಯಿ ಮಹೇಶನ ಎಲ್ಲ ಕೆಲಸವನ್ನೂ ಬಹಳ ಖುಷಿಯಿಂದ ಮಾಡುತ್ತಿದ್ದಳು.

ಒಂದು ದಿನ ಮಹೇಶನನ್ನು ಸ್ನಾನ ಮಾಡಿಸಲು ಸ್ನಾನದಮನೆಗೆ ಕರೆದೊಯ್ದರು. ಆಗ ವಾರ್ಡಿಗೆ ಲಕ್ಷ್ಮೀಬಾಯಿ ಬಂದಿದ್ದಳು. ನಾನು ಇದು ಒಳ್ಳೆಯ ಸಮಯವೆಂದು ಲಕ್ಷ್ಮೀಬಾಯಿಯನ್ನು, "ಪ್ರತಿವಾರ ತಪ್ಪದೇ ಮಹೇಶ ತನ್ನ ತಾಯಿ ತಂದೆಗಳಿಗೆ ಎರಡು ಪತ್ರಗಳನ್ನು ಬರೆಸುತ್ತಾನೆ. ಆದರೆ ಮಹೇಶನ ತಾಯಿ ತಂದೆಗಳಿಂದ ಬಂದ ಪತ್ರಗಳನ್ನೇ ನೋಡಿಲ್ಲ. ಏಕೆ?" ಎಂದೆ.

"ಏಕೆ ಎಂದರೆ, ಮಹೇಶ ಅತಿಯಾಗಿ ಅಂಗವಿಕಲನಾಗಿದ್ದಾನೆ. ಅದಕ್ಕೆ ಚಿಕಿತ್ಸೆ ಆಗಲಾರದು. ಕ್ಯಾಲೀಪರ್ ಮತ್ತು ಟ್ರಚಸ್‌ಗಳಿಂದ ನಡೆಯಬೇಕಾದರೂ ಕನಿಷ್ಟ ಕೈಗಳಲ್ಲಾದರೂ ಶಕ್ತಿ ಬೇಕು. ಸರಿಯಾಗಿ ನಿಂತುಕೊಳ್ಳಲು ಸೊಂಟದಲ್ಲಿ ಶಕ್ತಿ ಇರಬೇಕು. ಪಾಪ! ಇವನ ಸೊಂಟವೂ ಬಲಹೀನವಾಗಿದೆ. ಕೈಗಳೂ ಶಕ್ತಿಹೀನವಾಗಿ ಜೋತಾಡುತ್ತಿವೆ" ಎಂದಳು ಲಕ್ಷ್ಮೀಬಾಯಿ.

"ಹಾಗಾದರೆ ಅವನನ್ನು ಇಲ್ಲಿ ಇರಿಸುವ ಉದ್ದೇಶವಾದರು ಏನು?" ಎಂದು ಕೇಳಿದೆ.

ಲಕ್ಷ್ಮೀಬಾಯಿ, ಸಮಾಜದ ಒರಟುತನವನ್ನು ಕಂಡು ವ್ಯಂಗ್ಯವಾಗಿ ಸೂಚಿಸುವಂತೆ, ಮೆದುವಾಗಿ ನಕ್ಕು, "ಡಾಕ್ಟರುಗಳು ಮಹೇಶನನ್ನು ಕರೆದುಕೊಂಡು ಹೋಗಲು, ಅವನ ತಂದೆ ತಾಯಿಗಳಿಗೆ ಬರೆದರು. ಈಗಾಗಲೇ ಎರಡು ವರ್ಷಗಳಾದವು. ಅವರು ಬರಲಿಲ್ಲ. ಮಹೇಶ ಗುಣಹೊಂದುವುದಿಲ್ಲವೆಂಬುದು ಅವನ ಸಂಬಂಧಿಕರಿಗೆ ಗೊತ್ತಾಗಿದೆ. ಇವಕ್ಕೋಸ್ಕರ ಅವರು ಅವನನ್ನು ತಮ್ಮ ಕುಟುಂಬದಲ್ಲಿ ಸೇರಿಸಿಕೊಳ್ಳುವುದಕ್ಕೆ ಸಿದ್ಧರಿಲ್ಲ. ಅವರು ಇವನನ್ನು ತಮಗೆ ಹೊರೆಯೆಂದು ತಿಳಿದಿದ್ದಾರೆ. ಇವನಿಂದ ಅವರ ಕುಟುಂಬಕ್ಕೆ ಭವಿಷ್ಯದಲ್ಲಿ ಯಾವ ಲಾಭವೂ ಇಲ್ಲ. ಯಾವ ಆಶೆ ಈಡೇರುವ ಸಂಭವವೂ ಇಲ್ಲ.

'ಅಯ್ಯೋ ದೇವರೇ!" ಎಂದು ನನ್ನಿಂದ ಉದ್ಗಾರ ಹೊರಟಿತು.

"ಹೌದು! ಭವಿಷ್ಯದಲ್ಲಿ ಅವನಿಂದ ಯಾವ ಪ್ರಯೋಜನವೂ ಇರದಾಗ, ರಕ್ತ ಸಂಬಂಧವೂ ಕಡಿದುಹೋಗುತ್ತದೆ. ಮಹೇಶನಿಗೆ ಮಾತ್ರ ಅವರನ್ನು ಕಾಣುವ, ಅವರ ಹತ್ತಿರ ಇರುವ ಆಶೆ ಬಹಳ ಇದೆ. ಅವನು ಪ್ರತಿ ದಿನ ಅವರ ಬರುವನ್ನು ನಿರೀಕ್ಷಿಸುತ್ತಾನೆ. ಮಲಗಿದ ಮೇಲೆ, ಕೇವಲ

ಅವರನ್ನು ಹುಡುಕುವುದಕ್ಕಾಗಿ ಕಣ್ಣು ತೆರೆದು, ಕಿಟಕಿಯಿಂದ ಉದ್ದನೆ ರಸ್ತೆ ನೋಡುತ್ತ ಕುಳಿತಿರುತ್ತಾನೆ. ಅಲ್ಲಿ ಅವನ ತಂದೆ, ತಾಯಿ, ಅಣ್ಣ, ಅತ್ತಿಗೆ, ಸುಧಾ ಮತ್ತು ರಮೇಶರು ಬರುವರೆಂದು ನಿರೀಕ್ಷಿಸುತ್ತಿರುತ್ತಾನೆ. ಅವರನ್ನು ಕಂಡು ಹರುಷಗೊಂಡು ಕರೆಯುವೆನೆಂದು ಕಿಟಕಿಯ ಬಳಿಯೇ ಕುಳಿತಿರುತ್ತಾನೆ" ಎಂದು ಲಕ್ಷ್ಮೀಬಾಯಿ ಹೇಳಿದಳು.

"ಡಾಕ್ಟರುಗಳು ಬರೆದ ಪತ್ರಗಳು ಅವರ ತಂದೆತಾಯಿಗಳಿಗೆ ತಲುಪಿರಲಿಕ್ಕಿಲ್ಲ. ಅವನ ತಂದೆಯವರ ವಿಳಾಸ ಬದಲಿಸಿರಬಹುದು" ಎಂದೆ ನಾನು.

"ಹಾಗೇನಿಲ್ಲ" ಲಕ್ಷ್ಮೀಬಾಯಿ ದೃಢತೆಯಿಂದ ಹೇಳಿದಳು. "ಈಗ ನಾಲ್ಕು ತಿಂಗಳ ಹಿಂದೆ ಆಸ್ಪತ್ರೆಯ ಸೆಕ್ರೆಟರಿಯವರು ತಮ್ಮ ಸ್ವಂತ ಖರ್ಚಿನಿಂದ ಒಬ್ಬ ಮನುಷ್ಯರನ್ನು ಮಹೇಶನ ಊರಿಗೆ ಕಳುಹಿಸಿದ್ದರು. ಅಲ್ಲಿ ಅವರು, ಮಹೇಶನನ್ನು ನೋಡಿಕೊಳ್ಳಲು ತಮ್ಮಲ್ಲಿ ಸ್ಥಳವೂ ಇಲ್ಲ, ಜನರೂ ಇಲ್ಲವೆಂದು ಹೇಳಿ, ಮುಂಬಯಿಯ ಯಾವುದಾದರು ಅಂಗವಿಕಲರ ಆಶ್ರಮಕ್ಕೆ ಅವನನ್ನು ಸೇರಿಸಲು ಸಲಹೆಕೊಟ್ಟರಂತೆ. ಏಕೆಂದರೆ ಅಲ್ಲಿ ಮಹೇಶನಿಗೆ ಹೊತ್ತುಹೋಗುವುದು, ಅವನಂತೆಯೇ ಇರುವವರನ್ನು ನೋಡಿಕೊಳ್ಳುವಂತೆ, ಇವನನ್ನೂ ಆಶ್ರಮವಾಸಿಗಳು ನೋಡಿಕೊಂಡಾರು" ಎಂದು ಹೇಳಿದರಂತೆ. ಇನ್ನು ಡಾಕ್ಟರುಗಳು ಮತ್ತು ವ್ಯವಸ್ಥಾಪಕ ವರ್ಗ ಈ ಸಂಬಂಧದಲ್ಲಿ ಏನು ವಿಚಾರಮಾಡುವುದೆಂದು ನೋಡಬೇಕು" ಎಂದಳು.

ಕೂಡಲೇ ಗಾಲಿಕುರ್ಚಿ ಕಣ್ಣಿಗೆ ಕಂಡಿತು. ಅದರ ಮೇಲೆ ಮಹೇಶನನ್ನು ಕೂರಿಸಿಕೊಂಡು ವಾರ್ಡ್‌ಬಾಯ್ ಬರುತ್ತಿದ್ದ. ಲಕ್ಷ್ಮೀಬಾಯಿ ಕೂಡಲೇ ನನ್ನನ್ನು ಸುಮ್ಮನಿರಲು ಹೇಳಿದಳು. ಏಕೆಂದರೆ ಇಂಥ ಮಾತುಗಳನ್ನು ಮಹೇಶ ಕೇಳಿದರೆ, ಅವನಿಗೆ ದುಃಖವಾಗುವುದು. ಲಕ್ಷ್ಮೀಬಾಯಿ ಹೇಳಿದುದರಿಂದ ಯಾರೂ ಇಂಥ ಮಾತುಗಳನ್ನು ಮಹೇಶನಿಗೆ ಹೇಳಿರಲಿಲ್ಲ. ಇದರಿಂದಾಗಿ ನನಗೂ ಹೀಗೆಯೇ ಮಾಡಲು ತಿಳಿಹೇಳಿದಳು. ನಾನೂ ಈ ಮಾತುಗಳನ್ನು ಮಹೇಶನಿಗೆ ಹೇಳುವುದಿಲ್ಲೆಂದು ದೃಢನಿಶ್ಚಯ ಮಾಡಿಕೊಂಡೆ.

ಮಹೇಶನ ಪಲ್ಲಂಗ ವಾರ್ಡಿನ ಮೂಲೆಯೊಂದರ ಬಳಿ ಇತ್ತು. ಇದರಿಂದಾಗಿ ಅವನ ಹಾಸಿಗೆ ಪಕ್ಕ ಎರಡು ಕಿಟಕಿಗಳು ತೆರೆಯುತ್ತಿದ್ದವು. ಒಂದು ಮಗ್ಗುಲಿನ ಗೋಡೆಯಿಂದ ತೆರೆಯುವದಾದರೆ, ಇನ್ನೊಂದು ಅವನ ತಲೆಯ ಬದಿಯಲ್ಲಿ ತೆರೆಯುತ್ತಿತ್ತು. ಈ ಎರಡೂ ಕಿಟಕಿಗಳಿಂದ, ಹೊರಗಿನ ಎರಡೂ ಬದಿಗೂ ದೂರದೂರದವರೆಗೆ ಕಾಣುತ್ತಿತ್ತು.

ಒಂದು ದಿನಸ ಮಧ್ಯರಾತ್ರಿಯ ನಂತರ ನನಗೆ ಅಕಸ್ಮಾತ್ತಾಗಿ ಎಚ್ಚರನಾಯಿತು. ಅಂಗಾತ ಮಲಗಿಕೊಂಡಿದ್ದ ಮಹೇಶ ಎದ್ದು ಕುಳಿತುಕೊಳ್ಳುವುದಕ್ಕಾಗಿ ಪ್ರಯಾಸ ಪಡುತ್ತಿದ್ದುದನ್ನು ನೋಡಿದೆ. ಮೇಲಿಂದ ಮೇಲೆ ಅವನು ಸ್ವಲ್ಪ ಅಡ್ಡ ಹೊರಳಲು ಪ್ರಯತ್ನಿಸುತ್ತಿದ್ದ. ತಲೆ ಎತ್ತಿ ಅರ್ಧ ಏಳುತ್ತಿದ್ದ ಆದರೆ ಸೊಂಟದಲ್ಲಿ ಶಕ್ತಿ ಇರದೆ ಕೂಡಲೇ ಬಿದ್ದುಬಿಡುತ್ತಿದ್ದ. ಆದರೂ ಸ್ವಲ್ಪ ಸ್ವಲ್ಪ ಸರಿಯುತ್ತ ಅವನ ತಲೆ ಪಲ್ಲಂಗದ ರೇಲಿಂಗಿನ ಹತ್ತಿರ ಬಂದಿತು. ರೇಲಿಂಗಿನ ಹಿಡಿಯಲ್ಲಿ ಅವನು ತನ್ನ ತಲೆಯಿರಿಸಿ, ಹೇಗೋ ಇದ್ದೆಲ್ಲ ಶಕ್ತಿ

ಯನ್ನು ಹಾಕಿ ಕುಳಿತುಕೊಳ್ಳುವುದರಲ್ಲಿ ಯಶಸ್ವಿಯಾದ. ನನಗೆ ಪ್ಲಾಸ್ಟರ್ ಹಾಕಿದ್ದುದರಿಂದ ಅವನಿಗೆ ನಾನು ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ಆದರೂ ಅವನೇನು ಮಾಡುತ್ತಾನೆಂದು ನೋಡಬೇಕೆಂದಿದ್ದೆ. ಅವನು ಕುಳಿತ ಮೇಲೆ ತನ್ನ ತಲೆಯಿಂದ ಡಿಕ್ಕಿ ಹೊಡೆದು ಕಿಟಕಿಯ ಬಾಗಿಲುಗಳನ್ನು ತೆರೆದ. ಚಳಿಗಾಳಿ ಬರಬಾರದೆಂದು ಅವುಗಳನ್ನು ಮುಚ್ಚಲಾಗಿತ್ತು. ಕಿಟಕಿಯ ಬಾಗಿಲುಗಳು ತೆರೆಯುತ್ತಲೂ ತಣ್ಣನೆ ಗಾಳಿ ಗುಂಟ ಹೊರಗೆ ಹರಡಿದ ಝಗಝಗಿಸುವ ಬೆಳದಿಂಗಳು ಮಹೇಶನ ಹಾಸಿಗೆಯನ್ನು ಆವರಿಸಿತು. ಮಹೇಶ ಈಗ ಬೆಳದಿಂಗಳಲ್ಲಿದ್ದ. ಅವನು ಎಡಬಿಡದೆ ಪೂರ್ಣಚಂದ್ರನನ್ನು ನೋಡತೊಡಗಿದ್ದ. ಕಿಟಕಿಯ ಸರಳ ಮೇಲೆ ಅವನು ತನ್ನ ತಲೆಯನ್ನಿರಿಸಿದ. ಅವನ ಕಣ್ಣುಗಳು ಚಂದ್ರನನ್ನು ನೋಡುತ್ತಿದ್ದವು.

ಬಹಳ ಹೊತ್ತಿನವರೆಗೆ ಮಹೇಶನನ್ನು ಈ ಸ್ಥಿತಿಯಲ್ಲಿ ನೋಡಿದ ಮೇಲೆ, ಅವನನ್ನು ಮೆಲ್ಲನೇ ಕರೆದು, "ಸರಳಿನ ಮೇಲೆ ತಲೆ ಇಟ್ಟುಕೊಂಡು ಮಲಗಿಲ್ಲ ಅಲ್ಲವೆ ?" ಎಂದು ಕೇಳಿದೆ.

"ಇಲ್ಲ. ನನ್ನನ್ನು ನಾನು ಮರೆತು, ಆಕಾಶದ ಚಂದಿರನನ್ನು ಕಂಡು ಸಂತಸಪಡುತ್ತೇನೆ. ಮೈಲಿನುದ್ದಕ್ಕು ಹರಡಿದ ನೀಲಿಯ ಸಾಗರದಂತಿದ್ದ ಆಕಾಶ. ಅದರಲ್ಲಿ ಸುಂದರವಾಗಿ ಸಿಂಗರಿಸಿದ ನೌಕೆಯಾಗಿರುವ ಆ ಚಂದಿರ. ಚಂದಿರನ ನೌಕೆಯ ಆ ಕಪ್ಪು ಛಾಯೆಯಲ್ಲಿ ನಾನು ಅವಿತುಕೊಂಡಿರುವೆ. ನನ್ನ ಪಕ್ಕದಲ್ಲಿ ತಾಯಿಯಿದ್ದಾಳೆ. ಅವಳ ಮಡಿಲಲ್ಲಿ ನನ್ನ ತಲೆಯನ್ನಿರಿಸಿರುವೆ. ಅವಳು ಅದನ್ನು ಅಂತಃಕರಣದಿಂದ ನೇವರಿಸುತ್ತಿದ್ದಾಳೆ. ನೌಕೆಯು ಬಯಲು ಜಾಗದಲ್ಲಿ ಸುಧಾ ನೃತ್ಯ ಮಾಡುತ್ತಿದ್ದಾಳೆ. ಅವಳಿಗೆ ನಾಟ್ಯ ಕಲಿಯುವುದರಲ್ಲಿ ಬಹಳ ಆಸಕ್ತಿ ಇದೆ. ಈ ನೂರು ವರ್ಷಗಳಲ್ಲಿ ಅವಳು ಇನ್ನೂ ದೊಡ್ಡವಳಾಗಿರಬಹುದು. ಅತ್ತಿಗೆ ಅವಳಿಗೆ ನೃತ್ಯವನ್ನು ಕಲಿಸಿರಬಹುದು. ರಮೇಶನಿಗೆ ಚಿಕ್ಕಪುಟ್ಟ ಬಣ್ಣ ಬಣ್ಣದ ಪಕ್ಷಿಗಳನ್ನು ಸಾಕುವ ಒಲವಿದೆ. ಅವನು ಎಲ್ಲಿಗೆ ಹೋದರು, ಬರುವಾಗ ಅಲ್ಲಿಂದ ಪಕ್ಷಿಗಳಿಗೆ ಪಂಜರವನ್ನು ತರುತ್ತಾನೆ. ನಾನು ಮನೆ ಬಿಟ್ಟು ಬಂದಾಗ ಅವನಲ್ಲಿ ನಾಲ್ಕು ಪಕ್ಷಿಗಳಿದ್ದವು. ಅದರಲ್ಲೊಂದು ಜತೆ ಪಕ್ಷಿ ಮೊಟ್ಟೆಯನ್ನೂ ಇಟ್ಟಿತ್ತು. ಈಗ ರಮೇಶನ ಹತ್ತಿರ ತೀರ ಕಡಿಮೆಯೆಂದರೆ, ಎರಡು ಡಜನ್ ಪಕ್ಷಿಗಳಾದರೂ ಖಂಡಿತ ಇರಬಹುದು. ವಿವಿಧ ಬಣ್ಣಗಳ ಪಕ್ಷಿಗಳು ಮನಸ್ಸನ್ನು ಬಹಳ ರಂಜಿಸುವವು. ಈಗಲಾದರು ಅವನು ದೊಡ್ಡ ಪಂಜರವನ್ನು ಕೊಂಡುಕೊಂಡಿರುವನೋ ಅಥವ ಪಂಜರದ ಸಂಖ್ಯೆಯನ್ನೇ ಹೆಚ್ಚಿಸಿಕೊಂಡಿರುವನೋ ತಿಳಿಯದು. ನಾನು ಚಂದಿರನ ಆ ನೌಕೆಯಲ್ಲಿ ಕುಳಿತು ನಿಜವಾವುದೆಂಬುದರ ಲೆಕ್ಕ ಹಾಕುತ್ತಿರುವೆನೆಂದೆನಿಸುವುದು" ಎಂದು ಮಹೇಶ ನುಡಿದ.

ಹುಣ್ಣಿಮೆಯ ಚಂದಿರ, ನೀಲಾಕಾಶ, ಹರಡಿದ ಬೆಳದಿಂಗಳು, ಮನತಣಿಸುವ ಕಲ್ಪನೆಗಳು ಮಹೇಶನ ವಿಹಾರ ಸ್ಥಾನಗಳಾಗಿದ್ದವು. ಅವುಗಳನ್ನುಳಿದು, ಅವನು ಹೋಗುವುದಾದರು ಎಲ್ಲಿಗೆ ? ಚಂದಿರನ ಸುವರ್ಣ ಬಣ್ಣದ ನೌಕೆಯಲ್ಲಿ ಕುಳಿತು, ನಿಜವನ್ನು ಹುಡುಕುವುದು ಅವನ ಅಸಹಾಯಕತೆಯ ಸಾಕ್ಷಿಯಾಗಿದ್ದವು.

ಲಕ್ಷ್ಮೀಬಾಯಿಗೆ ಪ್ರೀತಿಯಿಂದ, "ಅಮ್ಮಾ" ಎಂದು, ಪ್ರಾಯಶಃ ತನ್ನ ತಾಯಿಯನ್ನು ಕರೆಯುವ ಹಂಬಲವನ್ನು ತೀರಿಸಿಕೊಳ್ಳು ತ್ತಿದ್ದ. ಪ್ರತಿವಾರ ಮಹೇಶನಿಗಾಗಿ ಅಂಚೆ ಕಾರ್ಡುಗಳನ್ನು ಅವಳು ತಂದು ಕೊಡುತ್ತಿದ್ದಳು. ಅವುಗಳನ್ನು ತನ್ನ ಹತ್ತಿರದವರಿಗೆ, ಮುದ್ದಿಸಿ ಬೆಳೆಸಿದವರಿಗೆ, ನನ್ನಿಂದ ಬರೆಸಿ ಹಾಕಿಸುತ್ತಿದ್ದ. ಜೊತೆಗೆ ನಿತ್ಯವೂ ಸಂಜೆ, ಕಿಟಕಿಯಿಂದ ನೋಡಿ ನೋಡಿ ಅವರ ಬರುವನ್ನು ನಿರೀಕ್ಷಿಸುತ್ತಿದ್ದ.

ಪ್ಲಾಸ್ಟರ್ ತೆಗೆಯುತ್ತಲೂ ನಾನು ಕುಳಿತುಕೊಳ್ಳುವಂತಾದೆ. ಸಂಜೆ ನಾಲ್ಕರಿಂದ ಆರು ಗಂಟೆಯವರೆಗೆ ಆಸ್ಪತ್ರೆಯಲ್ಲಿದ್ದವರನ್ನು ನೋಡಲು ಜನರು ಬರುತ್ತಿದ್ದರು. ಆಗ ನಾನು ಮತ್ತು ಮಹೇಶ ಇಬ್ಬರೂ ಬಹಳ ಏಕಾಕಿಗಳಾಗಿರುತ್ತಿದ್ದೆವು. ಏಕೆಂದರೆ ನಮ್ಮನ್ನು ನೋಡಲು ಯಾರಾದರು ಬರುವರೆಂಬ ಆಶೆಯೇ ನಮಗಿರಲಿಲ್ಲ. ಈ ಒಂಟಿತನದ ಅನಿಸಿಕೆಯನ್ನು ಹೋಗಲಾಡಿಸುವುದಕ್ಕೆ ಎಷ್ಟೋ ಸಂಜೆ, ಮಹೇಶನ ಪಲ್ಲಂಗದ ಮೇಲೆಯೇ ಹೋಗಿ ಕುಳಿತಿರುತ್ತಿದೆ. ಕಿಟಕಿಯಿಂದ ಹೊರಗೆ, ಆಸ್ಪತ್ರೆಗೆ ಬರುವವರನ್ನು ಅಲ್ಲಿಂದ ಹೋಗುವವರನ್ನು ನೋಡುತ್ತಲಿದ್ದೆವು. ಇಂಥ ಸಂದರ್ಭಗಳಲ್ಲೆಲ್ಲ, ಮಹೇಶ ದೂರದಿಂದ ಬರುತ್ತಿರುವ ಜನರಲ್ಲಿ ತನ್ನ ತಂದೆ, ತಾಯಿ, ಅಣ್ಣ, ಅತ್ತಿಗೆ, ತಂಗಿ ತಮ್ಮಂತಿರುವವರನ್ನು ಹುಡುಕಿ ಪರಿಚಯಿಸುತ್ತಿದ್ದ.

"ನೋಡು ಅಸಗರ್! ಆ ಹುಡುಗಿ ಸುಧಾ ನಡೆದಂತೆ ನಡೆಯುತ್ತಿದ್ದಾಳೆ".

"ಆ ಹೆಂಗಸಿನ ಕೇಶಗಳು, ನಿಜವಾಗಲೂ ನನ್ನ ಅತ್ತಿಗೆಯ ಕೇಶಗಳಂತೇ ಹರಡಿಕೊಂಡಿವೆ"

"ನನ್ನ ಅಣ್ಣನ ಹಣೆ ಆ ಮನುಷ್ಯನ ಹಣೆಯಂತೆಯೆ ಗುಂಡಗಾಗಿದೆ"

"ಅರೆ! ನಿಜವಾಗಲು ಅಲ್ಲಿ ನೋಡು! ಸೀರೆಯ ಸೆರಗನ್ನು ಹೊದಿದ್ದಾಳಲ್ಲ, ಆ ಹೆಂಗಸು ಪಕ್ಕದಿಂದ ನೋಡಿದರೆ ನನ್ನ ತಾಯಿಯಂತೇ ಕಾಣುತ್ತಾಳೆ"

ಮಹೇಶನ ಈ ಬಗೆಯ ಮಾತುಗಳನ್ನು ಅನೇಕ ಸಲ ಕೇಳಿದ ಮೇಲೆ, ನಿಜವಾಗಲು ಎಲ್ಲಿಯಾದರು ಅವನ ತಂದೆ ತಾಯಿ, ಅಣ್ಣ ಅತ್ತಿಗೆಯನ್ನು ನಾನು ನೋಡಿದರೆ, ಅವರನ್ನು ಗುರುತಿಸಲು ನನಗೆ ತಡವೇನೂ ಆಗಲಾರದೆನಿಸಿತು.

ಒಂದರ ಹಿಂದೆ ಇನ್ನೊಂದರಂತೆ ನನ್ನ ಮೂರೂ ಆಪರೇಷನ್ನುಗಳು ಯಶಸ್ವಿಯಾದವು. ವಕ್ರವಾಗಿ ಬೆಳೆದ ನನ್ನ ತೊಡೆ ಮೂಳೆಗಳನ್ನು ಸರಿಯಾಗಿಸಲಾಗಿತ್ತು. ಆದರೆ ಕಾಲುಗಳ ಹೋದ ಶಕ್ತಿ ಮಾತ್ರ ತಿರುಗಿ ಬರಲಿಲ್ಲ. ಇದರಿಂದಾಗಿ ನನ್ನನ್ನು ನಿಲ್ಲಿಸಲು ಕ್ಯಾಲೀಪರ್ಸ್ ಮತ್ತು ಕ್ರಚಸ್ಸುಗಳಿಗಾಗಿ ಆರ್ಡರ್ ಕೊಡಲಾಯಿತು.

ಅಕಸ್ಮಾತ್ತಾಗಿ ಮಧ್ಯ ರಾತ್ರಿಯ ಹೊತ್ತಿಗೆ ನನಗೆ ಎಚ್ಚರವಾಯಿತು. ಮಹೇಶ ನರಳುತ್ತಿದ್ದ. ಅವನ ನರಳಿಕೆಯಲ್ಲಿ ಅತೀವ ವೇದನೆಯಿತ್ತು. ನಾನು ಎದ್ದು ಕುಳಿತು,

"ಸಿಸ್ಟರನ್ನು ಕರೆಯಬಾ ಮಹೇಶ?" ಎಂದು ಕೇಳಿದೆ.

"ಎದೆಯಲ್ಲಿ ವಿಚಿತ್ರವಾದ ನೋವಾಗುತ್ತಿದೆ. ನೀನು ಸಿಸ್ಟರನ್ನು ಕೂಗಿದರೆ ಅಕ್ಕಪಕ್ಕದ ಮಕ್ಕಳಿಗೆಲ್ಲ ನಿದ್ರೆ ಭಂಗವಾಗುತ್ತದೆ" ಎಂದ.

"ನಾನು ಏನು ಮಾಡಬೇಕು ಹೇಳು".

"ನನ್ನ ಕಬೋರ್ಡಿನಲ್ಲಿ ಪ್ಲಾಸ್ಟಿಕ್ಕಿನ ಬಿಳಿಯ ಡಬ್ಬವೊಂದಿದೆ. ಅದರಲ್ಲಿ ಮಾತ್ರೆಗಳಿರಬಹುದು. ಅವರೊಳಗಿನ ಒಂದು ಮಾತ್ರೆಯನ್ನು ಕೊಡು. ಮತ್ತು ನೀರನ್ನೂ ಕೊಡು. ನೋವು ತಾನೇ ಕಡಿಮೆಯಾಗುವುದು" ಎಂದು ನರಳುತ್ತಲೇ ಮಹೇಶ ಹೇಳಿದ.

ನನ್ನ ಒಂದು ಕೈಯನ್ನು ಪಲ್ಲಂಗದ ಮೇಲೆ ಮತ್ತೊಂದನ್ನು ಮಹೇಶನ ಪಲ್ಲಂಗದ ಮೇಲೆ ಹಾಕಿ, ದೇಹವನ್ನು ಜೀಕಿಸಿ, ಮಹೇಶನ ಪಲ್ಲಂಗದ ಮೇಲೆ ಬಂದೆ. ಅವನ ಪಲ್ಲಂಗದ ಮಗ್ಗುಲಲ್ಲಿಯೇ ಅವನ ಕಬೋರ್ಡ್ ಇತ್ತು. ಜಾಗಿ ಅದನ್ನು ತೆರೆದೆ. ಅದರಲ್ಲಿರುವ ಪ್ಲಾಸ್ಟಿಕ್ ಡಬ್ಬದಲ್ಲಿಯ ಒಂದು ಮಾತ್ರೆಯನ್ನು ತೆಗೆದು ಮೇಲಿಟ್ಟು ಅವನ ಖಾಲೀ ಗ್ಲಾಸು ತೆಗೆದುಕೊಂಡು ಪಲ್ಲಂಗದಿಂದ ಕೆಳಗಿಳಿದು ನೆಲದಮೇಲೆ ಕುಳಿತೆ. ಉದ್ದವಾಗಿ ನೆಲದ ಮೇಲೆ ಚಾಚಿದ ಕಾಲುಗಳು ಮತ್ತು ದೇಹವನ್ನು ಕೈಗಳ ಆಸರೆಯ ಮೇಲೆ ಸರಿಸುತ್ತ ನೀರುಮನೆಯವರೆಗೆ ಸರಿದು ಹೋದೆ. ಅಲ್ಲಿ ನಲ್ಲಿಯಿಂದ ನೀರನ್ನು ತೆಗೆದುಕೊಂಡು ಬಂದೆ. ಮಹೇಶ ನನ್ನು ನನ್ನ ಕೈಗಳ ಆಸರೆಯಿಂದ ಕುಳ್ಳಿರಿಸಿದೆ. ಅವನ ಬಾಯಿಯಲ್ಲಿ ಮಾತ್ರೆ ಇರಿಸಿ, ನೀರು ಕುಡಿಸಿದೆ. ಪ್ರಾಯಶಃ ಅವನು ಕುಳಿತುಕೊಂಡಿರುವುದರಿಂದ, ಅವನ ನೋವಿನಲ್ಲಿ ಸ್ವಲ್ಪ ಬದಲಾವಣೆಯಾದಂತಿತ್ತು. ಆದರೆ ಅವನ ಮುಖ ಬೆವರು ಹನಿಗಳಿಂದ ತುಂಬಿ ಹೋಗಿತ್ತು. ಅವನು,

"ಸ್ವಲ್ಪ ದಿನಗಳಲ್ಲಿ ನಿನ್ನ ಕ್ಯಾಲೀಪರ್ಸ್ ಮತ್ತು ಕ್ರಚರ್ಸ್ ಬಂದುಬಿಡುವುವು. ನೀನೂ ನಿನ್ನ ಕಾಲುಗಳ ಮೇಲೆ ನಿಂತುಕೊಳ್ಳುವೆ" ಎಂದನು.

ನನಗೇನು ಸಂತಸವಾಗಲಿಲ್ಲ. ಕಾರಣವೆಂದರೆ ಹದಿನಾಲ್ಕು ವರ್ಷಗಳ ಕೆಳಗೆ ನನಗೆ ಪೋಲಿಯೋ ಆದಾಗ ನನ್ನ ವಯಸ್ಸು ಎರಡು ವರ್ಷ. ಆಗ ನನಗೆ ನನ್ನ ಕಾಲಿನ ಮೇಲೆ ನಾನು ನಿಲ್ಲುವೆನೆಂಬ ಮಾತಿನ ಅರಿವೇ ಇರಲಿಲ್ಲ.

"ಮೊದಲನೆಯ ಸಲ ನಿನ್ನ ಕಾಲುಗಳ ಮೇಲೆ ನೀನು ನಿಂತುಕೊಂಡೆಯೆಂದರೆ, ನೀನು ಬಹಳ ಎತ್ತರವಾಗಿರುವೆಯೆಂದೂ ಮತ್ತು ಪೂರ್ತಿ ಪರಿಸರವೇ ನಿನಗೆ ತಗ್ಗಿದಂತಾಗಿದೆಯೆಂದೂ, ನಿನಗನಿಸುವುದು" ಎಂದ ಮಹೇಶ.

"ಒಂದು ದಿವಸ ನೀನೂ ಪರಿಸರವನ್ನು ತಗ್ಗಿಸಿಬಿಡುವೆ" ಎಂದು ಮಹೇಶನಿಗೆ ಸಮಾಧಾನ ಹೇಳಿದೆ. ಆದರೆ ಮಹೇಶ ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳದೆ,

"ನಾನು ಮನೆಗೆ ಹೋಗಬೇಕೆಂದು ಚಡಪಡಿಸುತ್ತಿದ್ದೇನೆ. ನನಗೆ ನೋವು ಹೆಚ್ಚಾಗುತ್ತಲೂ ತನ್ನಷ್ಟಕ್ಕೆ ತಾನೇ ದೇವರ ಮತ್ತು ಅಮ್ಮನ ನೆನಪಾಗುತ್ತದೆ. ಅಸಗರ್! ಅಲ್ಲಿ ನೋಡು! ಅಷ್ಟು ದೂರದಲ್ಲಿ ಹಾಜೀ ಬಾಬಾನ ದರಗಾಃದ ಎದುರಿಗೆ ಒಂದು ಟ್ರಕ್ಕು ಹೋಗುತ್ತಿದೆ. ಆ ಹೋಗುತ್ತಿರುವ ಶಬ್ದ ಇಲ್ಲಿಯವರೆಗೂ ಬರುತ್ತಿದೆ. ಇದರಂತೆಯೇ ನಾನೂ ನನ್ನವರನ್ನು ನೆನೆಸಿಕೊಳ್ಳುತ್ತಿರುವಾಗ, ಆ ನೆನಹು ಅವರಿಗೂ ತಿಳಿಯುತ್ತಿರಬಹುದು. ಅವರು ಬೇಗ ಬರುವರೆಂದು ನನ್ನ ಹೃದಯ ಹೇಳುತ್ತಿದೆ."

"ಮುಂದಿನ ಪತ್ರದಲ್ಲಿ, ನೀನು ನೋವಿನಿಂದ ನರಳುತ್ತಿರುವಾಗ, ಅವರನ್ನು ತುಂಬಾ

ನೆನೆಸಿದೆಯೆಂದು, ನಾನು ಬರೆಯುವೆ" ಎಂದು ಹೇಳಿದೆ.

ಮತ್ತೆ ಹದಿನೈದು ದಿನಗಳ ನಂತರ ರಾತ್ರಿಯಲ್ಲಿ ಮಹೇಶನಿಗೆ ಇಂಥದೇ ನೋವುಂಟಾಯಿತು. ಪ್ರಾಯಶಃ ಮೊದಲಿಗಿಂತಲೂ ಹೆಚ್ಚಾಗಿರಬಹುದು. ಏಕೆಂದರೆ ಈಗ ಅವನು ನೋವಿನಿಂದ ನರಳುತ್ತಿರುವಾಗ ಅವನ ಬಾಯಿಯಿಂದ ಮಾತೇ ಹೊರಡುತ್ತಿರಲಿಲ್ಲ.

ನಾನು ಅವನ ಪಲ್ಲಂಗಕ್ಕೆ ಹೋದೆ. ಮಗ್ಗುಲಲ್ಲಿರುವ ಕಿಟಕಿಯ ಬಾಗಿಲುಗಳನ್ನು ತೆರೆದೆ. ಕೂಡಲೇ ಚಂದಿರನ ಪೂರ್ತಿ ಬೆಳಕು ಮಹೇಶನ ಮುಖದ ಮೇಲೆ ಬಿದ್ದಿತು. ಅವನು ಚಂದಿರನತ್ತ ನೋಡುತ್ತಿದ್ದ. ನಾನು ಮಹೇಶನ ಮುಖವನ್ನು ನೋಡುತ್ತಿದ್ದೆ. ಅವನ ಮುಖ ಬೆವರು ನೀರಿನಿಂದ ತೊಯ್ದು ಹೋಗಿತ್ತು. ನಾನು ಸಿಸ್ಟರನ್ನು ಕರೆಯಬೇಕೆಂದೆ. ಆದರೆ ಮಹೇಶ ನನ್ನನ್ನು ತಡೆಯುತ್ತ,

"ಕರೆಯಬೇಡ ಅಸಗರ್ ! ನಾನು ಸಹಿಸಿಕೊಳ್ಳುವೆ. ನನ್ನ ತಂದೆಯವರು ಆಸ್ಪತ್ರೆಯ ಖರ್ಚನ್ನು ಕಳಿಸುತ್ತಿಲ್ಲೆಂಬುದು ನನಗೆ ಗೊತ್ತಾಗಿದೆ. ಈಗ ನಾನು ಈ ನೋವಿನ ವಿಷಯ ಹೇಳಿ, ಡಾಕ್ಟರಿಂದ ಹೇಗೆ ಔಷಧ ಪಡೆಯಲಿ ?" ಎನ್ನುತ್ತ ಮತ್ತೆ ಚಂದಿರನನ್ನು ನೋಡಿ, "ಈಗ ನಾನು, ಯಾರ ಜೊತೆಯೂ ಇಲ್ಲದೆ ಒಬ್ಬನೇ ಈ ಚಂದಿರನ ನೌಕೆಯಲ್ಲಿ ಯಾನ ಮಾಡುವೆ. ಅಲ್ಲಿ ಎಲ್ಲಿಯಾದರು ಭಗವಂತ ಕಂಡರೆ, 'ಹೇ ದಯಾಮಯಾ, ಅಂಗವಿಕಲತೆಯನ್ನು ಮಾಡುವ ಮೊದಲು ಅವುಗಳನ್ನು ಪರಿಹರಿಸಿಕೊಳ್ಳಲು ಸಾಧಕ ವಸ್ತುಗಳನ್ನು ಅವರಿಗೆ ದಯಪಾಲಿಸೆಂದು' ಅವನನ್ನು ಕರಜೋಡಿಸಿ ಕೇಳಿಕೊಳ್ಳುವೆ."

ಅತಿ ವೇದನೆಯಿಂದ ನರಳುತ್ತ ಹೀಗೆ ಹೇಳುತ್ತಿರುವಾಗಲೇ ಅವನಿಗೆ ಪ್ರಜ್ಞೆ ತಪ್ಪಿದಂತಾಯಿತು. ನಾನು ಸಿಸ್ಟರನ್ನು ಎರಡು ಮೂರು ಸಲ ಜೋರಾಗಿ ಕೂಗಿದೆ. ದೂರದಿಂದ ಬರುವ ಟಾರ್ಚಿನ ಬೆಳಕು ಅಗಲವಾಗುತ್ತಿರುವುದನ್ನು ಕಂಡೆ. ಹೈಹೀಲ್ಡ್ ಸ್ಯಾಂಡಕ್‌ಸಲ್ಲಿ ನಡೆಯುವ ವಿಶಿಷ್ಟವಾದ ಟಿಕ್ ಟಿಕ್ ಶಬ್ದ, ರಾತ್ರಿಯ ನೀರವತೆಯಲ್ಲಿ ನಿಚ್ಚಳವಾಗತೊಡಗಿತು. ವಾರ್ಡಿನಲ್ಲಿ ಬೆಳಕಾಯಿತು. ವಾರ್ಡ್‌ಬಾಯ್ ಡಾಕ್ಟರನ್ನು ಕರೆಯಲು ಓಡಿದ. ಮಹೇಶನನ್ನು ಟ್ರಾಲಿಯಲ್ಲಿ ಹಾಕಿಕೊಂಡು ತುರ್ತು ವಾರ್ಡಿಗೆ ಸಾಗಿಸಲಾಯಿತು.

....

ಅಕಸ್ಮಾತ್ತಾಗಿ ತಾಜಾ ವೃತ್ತಪತ್ರಿಕೆ ಕೈಗೆ ಬಂದಿತ್ತು. ಅದರ ಮುಖಪುಟದಲ್ಲಿಯೇ ದಪ್ಪಕ್ಷರದ ಈ ಪ್ರಕಟಣೆ ಇತ್ತು :—

ಅಂಗವಿಕಲರಿಗೆ ಸಮಾನತೆಯನ್ನೂ ಮತ್ತು ಎಲ್ಲ ಬಗೆಯ ಪರಿಹಾರದ ಅವಕಾಶಗಳನ್ನೂ ಕಲ್ಪಿಸಿಕೊಡುವ ಉದ್ದೇಶದಿಂದ ೧೯೮೧ನ್ನು ಅಂತರರಾಷ್ಟ್ರೀಯ ಅಂಗವಿಕಲರ ವರ್ಷವೆಂದು ಆಚರಿಸಬೇಕೆಂದು ಸಂಯುಕ್ತ ರಾಷ್ಟ್ರದವರು ಗೊತ್ತುವಳಿಯನ್ನು ಪಾಸು ಮಾಡಿದ್ದಾರೆ.

ಇಷ್ಟೊಂದು ವರ್ಷಗಳಾದ ಮೇಲೆ ಮಹೇಶನ ಸಂಬಂಧಿಗಳು, ಅವನ ನಿಧನದ ವಾರ್ತೆಯನ್ನು ಅಲ್ಲಗಳೆದು, ಈಗ ಅವನ ಬಗ್ಗೆ ಪ್ರೀತಿ ಅಂತಃಕರಣಗಳನ್ನು ತೋರಿಸುತ್ತಿದ್ದಾರೆಂದು ನನಗನಿಸುತ್ತದೆ. ಹೀಗೆ ಎಂದಾದರು ಆಗಬಹುದೆ? ಇದೇನು ನಿಜವೆ? ಎಂದು ಆಕಾಶದ ಚಂದಿರನನ್ನು ನೋಡಿದಾಗಲೆಲ್ಲ ಮಹೇಶನ ಮುಖ ಅಲ್ಲಿ ನನಗೆ ಕಾಣುತ್ತದೆ. ನನ್ನ ಮನ ಮಿಡಿಯುತ್ತದೆ.

ಮರೆಯಾದ ಸಂಸ್ಕೃತಿ ಚಿಂತಕ ಡಿ ಆರ್

ಡಾ|| ಎಂ. ಉಷಾ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡದ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಜಗತ್ತಿನಲ್ಲಿ ಡಿ.ಆರ್. ನಾಗರಾಜ್ ಅವರು ಎಬ್ಬಿಸಿದ ತರಂಗಗಳು ತಮ್ಮ ವರ್ತುಲಗಳನ್ನು ಉಳಿಸಿಕೊಂಡಿರುವಂತೆಯೇ ಅವರು ಇಲ್ಲವಾಗಿದ್ದಾರೆ. ತಮ್ಮೊಳಗೆ ತುಂಬಿಕೊಂಡಿದ್ದ ಅಪಾರ ಜ್ಞಾನವನ್ನು ಅಕ್ಷರಗೊಳಿಸುವ ಹಾತೊರೆಯುವಿಕೆಯಲ್ಲಿರುವಾಗಲೇ ಎಲ್ಲರಿಂದ ದೂರವಾಗಿದ್ದಾರೆ. ಸುಮಾರು ಹದಿನೈದು ವರ್ಷಕ್ಕೂ ಮೇಲ್ಪಟ್ಟ ಅವಧಿಯಲ್ಲಿ ಉಗ್ರವಾದ ಎಡಪಂಥೀಯ ವಿಚಾರಧಾರೆಗಳಿಂದ ಆರಂಭಗೊಂಡಿದ್ದ ಅವರ ವೈಚಾರಿಕ ನಿಲವುಗಳು ತಮ್ಮೊಳಗೆ ತಾವೇ ಕಲಕುತ್ತ, ಕನಲುತ್ತ ಹಲವಾರು ನೆಲೆಗಳನ್ನು ದಾಟಿ ಮುನ್ನುಗುತ್ತಿರುವಾಗಲೇ ತಟಕ್ಕನೆ ನಿಲ್ಲುವಂತಾಗಿವೆ. ಕನ್ನಡ ಸಾಹಿತ್ಯಿಕ ಜಗತ್ತಿನ ಅಲ್ಪವಿರಾಮವೊಂದು ಪೂರ್ಣವಿರಾಮವಾಗಿ ವಿರಮಿಸಿದೆ. ಏಕೆಂದರೆ ನಾಗರಾಜ್ ತಮ್ಮ ಪ್ರತಿಯೊಂದು ಮಹತ್ವದ ಪುಸ್ತಕ ಬಂದಾಗಲೂ ಅದನ್ನು ದಿಟ್ಟಿಸುತ್ತ ಹೇಳುತ್ತಿದ್ದ ಮಾತು 'ಇನ್ನು ಮೇಲೆ ನನ್ನ ಗಂಭೀರವಾದ ಓದು ಹಾಗೂ ಬರಹ ಆರಂಭಗೊಳ್ಳಬೇಕು' ಎಂಬುದಾಗಿತ್ತು. ಬರೆಯುವಿಕೆಗಿಂತ ಓದುವಿಕೆಯನ್ನೇ ಜ್ಞಾನದ ಪ್ರಧಾನ ಕ್ರಿಯೆ ಎಂದು ನಂಬಿದ್ದ ಇವರು ಸಾಮಾನ್ಯವಾಗಿ 'ಕೆಲವು ಟಿಪ್ಪಣಿಗಳು' ಎಂಬರ್ಥದಲ್ಲಿಯೇ ತಮ್ಮ ಆಲೋಚನೆಗಳನ್ನು ಮಂಡಿಸುತ್ತಿದ್ದರು.

'ಶಕ್ತಿ ಶಾರದೆಯ ಮೇಳ' ಹಾಗೂ 'ಅಮೃತ ಮತ್ತು ಗರುಡ' ಕೃತಿಗಳಲ್ಲಿ ತಮ್ಮ ಆಲೋಚನೆಯ ಪ್ರತಿಮೆಗಳಾಗಿ ಮಾತ್ರವೇ ನಂಬಿಕೊಂಡಿದ್ದ ಭಾರತೀಯತೆಯ ವೈಚಾರಿಕ ನೆಲೆಗಳನ್ನು ಅನಂತರದ ದಿನಗಳಲ್ಲಿ ವಿಸ್ಮೃತಿ, ಸಂಸ್ಕೃತಿ, ಪ್ರತಿಸಂಸ್ಕೃತಿ ಇತ್ಯಾದಿ ಚಿಂತನೆಗಳಾಗಿ ಗಾಢವಾಗಿ ಅನುಭವಿಸತೊಡಗಿದ್ದರು. ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶಕರಾಗಿದ್ದ ನಾಗರಾಜ್ ಸಂಸ್ಕೃತಿಯ ಚಿಂತಕರಾಗಿ ಪೊರೆ ಕಳಚಿದ್ದರು. ತಾವು ಮಾತನಾಡಲಿರುವ ಪ್ರತಿಯೊಂದು ವೇದಿಕೆಗೂ ಹೊಸ ಹೊಸ ವಿಮರ್ಶೆಯ ಪರಿಕಲ್ಪನೆಗಳನ್ನು ಪರಿಚಯಿಸುತ್ತಲೇ ಇದ್ದ ಇವರು ಒಮ್ಮೆ ತಾವು ಎಬ್ಬಿಸಿದ ತರಂಗಗಳ ವರ್ತುಲಗಳು ಮಾಯವಾಗುವ ಮುನ್ನವೇ ಮತ್ತೊಂದು ಕಲ್ಲನ್ನು ಕನ್ನಡ ಸಾಂಸ್ಕೃತಿಕ ಕೊಳದೊಳಗೆ ಬೀಸುತ್ತ ಅದರ ಕೇಂದ್ರಬಿಂದುವಾಗಿರುತ್ತಿದ್ದರು. ಕನ್ನಡದ ಬಹುತೇಕ ಎಲ್ಲ ವಿದ್ವಾಂಸರೂ ನಾಗರಾಜ್

ಅವರನ್ನು ಉಲ್ಲೇಖಿಸುತ್ತಲೇ (ಒಪ್ಪಲಿ, ವಿರೋಧಿಸಲಿ) ತಮ್ಮ ಚಿಂತನಾ ಕ್ರಮವನ್ನು ಹರಿಯಬಿಡುತ್ತಿದ್ದರು.

ಕನ್ನಡ ವಿಮರ್ಶಾ ಕ್ಷೇತ್ರದಲ್ಲಿ ತಮ್ಮ ನಿಲವುಗಳನ್ನು ಹೊರತುಪಡಿಸಿಯೂ ತಾವು ಬಳಸುವ ವಿಮರ್ಶಾ ಮಾದರಿಯ ಬಗ್ಗೆ ಟೀಕೆಗೆ ಒಳಗಾದವರೆಂದರೆ ಕುವೆಂಪು ಮತ್ತು ನಾಗರಾಜ್. ಕಾರಣ, ಇವರಿಬ್ಬರೂ ಪುಸ್ತಕ ವಿಮರ್ಶೆಯನ್ನು ರಸ ವಿಮರ್ಶೆಯಾಗಿಸುವ, ಸಂಸ್ಕೃತಿ ವಿಮರ್ಶೆಯಾಗಿಸುವ ಮಹತ್ವದ ಕೆಲಸಕ್ಕೆ ಕೈಹಾಕಿದವರು. ಸೃಜನಶೀಲ ಸಾಹಿತ್ಯದ ಪ್ರಧಾನ ಭಾಗವಾಗಿದ್ದ ಉಪಮೆ, ಮಹೋಪಮೆ ಪ್ರತಿಮೆಗಳನ್ನು ಬಳಸುವ ವಿಮರ್ಶಾ ರೀತಿಯೊಂದನ್ನು ರೂಢಿಸಿಕೊಂಡಿದ್ದ ಕುವೆಂಪು ಆ ಕಾರಣಕ್ಕಾಗಿಯೇ ನವ್ಯರಿಂದ ಟೀಕೆಗೊಳಗಾದರು. ಹಾಗೆಯೇ ನಾಗರಾಜ್ ಕೂಡ ಅನಗತ್ಯ ಸೈದ್ಧಾಂತಿಕ ಪರಿಕಲ್ಪನೆಯ ಗೋಜಲನ್ನು, ವಿಮರ್ಶೆಯಲ್ಲಿ ತರುತ್ತಾರೆಂಬ ಟೀಕೆಗೆ ಒಳಗಾದರು. ಆದರೆ ಇಬ್ಬರಿಬ್ಬರ ಹಿನ್ನೆಲೆಯನ್ನು ನೋಡಿದರೆ ಕುವೆಂಪು ಮೇಲ್ವರ್ಗದವರ ಏಕಸ್ವಾಮ್ಯದ ನಡುವೆ ಒಬ್ಬ ಬ್ರಾಹ್ಮಣೇತರ ಕವಿಯಾಗ ತಮ್ಮನ್ನು ತಾವು ಸಾಹಿತ್ಯ ಕ್ಷೇತ್ರದಲ್ಲಿ ಸ್ಥಾಪಿಸಿಕೊಳ್ಳಬೇಕಿದ್ದರಿಂದ ಅವರು ರಸ ವಿಮರ್ಶಾ ಪದ್ಧತಿಯನ್ನು ರೂಢಿಸಿಕೊಳ್ಳಬೇಕಾಯಿತು. ಅಂತೆಯೇ ನಾಗರಾಜ್ ಕೂಡ ಮೇಲ್ವರ್ಗದವರ ಏಕಸ್ವಾಮ್ಯದ ನಡುವೆ ಒಬ್ಬ ಬ್ರಾಹ್ಮಣೇತರ ವಿಮರ್ಶಕನಾಗಿ ತಮ್ಮನ್ನು ತಾವು ವಿಮರ್ಶಾ ಜಗತ್ತಿನಲ್ಲಿ ಸ್ಥಾಪಿಸಿಕೊಳ್ಳಬೇಕಾಗಿದ್ದರಿಂದ ತಮ್ಮ ಸೈದ್ಧಾಂತಿಕ ಸಾಮರ್ಥ್ಯವನ್ನು ಸಾಬೀತುಪಡಿಸುವ ಅನಿವಾರ್ಯತೆಯನ್ನು ಕಂಡುಕೊಂಡಿದ್ದರು. ಆದ್ದರಿಂದಲೇ ಈ ನಾಡಿನ ಪ್ರಮುಖ ಸಂಸ್ಕೃತಿ ಚಿಂತಕರಾಗಲು ಇವರು ತೆಗೆದುಕೊಂಡ ತೀರ್ಮಾನ ಒಂದು ನೆಲೆಯಲ್ಲಿ ಈ ಸಂಸ್ಕೃತಿಯ ಪ್ರಧಾನ ನಿಲವಿಗೆ ಪೆಟ್ಟುಕೊಡುವುದೇ ಆಗಿತ್ತು. ಆ ಕಾರಣವಾಗಿಯೇ ಇವರು ಸಿದ್ಧಲಿಂಗಯ್ಯನವರ ಊರುಕೇರಿಯ ಅನುಭವದ ವ್ಯಂಗ್ಯವನ್ನು, ರಾಜ್‌ಕಪೂರನ ಸಿನಿಮಾದ ಗ್ರಾಮರನ್ನು, ಮಹಿಳಾ ಸಾಹಿತ್ಯದ ಜನಪ್ರಿಯತೆಯನ್ನು ತೀರ ಗಂಭೀರವಾದ ಸೈದ್ಧಾಂತಿಕ ಚರ್ಚೆಯಾಗಿ ಪ್ರತಿಪಾದಿಸಲು ಪ್ರಯತ್ನಿಸಿದರು.

ಆದರೆ ತಮ್ಮ ಈ ಪ್ರತಿಸಂಸ್ಕೃತಿ ನಿರ್ಮಾಣದ ಕೆಲಸವನ್ನು ಅವರೆಂದೂ ಜನಪ್ರಿಯ ಮಾದರಿಗಳಲ್ಲಿ ನಂಬಿದವರಲ್ಲ. ಕಣ್ಣಮುಂದೆ ಕುಣಿವ ಚಿತ್ರಗಳನ್ನು ಕೇವಲ ವರ್ಣರಂಜಿತ ನೆಲೆಗಳಲ್ಲಿ ಮಾತ್ರ ಗ್ರಹಿಸಿದವರಲ್ಲ. ಬದಲಿಗೆ ಬಣ್ಣದ ಚಿತ್ರದ ನೆರಳೂ ಕೂಡ ಕಪ್ಪೇ ಆಗಿರುತ್ತದೆ ಎಂದು ನಂಬಿದವರು. ಆದ್ದರಿಂದಲೇ ಸಮೃದ್ಧಿ ಮತ್ತು ಸರಳತೆಯ ಹೆಸರಿನಲ್ಲಿ ಕನ್ನಡ ಕಾವ್ಯ ಕಳೆದುಕೊಂಡಿರುವ ಸೂಕ್ಷ್ಮತೆ ಮತ್ತು ಸಂಕೀರ್ಣತೆಗಳನ್ನು ಕುರಿತು ಸದಾ ಧ್ಯಾನಿಸುತ್ತಿದ್ದರು. "ಅತ್ಯುತ್ತಮ ಕಾವ್ಯವಾಗಲಿ, ವಿಮರ್ಶೆಯಾಗಲಿ ವಿವರಗಳಲ್ಲಿರುವುದಿಲ್ಲ, ಸೂಕ್ಷ್ಮತೆಯಲ್ಲಿರುತ್ತದೆ. ಉಪಮೆಗಳು ಪ್ರತಿಮೆಗಳಾಗಿ ಬೆಳೆಯುವುದರ ಮೂಲಕ ಹೇಗೆ ತಮ್ಮನ್ನು ಸತ್ವಶಾಲಿಯಾಗಿಸಿಕೊಳ್ಳುತ್ತವೆಯೋ ಹಾಗೆಯೇ ಸಂಸ್ಕೃತಿಯ ಪರಿಕಲ್ಪನೆಗಳು ಸಾಹಿತ್ಯದ ವಿವರಗಳನ್ನು, ಸಾಂದ್ರಗೊಳಿಸುತ್ತವೆ. ಅಂತೆಯೇ ಒಬ್ಬ ಗಂಭೀರ ವಿಮರ್ಶಕನ ಜವಾಬ್ದಾರಿ ಕೇವಲ ಕಾವ್ಯದ ಅರ್ಥವನ್ನು ಬಿಚ್ಚಿಡುವುದಷ್ಟೇ ಅಲ್ಲ. [illegible]

ಅರ್ಥವನ್ನು ವಿಸ್ತರಿಸುವುದಾಗಿರುತ್ತದೆ ಎಂದು ಬಲವಾಗಿ ನಂಬಿರುವುದರಿಂದಲೇ ನಾನು ಕನ್ನಡ ವಿಮರ್ಶೆಯ ಭಾಷೆಯನ್ನು ಹೊಸ ಹೊಸ ನೆಲೆಗಳಿಗೆ ಒಗ್ಗಿಸಲು, ವಿಸ್ತರಿಸಲು ಬಯಸುತ್ತೇನೆ" ಎನ್ನುತ್ತಿದ್ದರು. ಆ ನಂಬಿಕೆಗೆ ಬದ್ಧರಾಗಿಯೇ ಕುವೆಂಪು, ವಿಮರ್ಶೆಯನ್ನು ಕಾವ್ಯಕ್ಕೆ ಸರಿಸಾಟಿಯಾಗಿಸಲು ಯತ್ನಿಸಿದಂತೆ ಇವರೂ ವಿಮರ್ಶೆಯನ್ನು ತತ್ವಜ್ಞಾನಕ್ಕೆ ಸರಿಸಾಟಿಯಾಗಿಸಲು ಪ್ರಯತ್ನಿಸುತ್ತಿದ್ದರು. ಫಲವಾಗಿ ಸಾಹಿತ್ಯ ವಿಮರ್ಶೆಯ ಗಡಿಗಳನ್ನೆಲ್ಲ ಹಾದು ಸಂಸ್ಕೃತಿ ಚಿಂತಕರಾದರು.

ಇದಿಷ್ಟು ಈ ನಾಡಿನ ಒಬ್ಬ ಸಂಸ್ಕೃತಿ ಚಿಂತಕ ರೂಪುಗೊಂಡ ಬಗೆಯಾದರೆ, ಒಬ್ಬ ಗುರುವಾಗಿ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದುದು, ಬೆಳೆಸುತ್ತಿದ್ದುದು ಆ ಮೂಲಕ ತಾವು ಕಲಿಯುತ್ತ, ಬೆಳೆಯುತ್ತ ಹೋದದ್ದು ನಾನು ಕಂಡ ಅವರ ಇನ್ನೊಂದು ಮುಖ. ಅವರು ತಮ್ಮೆದುರು ಕುಳಿತು ಆಲಿಸುವ, ಚರ್ಚಿಸುವ ವಿದ್ಯಾರ್ಥಿಗಳಲ್ಲಿ ತಮ್ಮನ್ನೇ ಕಾಣಲು ಯತ್ನಿಸುತ್ತಿದ್ದರು. ಏಕಕಾಲಕ್ಕೆ ತಾವೊಬ್ಬ ಉಪಯುಕ್ತ ಗುರುವಾಗುವ, ಅತ್ಯುತ್ತಮ ಶಿಷ್ಯನಾಗುವ ಎರಡೂ ನೆಲೆಗಳನ್ನು ಹುಡುಕುತ್ತಿದ್ದರು. ಪಿಎಚ್.ಡಿ ಅಧ್ಯಯನಕ್ಕೆ ಮಾರ್ಗದರ್ಶಿಯಾಗುವ ನೆಪದಲ್ಲಿ ತಾವೂ ಕಲಿಯಬಹುದಾದ ಮಹತ್ವಾಕಾಂಕ್ಷೆಯೊಂದನ್ನು ಇಟ್ಟುಕೊಂಡಿದ್ದರು. ಆದ್ದರಿಂದಲೇ ಅವರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಸಂಬಂಧ ಒಂದು ಬಗೆಯ ಶಿಕ್ಕಾಟದ, ವಾಗ್ವಾದದ ಕಿಡಿಯಾಗಿಯೇ ಇರುತ್ತಿತ್ತು. ಇಂಥ ಶಿಕ್ಕಾಟದ ಸಂದರ್ಭಗಳನ್ನು ಅವರು ತಮ್ಮೆಲ್ಲ ಮುಜುಗರದ ನಡುವೆಯೇ ಅನುಭವಿಸುತ್ತಿದ್ದರು. ಆನಂದಿಸುತ್ತಿದ್ದರು. ಬಿಗುಮಾನದಿಂದಲೇ "ನಾನೊಬ್ಬ ರ್ಥಿನ್ ಗುರುವಿನ ಹಾಗೆ. ಶಿಷ್ಯನ ಮೇಲುಗೈ ಎಂಬುದು ಗುರುವಿನ ಸುಕೃತವೇ ಸರಿ" ಎಂದು ನಗುತ್ತಿದ್ದರು.

ಹಠದಿಂದ ಎಂಬಂತೆ ಇಂಗ್ಲಿಷನ್ನು ತಮ್ಮ ಮುಂದೆ ಕೆಡವಿಕೊಂಡಿದ್ದ ನಾಗರಾಜ್, ಅದನ್ನು ಪರಮ ಪ್ರಾಮಾಣ್ಯವೆಂದು ನಂಬಿದವರಲ್ಲ. ಆದರೆ ಇಂಗ್ಲಿಷನ್ನು ಹಾದು ಪಾರಾಗುವುದರಿಂದ ಮಾತ್ರ ನಾವು ನಮ್ಮ ಕೀಳರಿಮೆಯನ್ನು ಮೆಟ್ಟಲು ಸಾಧ್ಯವೆಂದು ನಂಬಿದ್ದವರು. ಆದ್ದರಿಂದಲೇ "ಇಂಗ್ಲಿಷಿನಲ್ಲಿ ಪ್ರಾವೀಣ್ಯ ಇಲ್ಲದ್ದೇನು ಮಹಾಪರಾದವಲ್ಲ ಬಿಡಿ" ಎಂಬ ಧೈರ್ಯದ ಮಾತನ್ನು ನನ್ನಂತಹವರಿಗೆ ಕೊಡುತ್ತಲೇ ನಮಗೆ ಇಂಗ್ಲಿಷನಲ್ಲಿ ಪ್ರವೇಶವನ್ನು ದೊರಕಿಸಿಬಿಡುತ್ತಿದ್ದರು. ದೊಡ್ಡಬಳ್ಳಾಪುರದ ಸಂದಿಯೊಂದರಿಂದ ಬೆಂಗಳೂರು ಸೇರಿ ಚಿಕಾಗೋಗೆ ಕಾಲಿಟ್ಟ ತಮ್ಮ ಜೀವನದ ಒಂದೊಂದು ಹೆಜ್ಜೆ ಗುರುತನ್ನು ನೆನಪಿಸಿಕೊಳ್ಳುತ್ತಲೇ ಆತ್ಮವಿಶ್ವಾಸವನ್ನು ತುಂಬುತ್ತಿದ್ದರು.

ಪಶ್ಚಿಮದ ಮಾರಕ ಪ್ರಭಾವಗಳಿಗೆ ಒಳಗಾಗಿರುವ ಮನಸ್ಸುಗಳ ಕುತೂಹಲದ ಬಗ್ಗೆ ಅಪಾರವಾದ ವಿಶ್ವಾಸವನ್ನು ಹೊಂದಿದ್ದ

ವಾಗಿ ಆ ಕುತೂಹಲಗಳನ್ನು ತಣಿಸಬಲ್ಲ ದೇಸಿ ನೆಲೆಯ ಜ್ಞಾನದ ಕೇಂದ್ರವೊಂದನ್ನು ಹುಡುಕಲು ಹೊರಟಿದ್ದರು. ವಿಸ್ಮೃತಿಗೊಳಗಾಗಿರುವ ಭಾರತೀಯ ಪರಂಪರೆಯ ಸಾಂಸ್ಕೃತಿಕ ನೆಲೆಗಳನ್ನು ಹುಡುಕಿಕೊಳ್ಳುವ ಮೂಲಕ ಮಾತ್ರ ವಸಾಹತೀಕರಣದಿಂದ ಕಳೆದು ಹೋಗಿರುವ ಭಾರತೀಯರ ಆತ್ಮವಿಶ್ವಾಸ, ಆತ್ಮಗೌರವಗಳು ಮತ್ತೊಮ್ಮೆ ಇಂದಿನ ಜಾಗತೀಕರಣದಿಂದ ಸಂಪೂರ್ಣವಾಗಿ ನಿರ್ನಾಮವಾಗುವ ಅಪಾಯದಿಂದ ತಪ್ಪಿಸಲು ಸಾಧ್ಯ ಎಂದು ನಂಬಿದ್ದರು. ಆ ನಂಬಿಕೆಯನ್ನು ಪಶ್ಚಿಮದ ವಿಶ್ವವಿದ್ಯಾಲಯಗಳಲ್ಲಿ ಎತ್ತಿ ಹಿಡಿಯುವ ಆಶಯದೊಂದಿಗೆ ದೂರದೂರದ ದಾರಿಯನ್ನು ಸವೆಸುತ್ತಲೇ ನಮ್ಮಿಂದ ದೂರವಾಗಿ ಹೋದರು.



ಸಾಕ್ಷರತೆ ಅನುಭವದ ಭಂಡಾರಕ್ಕೆ ಬೀಗದಕೈ ಸಾಮಾಜಿಕ ಪ್ರಸರುತ್ಥಾನಕ್ಕೆ ದಾರಿ

—ರೀಡ್

ಅನಕ್ಷರಸ್ಥರು ಯಾವ ರಾಜಕೀಯ ಪಕ್ಷಕ್ಕೂ ಸೇರಿದವರಲ್ಲ; ಅವರಿಗೆ ಮೊದಲು ಅಕ್ಷರ ಕಲಿಸಬೇಕು

—ಲೆನಿನ್

ನನ್ನ ಮಗನೇಕೆ ಮಾತನಾಡಲಿಲ್ಲ ?

ಕೆ. ಸುಕನ್ಯಭಟ್
"ಶ್ರೀ ಶಾಕಾಂಬರಿ"
ಶಂಕರಮಠ ರಸ್ತೆ,
ಧಾರವಾಡ–೪

ಮಾತು ಕಲಿತು ಆಡುವುದು ತಡವಾದರೂ ಕೆಲಸ ನೋಡಿ ಮಾಡುವುದು ಚುರುಕಾಗಿಯೇ ಇತ್ತು. ತಂದೆ ತಾಯಿಯ ಒಲುಮೆ ಪಡೆದ ಜಾನ್ ಮಾತನ್ನೂ ಕಲಿತು ಜಾಣನಾದ.

ನನ್ನ ಮಗ ಜಾನ್, ದಿನ ತುಂಬುವ ಮೊದಲೇ ಹುಟ್ಟಿದ್ದರೂ, ಇತರ ಮಕ್ಕಳಂತೆ ಆರೋಗ್ಯವಂತನಾಗಿದ್ದ. ತಿಂಗಳುಗಳು ಮತ್ತು ವರುಷಗಳು ಉರುಳಿದರೂ ಅವನು ಮಾತನಾಡದಿದ್ದಾಗ, ನನಗೆ ನನ್ನ ಪತ್ನಿಗೆ ಅವನು ನಾರ್ಮಲ್ (ಸಾಮಾನ್ಯ) ಇಲ್ಲ ವೆಂಬುದು ತಿಳಿಯಿತು.

ಜಾನನಿಗೇನಾದರೂ ಬೇಕಾಗಿದ್ದರೆ ಅದರತ್ತ ಕೈ ತೋರಿಸುತ್ತಿದ್ದ. ಹಸಿವಾದಾಗ ರೆಫ್ರಿಜರೇಟರನ್ನ ತಟ್ಟಿ ತೋರಿಸುತ್ತಿದ್ದ. ಮತ್ತೇನಾದರೂ ಕುಡಿಯಲು ಅಥವಾ ತಿನ್ನಲು ಬೇಕಾದರೂ ಅದರತ್ತ ಕೈ ತೋರಿಸುತ್ತಿದ್ದ.

ನಾವು ಆಗ ನ್ಯೂಯಾರ್ಕ್ ನಗರದ ಇಥೇಕಾದಲ್ಲಿಯ ಹೌಸಿಂಗ್ ಕಾಂಪ್ಲೆಕ್ಸ್‌ನಲ್ಲಿ ವಾಸಿಸುತ್ತಿದ್ದೆವು. ಕಾರ್ನೆಲ್ ಯೂನಿವರ್ಸಿಟಿಯಲ್ಲಿ ಅರ್ಥಶಾಸ್ತ್ರವನ್ನು ಬೋಧಿಸಲು ನಾನು ನೇಮಕವಾಗಿದ್ದೆ. ಜಾನ್‌ಗಿಂತಲೂ ಚಿಕ್ಕ ಮಕ್ಕಳೂ ಮಾತನಾಡುತ್ತಿದ್ದಾಗ, ನಮ್ಮ ಮಗ ಮಾತ್ರ ಮಾತನಾಡದೆ ಇದ್ದಾಗ, ನಮಗೆ ಬಹಳ ಮುಜುಗರವಾಗುತ್ತಿತ್ತು. ಈ ವಿಷಯ ನಮ್ಮ ನೆರೆ–ಹೊರೆಯವರಲ್ಲಿ ಹಬ್ಬಿಯೂ ಬಿಟ್ಟಿತ್ತು.

ಒಂದು ದಿನ ನನಗಚ್ಚರಿಯಾಗುವಂತೆ, ನೆರೆಮನೆಯಾಕೆ, ಅದೂ ಪರಿಚಯ ಕೂಡಾ ಇಲ್ಲದವಳು, ಬಂದಿದ್ದಳು. ಮಂದ ಬುದ್ಧಿಯ ಬಾಲಕನ ತಾಯಿಯಾಗಿದ್ದ ಅವಳು—"ನನ್ನ ಮಗನ ಹಾಗಿರುವ ಮಗ ನಿಮಗೂ ಇರುವ ವಿಷಯ ತಿಳಿದಿದ್ದರಿಂದ ನಾನು, ನನ್ನ ಮಗನ ಪ್ರೀತಿಯ ಆಟದಂತಹುದನ್ನ ನಿಮ್ಮ ಮಗನಿಗಾಗಿ ತಂದಿದ್ದೇನೆ. ಅದು ಅವನಿಗೂ ಖುಷಿಯಾದೀತು." ಎಂದಿದ್ದಳು. ಆಗ ಅವಳಿಗೆ ಧನ್ಯವಾದಗಳನ್ನ ಹೇಳುವುದರ ವಿನಾ ಮತ್ತೇನನ್ನೂ ನಮಗೆ ಮಾಡಲಾಗಲಿಲ್ಲ.

ಆದರೆ ಜಾನ್ ಬುದ್ಧಿವಂತಿಕೆಯ ಲಕ್ಷಣಗಳನ್ನ ತೋರಿಸತೊಡಗಿದ್ದ. ಅತಿ ಚಿಕ್ಕ

ಮೂಲ: ೧೯೯೮ರ ಫೆಬ್ರುವರಿ ತಿಂಗಳ "ರೀಡರ್ಸ್ ಡೈಜೆಸ್ಟ್" ಸಂಚಿಕೆಯಲ್ಲಿನ 'ಥಾಮಸ್ ಸೊವೆಲ್' ಅವರ 'ವೈ ವೋಂಟ್ ಮೈ ಸನ್ ಟಾಕ್' ಲೇಖನ.

ಮಗುವಿದ್ದಾಗಲೇ ಅವನು ನಾನು ಹೇಳಿದ್ದೆಲ್ಲವನ್ನು ತಿಳಿದುಬಿಡುತ್ತಿದ್ದ! ರೂಮಿನೊಳಗೆ ಹೋಗಿ ಕೆಂಪು ತಲೆದಿಂಬನ್ನ ತಾರೆಂದು ಹೇಳಿದ ಕೂಡಲೇ ಅವನು ಹೋಗಿ ತರುತ್ತಿದ್ದ. ನಮ್ಮ ಡ್ಯೂಪ್ಲೆಕ್ಸ್ ಅಪಾರ್ಟ್‌ಮೆಂಟಿನಲ್ಲಿ ಮಕ್ಕಳಿಗಾಗಿ ತಯಾರಿಸಿದ್ದ ಗೇಟುಗಳ ಕಷ್ಟದಾಯಕವಾದ ಬೀಗಗಳನ್ನೆ ತೆರೆಯುವಂತಹ ಅಪಾಯಕಾರಿ ಸಾಮರ್ಥ್ಯವನ್ನೂ ಪ್ರದರ್ಶಿಸತೊಡಗಿದ್ದ. ಒಂದು ದಿನ ಅವನು ವಾಕರ್‌ನಲ್ಲಿ ಕುಳಿತೇ ನಮ್ಮ ಮಕ್ಕಳಿಂದ ತೆಗೆಯಲಸಾಧ್ಯವಾದ ಬೀಗವನ್ನೆ ನೋಡಿದ್ದ. ಸ್ವಲ್ಪ ಹೊತ್ತಿನಲ್ಲಿಯೇ ಅದನ್ನ ಒಂದೇ ಸಲ ಪ್ರಯತ್ನಿಸಿ ತೆಗೆದೇ ಬಿಟ್ಟಿದ್ದ!

ಅಕಸ್ಮತ್ತಾಗಿ ಅವನು ಪ್ರದರ್ಶಿಸಿದ, ಅವನ ಮಾನಸಿಕ ಸಾಮರ್ಥ್ಯಕ್ಕೆ ಒಂದು ಉದಾಹರಣೆ ಇದು:—ಒಂದು ದಿನ ನಾನು ಫೋನ್ ಮಾಡಿ ಲಿವಿಂಗ್ ರೂಮಿನೊಳಗೆ ಬರುವಷ್ಟರಲ್ಲೇ ಚೆಸ್ ಬೋರ್ಡಿನ ಮೇಲಿದ್ದ ಕಾಯಿಗಳನ್ನ ಜಾನ್ ನೆಲದ ಮೇಲೆಲ್ಲಾ ಬೀಳಿಸಿ ಬಿಟ್ಟಿದ್ದ. ಸಿಟ್ಟುಗೊಂಡು ನಾನವನಿಗೆ ಸರಿ ಇಡು ಎಂದಿದ್ದೆ. ಜಾನ್ ಒಡನೆಯೇ ಆ ೩೨ ಕಾಯಿಗಳನ್ನ ಮೊದಲಿದ್ದಂತೆಯೇ ಬೋರ್ಡಿನ ಮೇಲಿಟ್ಟಿದ್ದ! ಆಗವನಿಗೆ ಕೇವಲ ಮೂರು ವರ್ಷ ಪ್ರಾಯ!

ಈ ಎಲ್ಲ ಘಟನೆಗಳೂ ನಮ್ಮ ಆಸೆಯ ದೀಪ ಆರದಂತೆ ನೋಡಿಕೊಂಡಿದ್ದವು. "ಎಷ್ಟೋ ಸಲ ಈ ಘಟನೆಗಳೆಂಬ ಮೈಲುಗಲ್ಲುಗಳೇ ಸಾಕು ನಮ್ಮ ಆಸೆಯನ್ನ ಜೀವಂತವಾಗಿಡಲು."

ಜಾನ್ ಅಪರೂಪಕ್ಕೆ ಕೆಲವು ಪದಗಳನ್ನ ಉಚ್ಚರಿಸುತ್ತಿದ್ದ. ಪಶ್ಚಿಮ ರಾಕಿ ಪರ್ವತ ಪ್ರದೇಶಗಳಲ್ಲಿನ ಹವಾಮಾನದ ಬಗ್ಗೆ ವರದಿಗಾರನು ಹೇಳಿದೊಡನೆಯೇ ಜಾನ್ ಕೂಡಾ ರಾಕಿ ಎಂದು ಕಿರುಚುತ್ತಿದ್ದ. ನದಿ, ಕೊಳ್ಳ, ಕೆರೆಗಳನ್ನ ಕಂಡಾಗ ಅಂತೂ—ವಾ—ಹೀ' ಎಂದು ಕಿರುಚುತ್ತಿದ್ದ. ಆದರೆ ಅವನೆಂದೂ ನಲ್ಲಿಯ ನೀರಿಗೆ ಮತ್ತು ಗ್ಲಾಸಿನೊಳಗಿದ್ದ ನೀರಿಗೆ "ರಾಕಿ" ಎನ್ನುತ್ತಿರಲಿಲ್ಲ. ಅವನಿಗೆ ಅವುಗಳ ಸಂಬಂಧವೇ ತಿಳಿದಿರಲಿಕ್ಕಿಲ್ಲ. ನಾವು ಮಾತನಾಡಲು ಹೇಳಿಕೊಟ್ಟಾಗ ಆಸಕ್ತಿಯನ್ನೇ ತೋರಿಸುತ್ತಿರಲಿಲ್ಲ.

ಮೊದ—ಮೊದಲು, ಡಾಕ್ಟರ್, "ಯೋಚಿಸಬೇಡಿ" ಎಂದು ಹೇಳಿದಾಗ ಸುಮ್ಮನಿದ್ದರೂ ತಿಂಗಳುಗಳು ಮತ್ತು ವರುಷಗಳು ಕಳೆದಾಗ, ಜಾನ್‌ನಿಗೆ ಎಲ್ಲ ರೀತಿಯ ಪರೀಕ್ಷೆಗಳನ್ನ ಮಾಡಿಸಿದೆವು. ಯಾರಿಗೂ ಅವನಲ್ಲಿಯ ದೋಷ ತಿಳಿಯಲಿಲ್ಲ. ಜೊತೆಗೆ ಕಾರ್ಯರೂಪಕ್ಕೆ ತಂದು ಅವನನ್ನು ಸುಧಾರಿಸುವಂತಹ ಮಾಹಿತಿಯನ್ನೂ ಯಾರೂ ಕೊಡಲಿಲ್ಲ.

ಒಂದು ಸರ್ತಿ ನಾನವನನ್ನು, ಆಫೀಸಿನ ಹತ್ತಿರ ಮೇಲ್ ತರುವುದಕ್ಕಾಗಿ ಕರೆದುಕೊಂಡು ಹೋಗಿದ್ದೆ. ನೀರಿನ ಕಾರಂಜಿಯನ್ನ ದಾಟುತ್ತಿದ್ದಾಗ ಅದರತ್ತ ಕೈ ತೋರಿಸಿ ತಾನು ಕುಡಿಯುತ್ತೇನೆ ಎಂಬಂತೆ ಸನ್ನೆ ಮಾಡಿದ್ದ.

ಇದೇ ಸರಿಯಾದ ಸಂದರ್ಭವೆಂದು ಯೋಚಿಸಿದ ನಾನು, ಅವನಿಗೆ ಕೆರೆ, ಕೊಳ್ಳದಲ್ಲಿ ಕಾಣುವುದೇ ಈ ಕಾರಂಜಿಯಲ್ಲಿರುವ ನೀರೆಂದು ತಿಳಿಸಲಿಕ್ಕಾಗಿ. 'ವಾಹೀ...."

ಎಂದು ಹೇಳಿಕೊಟ್ಟೆ. ಪುನಃ ಹೇಳುವಂತೆ ತಿಳಿಸಿದ್ದೆ.

ಜಾನ್ ಕಾರಂಜಿಯೆಡೆ ಮತ್ತೊಮ್ಮೆ ಕೈ ತೋರಿಸಿದ್ದ. "ವಾಹೀ...." ಎಂದಿದ್ದೆ ನಾನೂ ಮತ್ತೊಮ್ಮೆ. ಅವನೂ ನನ್ನನ್ನು ಒತ್ತಾಯಿಸುವಂತೆ ಕಾರಂಜಿಯತ್ತ ಕೈ ತೋರಿಸಿದ್ದ. ನಾನು ಪುನಃ ವಾಹೀ.... ಎಂದಾಗ ಮಾತ್ರ ತಡೆಯದೆ (ತಡಮಾಡಿದ್ದರಿಂದ) ಅಳತೊಡಗಿದ್ದ. ಕೂಡಲೇ ಅವನನ್ನೆತ್ತಿ ನೀರು ಕುಡಿಸಿದ್ದೆ. ನನ್ನ ಪ್ರಯತ್ನ ವಿಫಲವಾದದ್ದಕ್ಕಾಗಿ. ಅನಂತರ ನಾನು ಅಳತೊಡಗಿದ್ದೆ.

ಅನಿರೀಕ್ಷಿತವಾದ ಕಡೆಯಿಂದ—ಅರ್ಲ್ ಹ್ಯಾಮಿಲ್‌ಟನ್ ಎಂಬ ಅರ್ಥಶಾಸ್ತ್ರದ ಪ್ರೊಫೆಸರ್‌ನ, ರೂಪದಲ್ಲಿ ಸಹಾಯ ನನಗೆ ದೊರಕಿತ್ತು. ಅವರು ಸಿಕ್ಕಿದಾಗ ಹೇಗಿದ್ದೀರಿ? ಎಂದು ಕೇಳಿದ್ದರು. "ಮಾತನಾಡದ ನನ್ನ ಮಗನ ಹೊರತು ಮತ್ತೆಲ್ಲಾ ಚೆನ್ನಾಗಿದೆ" ಎಂದಿದ್ದೆ.

"ಅವನು ಚುರುಕಾಗಿದ್ದಾನೆಯೆ?"—ಎಂದು ಪ್ರೊ|| ಹ್ಯಾಮಿಲ್ಟನ್ ಕೇಳಿದ್ದರು. "ಅವನು ಬುದ್ಧಿವಂತನಂತೆ ಕಾಣುತ್ತಾನೆಯೆ?"

"ಹೌದು" ಅವನು ಬುದ್ಧಿವಂತನಿದ್ದಾನೆಂದೇ ನಮಗೆ ಅವನ ಮಾತನಾಡದಿರುವಿಕೆ ಅಚ್ಚರಿ ತಂದಿದೆ. ನಾನು ಅವನಿಗೆ ಮಾತನಾಡಲು ಹೇಳಿಕೊಟ್ಟಷ್ಟು, ಅದು ಪ್ರಯೋಜನಕ್ಕೆ ಬರುತ್ತಿಲ್ಲ" ಎಂದಿದ್ದೆ.

"ಮಿಸ್ಟರ್ ಸೋವೆಲ್" ಅವರು, ಸಮಾಧಾನ ಪಡಿಸುವವರಂತೆ—"ಅವನಿಗೆ ಮಾತನಾಡಲು ಕಲಿಸಬೇಡಿ. ಅದೂ ಈಗ ಬೇಡವೇ. ಬೇಡ ಅವನಿಗೆ ನಿಮ್ಮೆಲ್ಲ ಪ್ರೀತಿ ಮತ್ತು ಗಮನ ನೀಡಿರಿ. ಅವನಿಗೆ ಯಾವಾಗ ಭರವಸೆ ಮತ್ತು ಭದ್ರತೆ ಇದೆಯೆಂದು ತಿಳಿಯುವುದು....ಆಗವನು ಮಾತನಾಡುತ್ತಾನೆ"—ಎಂದೂ ತಿಳಿಸಿದ್ದರು.

ಅವರ್‍ಯಾಕೆ ಹಾಗೆ ಹೇಳಿದರೊ ನನಗೆ ತಿಳಿಯಲಿಲ್ಲ. ಆದರೂ ನಾನವರ ಮಾತಿನಂತೆ' ನಡೆದುಕೊಂಡಿದ್ದೆ. ಜಾನನಿಗೆ ಒತ್ತಾಯದಿಂದ ಮಾತು ಕಲಿಸದಿದ್ದಾಗ, ಅವನು ಸಂತೋಷ ಚಿತ್ತನಾಗಿ, ನಿಶ್ಚಿಂತೆಯಿಂದ ಇರುವುದೂ ತಿಳಿದಿತ್ತು. ನನಗೆ.

ಅವನನ್ನು ಪರೀಕ್ಷೆಗೊಡ್ಡಲು ಒಳ್ಳೆಯ ಸಮಯವೆಂದುಕೊಂಡು ಒಂದು ದಿನ, ಆಟವಾಡಿಸುವವನಂತೆ ಟೇಪ್‌ರೆಕಾರ್ಡನ್ನ ಆನ್ ಮಾಡಿ"ವಾಟರ್" ಎಂದು ಹೇಳಲು ಹೇಳಿದ್ದೆ. ಕೂಡಲೇ ಅವನು "ವಾ....ಹೀ...." ಎಂದು ಕಿರುಚಿದ್ದ! ಪುನಃ ರೆಕಾರ್ಡ್‌ನ್ನು ಹಿಂದಕ್ಕೆ ಮಾಡಿ ಅವನ ಮಾತನ್ನ ಪುನಃ ಅವನೇ ಕೇಳುವಂತೆ ಮಾಡಿದ್ದೆ. ಅವನ ಸ್ವರವನ್ನ ಕೇಳಿ, ಅವನು ಸಂಭ್ರಮ—ಸಂತಸಪಟ್ಟಿದ್ದ. ವಾರಗಳು ಕಳೆದಂತೆಲ್ಲಾ ಅವನು ನಾನು ಹೇಳಿಕೊಟ್ಟ ಪದಗಳನ್ನೆಲ್ಲಾ ಕಲಿತು ತನ್ನ ಶಬ್ದಕೋಶವನ್ನ ಬೆಳೆಸಿಕೊಂಡಿದ್ದ.

ಅವನು ಮೊದಲು ಪಿಸುಮಾತುಗಳನ್ನಾಡಿದರೂ, ಸ್ಪೀಚ್ ಥೆರಪಿಸ್ಟ್ ಅವರಿಗೆ ಸರಿಯಾಗಿ ಮಾತನಾಡಲು ಕಲಿಸಿದ್ದ. ನಾಚಿಕೆ ಪಟ್ಟರೂ ಜಾನ್ ತನ್ನ ನಾಲ್ಕನೆಯ ಹುಟ್ಟುಹಬ್ಬದ ವೇಳೆಗೆ ಕೊನೆಗೂ ಮಾತನಾಡಿದ್ದ.

ಲಾಸ್ ಏಂಜಲ್ಸಿನಲ್ಲಿದ್ದ ಬೇಸಿಗೆಯ ಶಾಲೆಯೊಂದರಲ್ಲಿ ಪಾಠ ಮಾಡಲು ನಾನು ಹೋಗುತ್ತಿದ್ದಾಗ ಅವನ ಬುದ್ಧಿವಂತಿಕೆ ಹೆಚ್ಚಾಗಿತ್ತು. ಇಡೀ ದಿನ ನನ್ನೊಡನಿದ್ದದ್ದ

ರಿಂದ ಎಲ್ಲವನ್ನು ನಾವು ತೋರಿಸಿ ತಿಳಿಸಲು ಸಾಧ್ಯವಾಗಿತ್ತು. ಮೂರು ವಾರಗಳು ಕಳೆದಾಗ ಜಾನ್ ದಾರಿಯಲ್ಲಿ ಸಿಗುತ್ತಿದ್ದ ಫಲಕಗಳನ್ನು ಓದಲೂ ಕಲಿತಿದ್ದ. "ನೋ ಲೆಫ್ಟ್ ಟರ್ನ್" ಎಂದು ಸದಾ ಹೇಳುತ್ತಿದ್ದ. "ಪ್ರಶ್ನೆ ಇಲ್ಲದೆಯೇ ಜಾನ್ ತನ್ನ ಜೀವನದ ತಿರುವನ್ನು ದಾಟಿದ್ದ.

ಜಾನನ ಸ್ಕೂಲ್‌ನಲ್ಲಿ ಉಪ್ಪಕ್ಕೂ ನಾನು ಅವನಿಗೆ ಇತರರು ಹೆಸರಿಡದಂತೆ, ಹೆದರಿ ಪಾರವಾಳದಂತಾಗದಂತೆ ನೋಡಿಕೊಳ್ಳಲು ಶ್ರಮಿಸಬೇಕಾಯಿತು. ಒಂದು ಸಂದರ್ಭದಲ್ಲಂತೂ ಅವನ ಟೀಚರ್‌ಗಳು ನಮ್ಮಿಬ್ಬರ ಹತ್ತಿರ ಜಾನ್ ಸಹಕರಿಸುತ್ತಿಲ್ಲ, ಅದೂ ದೈಹಿಕವಾಗಿ ಎಂದಿದ್ದರು.

ಅವರು ಅದನ್ನು ಸಮರ್ಥಿಸಲಿಕ್ಕಾಗಿ ಕೊಟ್ಟ ವರದಿಯಿಂದ ನನಗೆ ನಿಜ ತಿಳಿಯಿತು. ಜಾನ್‌ನ ದೇಹದಲ್ಲಿನ ಭಾಗಗಳು ಸರಿಯಾಗಿ ಕೆಲಸ ಮಾಡುತ್ತವೆ ಎಂದು ತಿಳಿಸುವುದಕ್ಕಾಗಿ ನಾನವರಿಗೆ, ನನ್ನ ಮಗ ನೀರಿನ ಆಚೆ ದಡಕ್ಕೆ ಎರಡು ಕೈಗಳಿಂದಲೂ ಕಲ್ಲೆಸೆಯಬಲ್ಲ ಎಂದು ಹೇಳಿದರು. ಅವರಿಗೆ ಅದು ಬೇಕಿರಲಿಲ್ಲ ಮತ್ತು ತಿಳಿದುಕೊಳ್ಳುವ ಮನಸ್ಸು ಇರಲಿಲ್ಲ!

ಖುಷಿ ಇದ್ದರೆ ಮಾತ್ರ ಕ್ಲಾಸಿನೊಳಗೆ ಹೋಗಬಹುದು, ಇಲ್ಲವಾದರೆ ಹೋಗದೆ ಇರಬಹುದಾದ ಸ್ಪೆಷಲ್ ಶಾಲೆಗೆ ಅವನನ್ನು ನಂತರ ಸೇರಿಸಿದ್ದೆವು. ಲೆಕ್ಕಾಚಾರದಲ್ಲಿ ಅವನು ಹುಶಾರಿದ್ದರೂ ಗಣಿತದ ಕ್ಲಾಸಿಗವನು ಹೋಗುತ್ತಿರಲಿಲ್ಲ. ನಾನು ತಂದು ಕೊಟ್ಟ ಗಣಿತದ ಪುಸ್ತಕಗಳಿಂದ ಅವನು ಮನೆಯಲ್ಲೇ ಕಲಿತಿದ್ದ. ಬೆಳಗಿನವರೆಗೂ ದೀಪ ಉರಿಸುತ್ತಾ ಓದುತ್ತಿದ್ದ.

ಅವನು ಹತ್ತು ವರ್ಷದವನಾದಾಗ, ಹೋಟೆಲಿನ ಬಿಲ್ಲಿನಲ್ಲಿನ ಹಣವನ್ನು ಮನಸ್ಸಿನಲ್ಲೇ ಕೂಡಿಸಿಬಿಡುತ್ತಿದ್ದ. ಕ್ಯಾಷ್ ರಿಜಿಸ್ಟರ್‌ಗಿಂತಲೂ ವೇಗವಾಗಿ! ಎಷ್ಟೋ ಸಲ ಪಂಥದಲ್ಲೂ ಗೆದ್ದು ಬಿಡುತ್ತಿದ್ದ.

ಹನ್ನೆರಡು ವರ್ಷದವನಾದಾಗ ಹತ್ತಿರದ ಎಲ್ಲಾ ಚೆಸ್ ಟೂರ್ನಮೆಂಟಿನಲ್ಲಿ ಆಡುತ್ತಿದ್ದ. ಮೊದಲು ಸುಲಭವಾಗಿ ನಾನವನನ್ನು ಸೋಲಿಸಿದರೂ ಅನಂತರ ನನಗೆ ಸಾಧ್ಯವಾಗಲಿಲ್ಲ. ಕಂಪ್ಯೂಟರ್ ಸೈನ್ಸ್ ಕಲಿಯಲು ಕಾಲೇಜಿಗೆ ಹೋದ. ಅದೇ ಕ್ಷೇತ್ರವನ್ನು ತನ್ನದಾಗಿಸಿಕೊಂಡ.

ಯಾರೊಬ್ಬರಿಗೂ ಮಕ್ಕಳು ತಡವಾಗಿ ಯಾಕೆ ಮಾತಾಡುವರೆಂದು ತಿಳಿಯುವುದಿಲ್ಲ. ನಮಗೆ ತಿಳಿದದ್ದೇನೆಂದರೆ—ನಮ್ಮ ಮಗನಂತೆ ಸೂಕ್ಷ್ಮಬುದ್ಧಿಯ ಮಕ್ಕಳೂ ಇರುತ್ತಾರೆ. ಸಮಾಜದಲ್ಲಿ ನಿಧಾನವಾಗಿ ಮಾತನಾಡುವ ಇಂಥ ಮಕ್ಕಳಿಗೆ ಅತಿಯಾದ ನೆನಪು ಶಕ್ತಿ, ಸಂಗೀತ, ಗಣಿತದಲ್ಲಿ ಅಭಿರುಚಿ ಬಂದಿರುತ್ತದೆ. ಇಂಥವರು ಹೆಚ್ಚಿನಪಾಲು ಹುಡುಗರೇ ಇದ್ದು, ಹುಟ್ಟುವ ಮೊದಲೇ ಅವರಿಗೆ ಅಂಥ ಬುದ್ಧಿ ಮತ್ತೆ ಬಂದಿರುತ್ತದೆ.

ಜಾನ್‌ನ ಬಗ್ಗೆ ಪೇಪರಿನಲ್ಲಿ ಕೆಲವು ವರ್ಷಗಳ ಹಿಂದೆ ಬರೆದಿದ್ದೆ. ಅವನ್ನೋದಿದ ಅನೇಕ ಮಾತಾಪಿತೃಗಳಿಂದ ಪತ್ರಗಳು ಬಂದು ಬಿದ್ದಿದ್ದವು. ಎಲ್ಲರೂ ತಮ್ಮ ಮಕ್ಕಳ ಬಗ್ಗೆ ಹೇಳಿಕೊಳ್ಳುತ್ತ ಚಿಂತಿತರಾಗಿ ಬರೆದಿದ್ದರು. ತಮ್ಮ ಮಕ್ಕಳ ಮುಂದಿನ ಜೀವನದ ಬಗ್ಗೆ ಭೀತರಾಗಿದ್ದರು. ಕೆಲವರ ಚಿಂತೆ ಏನಾಗಿತ್ತೆಂದರೆ—ಮಂದ ಬುದ್ಧಿಯ ಮಗುವಾಗಿರದಿದ್ದರೂ ....ಸಮಾಜ ಕೂಡಲೇ ಅವನು "ರಿಟಾರ್ಡ್", "ಆಟಿಸ್ಟಿಕ್", (ಅ) ಪರ್‌ವೇಸಿವ್

ಡೆವಲಪ್‌ಮೆಂಟಲ್ ಡಿಸಾರ್ಡರ್ ಎಂಬೆಲ್ಲಾ ಹಣೆಪಟ್ಟಿ ಕಟ್ಟುವುದಲ್ಲಾ" ಎಂಬುದೇ ಆಗಿದ್ದಿತು.

ಈ ಎಲ್ಲಾ ಹೆಸರುಗಳಿಗೆ ಸರಿಹೊಂದುವ ಮಕ್ಕಳೂ ಇಲ್ಲದಿಲ್ಲ. ಇಚ್ಛಾನುಸಾರ, ಸರಿಯಿದ್ದ ಮಕ್ಕಳಿಗೂ ಅನಾಗರಿಕರಂತೆ ಹೆಸರಿಟ್ಟು ಮಾನಸಿಕ ಹಿಂಸೆ ಕೊಡುವಂತಹವರಿಂದ ತಮ್ಮ ಮಕ್ಕಳನ್ನು ತಂದೆ–ತಾಯಿಯರು ಕಾಪಾಡಬೇಕಾಗುತ್ತದೆ. ಇಲ್ಲದಿದ್ದರೆ ಬಾಲ್ಯದಲ್ಲಿ ಇಂಥ ಹಣೆಪಟ್ಟಿ ಕಟ್ಟಿಸಿಕೊಂಡವನು ಜೀವನ ಪೂರ್ತಿ ಮಾನಸಿಕ ಅಸ್ವಸ್ಥನಾಗುವ ಸಾಧ್ಯತೆಯೂ ಇದೆ.

ಒಂದು ವೇಳೆ ಮಕ್ಕಳು ತಡವಾಗಿ ಮಾತನಾಡಿದರೆ, ತಂದೆ–ತಾಯಿಯರು ನಾವೊಬ್ಬರೇ ಅಂಥ ಮಕ್ಕಳನ್ನ ಪಡೆದವರಲ್ಲಾ ಎಂದು ತಿಳಿದುಕೊಳ್ಳಬೇಕು. ಕೆಲವೊಮ್ಮೆ ತಡವಾದ ಮಾತು, ಬೇರೆ ಕೆಲವು ಕಾರಣಗಳಿಂದಲೂ ಆಗಿರಬಹುದು ಅಥವಾ ಹಾಗೇ ಮಾತು ಬಾರದವನಾಗಿ ಉಳಿಯಲೂ ಬಹುದು. ಎಷ್ಟೋ ತಂದೆ–ತಾಯಿಯರ ಬಾಳಿನಲ್ಲಿ, ಮಕ್ಕಳು ತಡವಾಗಿ ಮಾತನಾಡಿದರೂ ಬೆಳಕನ್ನು ಅಂದರೆ ಮುತ್ತಿನಂತ ಮಾತನ್ನು ಕಲಿತಿದ್ದಾರೆ. ಸುರಂಗದ ಆಚೆ ತುದಿಯಲ್ಲಿ, ಕತ್ತಲನ್ನು ಬೇಧಿಸಿ, ಕಾಣಿಸುವ ತೀಕ್ಷ್ಣವಾದ ಬೆಳಕಿನಂತೆ ಅವರ ಬಾಳಿನಲ್ಲೂ ಬೆಳಕು ಗೋಚರಿಸುವುದಂತೂ ನಿಜ.



ಪ್ರಜಾಪ್ರಭುತ್ವದಲ್ಲಿ ಬಲಿಷ್ಠನಿಗಿರುವ ಅವಕಾಶಗಳು ದುರ್ಬಲನಿಗೂ ಇರಬೇಕು. ಅದೇ ನಿಜವಾದ ಪ್ರಜಾಪ್ರಭುತ್ವ.

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು, ಎಲ್ಲರನ್ನೂ ಪ್ರೀತಿಸುವುದು, ಎಲ್ಲರಿಗೂ ಒಳ್ಳೆಯದನ್ನು ಬಯಸುವುದು ಇದೇ ಅಹಿಂಸಾ ಧರ್ಮ.

—ಗಾಂಧೀಜಿ

ವಿಚಿತ್ರ ಕಾಲಗಳು

ಅಮೃತಕಲಾ ಎ. ಎಲ್.
ಎಸ್ ಟಿ ಎ
ಎಫ್ ಎಸ್ ಅಂಡ್ ಎ ಕ್ಯೂ ಸಿ ಎಲ್
ಸಿ ಎಫ್ ಟಿ ಆರ್ ಐ, ಮೈಸೂರು

ಕಾಲ ತುಂಬಾ ಆಶ್ಚರ್ಯಕರ! ನೀವು ಅತಿ ಆಳಕ್ಕೆ ಇಳಿಯುತ್ತಾ ಹೋದಂತೆ ವಿಚಿತ್ರವಾಗಿ ತೋರುತ್ತದೆ.

'ಹಕ್ಕಿ ಹಾರುತಿದೆ ನೋಡಿದಿರಾ? ಹಗಲಿರುಳೆಂಬ ರೆಕ್ಕೆಗಳೊಡನೆ ಕಾಲದ ಹಕ್ಕಿಯು ಹಾರುತಿದೆ' ಎನ್ನುತ್ತದೆ ಕವಿಸಮಯ. ಅಂದರೆ ಸಮಯವೂ ಕೂಡ ಹಕ್ಕಿಯಂತೆ ಎಂದಾಯಿತು. ಒಂದು ಸೆಕೆಂಡ್‌ನ ನಂತರ ಇನ್ನೊಂದು ಸೆಕೆಂಡ್, ಒಂದು ನಿಮಿಷದ ಅನಂತರ ಇನ್ನೊಂದು ನಿಮಿಷ, ಗಂಟೆಯ ಅನಂತರ ಗಂಟೆ, ದಿನದ ಅನಂತರ ದಿನ, ವರ್ಷದಿಂದ ವರ್ಷ, ಭೂತದಿಂದ ಭವಿಷ್ಯಕ್ಕೆ ಜಿಗಿತ. ಪ್ರತಿ ಸೆಕೆಂಡ್‌ಗೂ ನಾವು ಕಾಲದ ಸರಿಯುವಿಕೆಯನ್ನು ಕಾಣುತ್ತೇವೆ. ಭೌತಿಕ ಜಗತ್ತಿನಲ್ಲಿ ಆಗುವ ವ್ಯತ್ಯಾಸಗಳು ಅಥವಾ ಎರಡು ಅಂಥ ವ್ಯತ್ಯಾಸಗಳು ಉಂಟಾಗುವ ನಡುವಿನ ಅವಧಿಯನ್ನು ಹೇಳುವಲ್ಲಿ ಕಾಲ ನೆರವಿಗೆ ಬರುತ್ತದೆ. ಇದನ್ನು ಒಂದು ಉದಾಹರಣೆಯೊಂದಿಗೆ ವಿಶ್ಲೇಷಿಸಬಹುದು.

ಒಂದು ಬಾಣವನ್ನು ಪ್ರಯೋಗಿಸಿದಾಗ ಅದು ಒಂದು ಸೆಕೆಂಡ್‌ಗೆ ಹತ್ತು ಮೀಟರ್‌ಗಳಂತೆ ಚಲಿಸುತ್ತಿದೆ. ಬಾಣ ಚಲಿಸುವ ವೇಗವನ್ನು ಅಳೆಯುವ ಸಾಧನ ಸೆಕೆಂಡ್. ಇಲ್ಲಿಯ ಬಾಣದ ಚಲನೆಯ ವೇಗವನ್ನು ಕಾಲದ ನೆರವಿನಿಂದ ಅಳತೆ ಮಾಡಲಾಗುವುದು. ಹಾಗಾದರೆ ಕಾಲ ಚಲಿಸುವುದಾದರೆ ಅದನ್ನು ಯಾವುದರಿಂದ ಅಳೆಯುವುದು? ಕಾಲವನ್ನು ಕಾಲದಿಂದ? ಅದು ತಪ್ಪು.

ಕಾಲದ ಸ್ಥಿರತೆ ಅಥವಾ ಚಲನೆ ಶುರುವಾದದ್ದು ಐನ್‌ಸ್ಟೈನ್‌ನ ಸಾಪೇಕ್ಷತಾ ಸಿದ್ಧಾಂತದ ಮಂಡನೆಯೊಂದಿಗೆ (೧೯೦೫). (ನ್ಯೂಟನ್ ತನ್ನ ಸಿದ್ಧಾಂತದಲ್ಲಿ ಕಾಲ ಯಾವುದೇ ಬಾಹ್ಯಪ್ರಪಂಚಕ್ಕೆ ಅಥವಾ ವಸ್ತುವಿಗೆ ಸಂಬಂಧವಿರಿಸಿಕೊಳ್ಳದೆ ಏಕದರದಲ್ಲಿ ಎಲ್ಲೆಡೆ ಹರಿಯುತ್ತದೆ ಎಂದು ಮಂಡಿಸಿದ್ದ!) ಅದುವರೆಗೂ ವಿಶ್ವದ ಎಲ್ಲ ಕಡೆ ಒಂದೇ ವರ್ತಮಾನಕಾಲ, ಭೂತ, ಭವಿಷ್ಯತ್ ಕಾಲಗಳು ಇರುವುವೆಂದು ನಂಬಲಾಗಿತ್ತು. ಉದಾಹರಣೆಗೆ, ಮಂಗಳ ಗ್ರಹದ ಮೇಲಿನ ಪಾತ್‌ಫೈಂಡರ್ ಈಗ ಏನು ಮಾಡುತ್ತಿದೆ ಎಂದು ತಿಳಿಯಬೇಕಾದರೆ, ನೀವು ಈ ಪ್ರಶ್ನೆ ಕೇಳುವಾಗ, ಯಾವ ರೀತಿ ಚಲನೆಗೆ ನಿಮ್ಮನ್ನು ಒಡ್ಡಿಕೊಂಡಿದ್ದೀರಿ ಎಂಬುದು ತುಂಬಾ ಮುಖ್ಯ. ಅಂದರೆ ನೀವು

ಮನೆಯಲ್ಲಿ ಕುಳಿತಿದ್ದೀರಾ? ಒಂದು ಉತ್ತರ ನಿಮಗೆ ದೊರಕುತ್ತದೆ, ವಿಮಾನದಲ್ಲಿ ಪಯಣಿಸುತ್ತಿದ್ದರೆ ಇನ್ನೊಂದು. ಬೆಳಕಿನ ವೇಗದ ಸಮೀಪ ಚಲಿಸುತ್ತಿದ್ದರಂತೂ ಹಲವಾರು ನಿಮಿಷಗಳು ಸಂದನಂತರವೇ ಪಾತ್ ಫೈಂಡರ್‌ನ ಉತ್ತರ ದೊರಕೀತು. ಅಂದರೆ ಭೂತ, ಭವಿಷ್ಯತ್ ಹಾಗೂ ವರ್ತಮಾನ ಕಾಲಗಳು ಕೂಡ ವ್ಯತ್ಯಾಸವಾಗುತ್ತವೆ. ಈಗಿನ ವರ್ತಮಾನ ಕಾಲವೇ ನಿಜವಾದದ್ದು ಎನ್ನುವಂತಿಲ್ಲ. ಹಿಂದಿನವರ ತಿಳಿವಳಿಕೆಯಂತೆ ಕಾಲವೆಂಬುದು ಒಂದು ಹರಿಯುವ ನದಿಯಂತೆ, ಆ ನದಿಯು ಪ್ರವಾಹದಲ್ಲಿ ನಮ್ಮನ್ನೆಲ್ಲಾ ಸೇರಿಸಿಕೊಂಡು ಹರಿಯುವ ಕಲ್ಪನೆ ಇತ್ತು. ಇತ್ತೀಚೆಗೆ ಕಾಲ ಪಂಡಿತರು, ಕಾಲ ಹರಿಯುವಂತಹುದಲ್ಲ, ಇದ್ದಲ್ಲಿಯೇ ಇರುವಂತಹುದು ಎಂದು ಹೇಳುತ್ತಾರೆ. ಈಗಿನ ಸಮಸ್ತ ವಿಶ್ವ ಕಾಲಸಾಗರದಲ್ಲಿ ಮುಳುಗಿದೆ.

ನಾವು ಒಂದು ಚಲನಚಿತ್ರ ವೀಕ್ಷಿಸುತ್ತಿದ್ದರೆ, ಅದರಲ್ಲಿ ಯುವಕ ಮುದುಕನಾಗುವುದನ್ನು, ಬೀಜ ಮೊಳೆತು ಸಸಿಯಾಗುವುದನ್ನು ಮೇಲಿಂದ ಬಿದ್ದ ವಸ್ತು ಒಡೆಯುವುದನ್ನು ಕಾಣುತ್ತೇವೆ. ಅದೇ ಚಿತ್ರವನ್ನು ಹಿಮ್ಮುಖವಾಗಿ ಚಲಿಸಿ—ಬಿದ್ದ ವಸ್ತು ಮೊದಲಿನಂತೆ ಮೇಲೆ ಹೋಗುತ್ತದೆ, ಸಸಿ ಪುನಃ ಬೀಜವಾಗುತ್ತದೆ, ಮುದುಕರು ಯುವಕರಾಗುತ್ತಾರೆ. ಆದರೆ ನಮ್ಮ ಕಣ್ಣಿಗೆ ಇದು ಒಂದು ತರಹ ಮೋಸವೆಂಬುದು ಗೊತ್ತಾಗುತ್ತದೆ. ನಿಜವಾಗಿ ಜೀವನದಲ್ಲಿ ಈ ರೀತಿ ಹಿಮ್ಮುಖ ಚಲನೆ ಸಾಧ್ಯವಿಲ್ಲ ಎಂದು ವಿಜ್ಞಾನಿಗಳು ಹೇಳುತ್ತಾರೆ. ಯಾಕೆಂದರೆ ಕಾಲವೆಂಬುದು ಚಲನೆಯಲ್ಲಿಲ್ಲದ ಪರಿಮಾಣ ಅಥವಾ ಗುಣ. ಆದರೆ ಒಂದು ದಿಕ್ಕಿನಲ್ಲಿ ಮುಖ ಮಾಡಿ ನಿಂತ ಬಾಣದ ಪರಿಕಲ್ಪನೆಯನ್ನು ಕಾಲಕ್ಕೆ ವಿಜ್ಞಾನಿಗಳು ಕೊಟ್ಟಿದ್ದಾರೆ. ಬಾಣದ ಹಿಂತುದಿ ಕಾಲದ ಆದಿಭಾಗ ವಿಶ್ವದ ಉಗಮಕ್ಕೆ ಕಾರಣವಾದ ಮಹಾಭಾಜಣೆಯಲ್ಲಿ ಸೇರುತ್ತದೆ. ವಿಶ್ವದ ಆದಿಯಿಂದಲೂ ಕಾಲ ಇದ್ದೇ ಇದೆ. ಕಾಲವು ದಿಕ್ಸೂಚಿ ಅಥವಾ ಗಾಳಿ ಕೋಳಿಯ ರೀತಿ ಒಂದು ದಿಕ್ಕಿಗೆ ಮುಖ ಮಾಡಿ ನಿಲ್ಲಬಹುದೇ ವಿನಾ ಅದು ಆ ದಿಕ್ಕಿನಲ್ಲಿ ಚಲಿಸಲಾರದು.

ಈ ದಿಕ್ಸೂಚಿತ್ವ ಹೇಗೆ ಬಂತು? ಇದಕ್ಕಾಗಿ ಉಷ್ಣಗತಿ ವಿಜ್ಞಾನದ ಎರಡನೆಯ ನಿಯಮವ ಮೊರೆಹೋಗಬೇಕು? ಇಲ್ಲಿ ಯಾವಾಗಲೂ ಉಷ್ಣ ಬಿಸಿ ವಸ್ತುವಿನಿಂದ ತಣ್ಣನೆ ವಸ್ತುವಿಗೆ ವರ್ಗಾಯಿಸಲ್ಪಡುತ್ತದೆ ಎಲ್ಲಿಯವರೆಗೆ? ಸಮತೋಲನಕ್ಕೆ ಬರುವವರೆಗೆ ಸಮತೋಲನಕ್ಕೆ ಬಂದಾಗಿನ ವಸ್ತುಗಳಲ್ಲಿ ಅಣುಗಳು, ಅತಿಹೆಚ್ಚು ಅವ್ಯವಸ್ಥೆಯಲ್ಲಿ ಇರುತ್ತವೆ. ಉದಾಹರಣೆಗೆ ಒಂದು ಸೆಂಟ್ ಬಾಟಲ್ ಅನ್ನು ತೆರೆದಿಟ್ಟಿದ್ದೀರಾ ಎಂದುಕೊಳ್ಳಿ, ಅದರಲ್ಲಿಯ ಕಣಗಳೆಲ್ಲಾ ಆವಿಯಾಗಿ ಬಾಟಲ್‌ನಿಂದ ಹೊರಗೆಬಂದ ಮೇಲೆ, ಒಟ್ಟಾಗಿ ತಾವಾಗಿಯೇ ಬಾಟಲ್‌ನೊಳಗೆ ಹೋಗುವುದು ಆಗುವುದಿಲ್ಲ. ಅದ್ದರಿಂದ ಅವ್ಯವಸ್ಥೆ ಹೆಚ್ಚಾಗಿರುತ್ತದೆ. ಅದೇ ರೀತಿ ವಿಶ್ವವೂ, ವಿಸ್ತರಿಸುತ್ತಾ ಉಷ್ಣಗತಿ ವಿಜ್ಞಾನದ ಎರಡನೆಯ ನಿಯಮದಂತೆ ಸಮತೋಲನದಲ್ಲಿರುತ್ತಾ ಅವ್ಯವಸ್ಥೆಯನ್ನು ಹೆಚ್ಚಿಸಿಕೊಂಡಿವೆ. ಆದರೆ ಅಸಮತೋಲನದಲ್ಲಿ ಇರುವಲ್ಲಿ ಎಲ್ಲವೂ ವ್ಯವಸ್ಥಿತವಾಗಿರುತ್ತದೆ. ಮಹಾಬಾಜಣೆ ಆದಿಕ್ಷಣದಿಂದ ವಿಶ್ವವೂ ಕೂಡ ವಿಸ್ತರಿಸುತ್ತಾ ಹೋಗುತ್ತಿದೆ, ಅಂದರೆ ಸಮತೋಲನ ಏರ್ಪಟ್ಟಿದೆ.

ಈ ವಿಶ್ವ ವಿಸ್ತರಿಸುವ ಬದಲು ಕುಗ್ಗುತ್ತಾ ಹೋಗಿತ್ತೆಂದಿಟ್ಟುಕೊಳ್ಳಿ, ಆಗ ಕಾಲದ ಬಾಣವೂ ಕೂಡ ಹಿಮ್ಮುಖವಾಗಿ ನಿಲ್ಲುತ್ತದೆ. ಉಷ್ಣ, ತಣ್ಣನೆ ವಸ್ತುವಿನಿಂದ ಬಿಸಿ ವಸ್ತುವಿಗೆ ಹರಿಯುತ್ತದೆ, ಮಳೆಹನಿಗಳು ಭೂಮಿಯಿಂದ ಮುಗಿಲಿಗೇರುತ್ತವೆ, ಮುದುಕರೆಲ್ಲರೂ ಹುಡುಗರಾಗುತ್ತಾರೆ. ಒಟ್ಟಿನಲ್ಲಿ ಚಲನಚಿತ್ರವನ್ನು ಹಿಮ್ಮುಖವಾಗಿ ಚಲಿಸಿದರೆ ಏನೇನಾಗುತ್ತದೋ ಅದೆಲ್ಲಾ ಆಗುತ್ತದೆ

ಮಹಾಬಾಜಣೆಯಿಂದ ವಿಶ್ವ ವಿಸ್ತಾರವಾಗುವುದು ಸರಳವಾಗಿರುವಂತೆ, ವಿಶ್ವದ ಕುಗ್ಗುವಿಕೆ ಸರಳವಾಗಿಲ್ಲ ಮಹಾಚೂರ್ಣನೆ. ಈ ಕುಗ್ಗುವಿಕೆ ಬರಿ ಕೃಷ್ಣವಿವರಗಳು ಹಾಗೂ ಗುರುತ್ವ ಪ್ರೇರಿತ ಕುರಿತದಿಂದಾಗುವ ವಸ್ತುಗಳಿಂದಲೇ ಬ್ರಹ್ಮಾಂಡ ತುಂಬಿರುತ್ತದೆ. ಆದರೆ ಈ ಎಲ್ಲಾ ಊಹೆಗಳು ಭದ್ರ ತಳಪಾಯವಿಲ್ಲದ ಸಮೀಕರಣಗಳಿಂದ ಹೇಳಲ್ಪಟ್ಟಿರುವುದರಿಂದ ಕಾಲ ಕುರಿತಂತೆ ಬಾಣದ ಕಲ್ಪನೆ ಹಾಗೆಯೇ ಉಳಿಯುತ್ತದೆ.

ಕಾಲಗಣನೆಗೆ ಒಂದು ಮಾಪಕದ ಅಗತ್ಯ ಉಂಟಾದಾಗ ಸೌರ ಗಗನದೀಪಗಳಾದ ಸೂರ್ಯ, ಚಂದ್ರಗಳು ನೆರವಿಗೆ ಬಂದುವು. ಮರುಳು ಗಡಿಯಾರ, ನೆರಳು ಗಡಿಯಾರ ಮುಂತಾದ ಸಲಕರಣೆಗಳು ಕಾಲಮಾಪಕಗಳಾಗಿ ರೂಪುಗೊಂಡುವು. ಈಗ ಅಜ್ಜನ ಕಾಲದ ಭಾರದ ಲೋಲಕದ ಗೋಡೆ ಗಡಿಯಾರಗಳಿಂದ ಹಿಡಿದು, ಅತ್ಯಾಧುನಿಕ ಎಲೆಕ್ಟ್ರಾನಿಕ್ ಗಡಿಯಾರಗಳು ಪರಮಾಣು ಗಡಿಯಾರಗಳು ಬಳಕೆಯಲಿವೆ. ಆದರೇ ಕಾಲದ ರಹಸ್ಯ ಕರಗತವಾಗಲಿಲ್ಲ. ಉದಾಹರಣೆಗೆ ೧ ಸೆಕೆಂಡಿನ ನಿಖರ ಅವಧಿ ಎಷ್ಟು?

ಪ್ರಕೃತ ಸೀಸಿಯಮ್ ಪರಮಾಣುಗಳ ಆವರ್ತನಗಳನ್ನು ಲೆಕ್ಕ ಹಾಕುತ್ತಾ ಒಂದು ಸೆಕೆಂಡ್‌ನ ಅವಧಿಯಲ್ಲಿ ಸರಿಯಾಗಿ ಎಷ್ಟು ಆವರ್ತನಗಳಾಗುತ್ತವೆ ಎಂದು ಕಂಡು ಹಿಡಿದು, ಸೆಕೆಂಡ್‌ನ ಅವಧಿಯನ್ನು ಹೇಳುತ್ತಾರೆ. ೧೯೬೭ ರಲ್ಲಿ ಪ್ರಪಂಚಾದ್ಯಂತ ವಿಜ್ಞಾನಿಗಳು ಒಮ್ಮತಕ್ಕೆ ಬಂದರು "೧ ಸೆಕೆಂಡ್ ಎಂದರೆ ಸರಿಯಾಗಿ, ೯೧೯೨೬೩೧೭೭೦ ಸೀಸಿಯಮ್ ಅಲೆಗಳು" ಈ ತರಹದ ಸೀಸಿಯಮ್ ಅಣು ಗಡಿಯಾರಗಳು ಕರಾರುವಾಕ್ಕಾದ ಕಾಲ ಹೇಳುತ್ತವೆ. ಉದಾಹರಣೆಗೆ ಈ ತರಹದ ಗಡಿಯಾರಗಳನ್ನು ನೂರು ದಶಲಕ್ಷ ವರ್ಷಗಳ ಹಿಂದೆ ಡೈನೋಸಾರ್ (ಹೆಗ್ಗೌಳಿಗಳು) ಭೂಮಿಯ ಆಧಿಪತ್ಯ ನಡೆಸುತ್ತಿದ್ದಾಗ ಪ್ರವರ್ತಿಸಿ ಇಟ್ಟಿದ್ದಾಗಿದ್ದರೆ, ಈ ದಿನಕ್ಕೂ ಅದು ಒಂದು ಸೆಕೆಂಡ್‌ನೊಳಗೆ ಕಾಲವನ್ನು ಕರಾರುವಾಕ್ ತಿಳಿಸಿರುತ್ತಿತ್ತು. ಅಂದರೆ ನಮ್ಮ ನಿಮ್ಮ ಕೈಗಡಿಯಾರಗಳು, ಈ ತರಹದ ಕಾಲ ಮಾಪನದ ಅಳವಿಗೇ ಸಿಕ್ಕದೆ ತಳಕಾಣುತ್ತವೆ. ಸೀಸಿಯಮ್—ಆಧಾರಿತ ಸೆಕೆಂಡ್ ಕೂಡ ಹತ್ತು ಬಿಲಿಯನ್ ವರ್ಷಗಳಲ್ಲಿ ೧ ಸೆಕೆಂಡಿನಷ್ಟು ವ್ಯತ್ಯಾಸ ತೋರಬಹುದು. ನಿಜ. ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ.

ಪುಸ್ತಕ ಪರಿಚಯ

I **'ಕಲಾನಿಧಿ'**—ಸಂಪಾದಕ : ಟಿ.ಎಸ್. ಛಾಯಾಪತಿ; ಪ್ರಕಾಶಕರು : ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ನಂ. ೯ 'ರಮ್ಯ' ಗೋಕುಲಂ ಮೂರನೆಯ ಹಂತ. ಮೈಸೂರು–೫೭೦ ೦೦೨; ಪುಟ–XVI+೨೭೬, ಬೆಲೆ ೭೦–೦೦ ರೂ.

ನಾಡಿನ ಖ್ಯಾತ ಕಲಾವಿದ, ಜಾನಪದ ತಜ್ಞ, ಲೇಖಕ ಪಿ. ಆರ್. ತಿಪ್ಪೇಸ್ವಾಮಿ ಅವರನ್ನು ಕುರಿತ ಸಂಕಲ ಕೃತಿ 'ಕಲಾನಿಧಿ'. ಈ ಕೃತಿಯಲ್ಲಿ ೫೭ ಲೇಖನಗಳಿದ್ದು, ಎರಡು ಭಾಗಗಳಲ್ಲಿ ಲೇಖನಗಳು ಸೇರ್ಪಡೆಯಾಗಿವೆ. ಕಲಾನಿಧಿ ಭಾಗ–೧ ರಲ್ಲಿ ಕನ್ನಡದ ೫೦ ಲೇಖನಗಳು ಮತ್ತು ೪ ಕವನಗಳು ಸೇರಿವೆ. ಕಲಾನಿಧಿ ಭಾಗ–೨ರಲ್ಲಿ ೩ ಆಂಗ್ಲ ಲೇಖನಗಳಿವೆ.

ಪಿ. ಆರ್. ತಿಪ್ಪೇಸ್ವಾಮಿ ಅವರನ್ನು ಕುರಿತು ನಾಡಿನ ಹಿರಿಯ ಲೇಖಕರು ಕಲಾವಿದರು, ಒಡನಾಡಿಗಳು ಆತ್ಮೀಯರು (ತಿಪ್ಪೇಸ್ವಾಮಿ ಅವರಿಗೆ ಎಲ್ಲರೂ ಆತ್ಮೀಯರೆ) ಕಿರಿಯರು ವಿವಿಧ ಸಂದರ್ಭಗಳಲ್ಲಿ ಬರೆದ ಲೇಖನಗಳಾಗಿವೆ. ಈ ಸಂಕಲನದಲ್ಲಿರುವ ಬಹುಪಾಲು ಲೇಖನಗಳು ನಾಡಿನ ಜನಪ್ರಿಯ ಮಾಸಿಕ, ವಾರ ಹಾಗೂ ದಿನ ಪತ್ರಿಕೆಗಳಲ್ಲಿ ಪ್ರಕಟಗೊಂಡಂಥವು. ತಿಪ್ಪೇಸ್ವಾಮಿ ಅವರಿಗೆ ೭೫ ವರ್ಷಗಳು ತುಂಬಿದ ಸಂದರ್ಭದ ನೆನಪಿಗಾಗಿ ಈ ಕೃತಿಯನ್ನು ಹೊರತಂದಿರುವುದಾಗಿ ಸಂಪಾದಕರ ವ್ಯಕ್ತಪಡಿಸಿರುವ ಆಶಯ ಸಾರ್ಥಕವಾಗಿದೆ.

'ಕಲಾನಿಧಿ' ಕೃತಿಯಲ್ಲಿರುವ ನಿರಂತರ ಆಶಾವಾದಿ, ನಿಸರ್ಗ ಆರಾಧಕ, ಮುಪ್ಪರಿಯದ ಕ್ರಿಯಾಶೀಲ, ಸ್ನೇಹಜೀವಿ, ಕಲಾ ತಪಸ್ವಿ, ಕಲೆ, ಸಾಹಿತ್ಯಗಳ ಸಂಗಮ. ಜಾನಪದ ಹರಿಕಾರ. ಕಲಾವಿದ-ಸಂಘಟಕ, ಸಂಸ್ಕೃತ ಕಲೋಪಾಸಕ, ಈ ಮುಂತಾದ ಲೇಖನಗಳ ಶೀರ್ಷಿಕೆಗಳೇ ತಿಪ್ಪೇಸ್ವಾಮಿಯವರ ಬಹುಮುಖಗಳನ್ನು ಪ್ರತಿಬಿಂಬಿಸುತ್ತವೆ.

ಶ್ರೀಯುತರು ಪ್ರಮುಖವಾಗಿ ಕಲೆ, ಸಾಹಿತ್ಯ ಮತ್ತು ಜಾನಪದ ಈ ಮೂರು ಕ್ಷೇತ್ರಗಳಲ್ಲಿ ಕೆಲಸಮಾಡಿದ್ದಾರೆ. ಸಂಕಲನದಲ್ಲಿರುವ ಬಹುಸಂಖ್ಯೆಯ ಲೇಖನಗಳು ಈ ಮೂರು ಕ್ಷೇತ್ರಗಳಲ್ಲಿನ ಸಾಧನೆಯನ್ನೇ ಪ್ರತಿಬಿಂಬಿಸುವಂಥವು. ಆದ್ದರಿಂದ ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ವರ್ಗೀಕರಿಸಬಹುದಿತ್ತು.

ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆ ಅವರು ಮತ್ತು

ಕರ್ನಾಟಕ ಸರ್ಕಾರದ ಉಪಮುಖ್ಯಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯ ಅವರ ಸಂದೇಶ ಹೊಂದಿದ್ದು, ಸುಧಾಕರ ದರ್ಬೆ ಅವರ ಅರ್ಥವತ್ತಾದ ಮುಖಚಿತ್ರ ಉತ್ತಮ ಕಾಗದದಲ್ಲಿ ಮುದ್ರಣವಾಗಿ ಕೃತಿಗೆ ಮೆರಗಿತ್ತಿದೆ. ಮುದ್ರಣ ಕಾಗದವೂ ಉತ್ತಮವಾಗಿದ್ದರೆ, ಕೃತಿ ಅಂದ ಇಮ್ಮಡಿಸುತ್ತಿತ್ತು.

* * *

II 'ಮಲೆಸೀಮೆಯ ಕಥೆಗಳು' ಸಂಪಾದಕ : ಪ್ರೊ|| ಜೆ. ಕೆ. ರಮೇಶ
ಪುಟ–XII+೧೧೬, ಕ್ರೌನ್ ೧/೮, ಬೆಲೆ : ೨೫-೦೦ ರೂ.

III ನೀತ್ಯುಳ್ಳ ಜ್ಯೋತೀ ನಡೆಮುಂದೆ. ಸಂಪಾದಕ : ಪ್ರೊ|| ಜೆ. ಕೆ. ರಮೇಶ, ಪುಟಗಳು—೧೫೦+XXV, ಕ್ರೌನ್ ೧/೮, ಬೆಲೆ : ೪೦-೦೦ ರೂ.

ಮೇಲಿನ ಎರಡೂ ಪುಸ್ತಕಗಳ ಪ್ರಕಾಶಕರು :
ಚಕೋರ ಪ್ರಕಾಶನ, ೧೨ನೆಯ ಅಡ್ಡರಸ್ತೆ, ಸೊಪ್ಪುಗುಡ್ಡೆ, ತೀರ್ಥಹಳ್ಳಿ-೫೭೭೪೩೨.

ಮಲೆಸೀಮೆಯ ಕಥೆಗಳು :

ಶಿವಮೊಗ್ಗ ಜಿಲ್ಲೆಯ ವಿಶೇಷವಾಗಿ ತೀರ್ಥಹಳ್ಳಿ ಪಾಸಲೆಯಲ್ಲಿ ಸಂಗ್ರಹಿಸಿರುವ ಜಾನಪದ ಕಥೆಗಳ ಸಂಕಲನ 'ಮಲೆಸೀಮೆಯ ಕಥೆಗಳು'. ಈ ಸಂಪಾದನಾ ಕೃತಿಯಲ್ಲಿ ಒಟ್ಟು ಹದಿನೈದು ಜಾನಪದ ಕಥೆಗಳಿದ್ದು, ಇವು ಅತಿಮಾನುಷ ಅಂಶ, ಪೌರಾಣಿಕತೆ, ಚತುರೋಕ್ತಿ, ವಿನೋದ ಮುಂತಾದ ವಿಭಿನ್ನ ವಿಷಯಗಳ ಸುತ್ತ ಹೆಣೆದ ಕಥೆಗಳಾಗಿವೆ.

"ಮಲೆಸೀಮೆಯ ಕಥೆಗಳೆಂದು ಸಂಕಲನಕ್ಕೆ ಹೆಸರಿಟ್ಟಿದ್ದೇನಾದರೂ ಎಲ್ಲೋ ಒಂದು ಹೆಸರು. ಕಾಡು ಇವನ್ನು ಬಿಟ್ಟರೆ ಮಲೆನಾಡಿಗೇ ಮೀಸಲೆನಿಸುವ ವಿಶೇಷ ಸಾಂಸ್ಕೃತಿಕ ಸಂಗತಿಗಳಾವುವೂ ಈ ಕಥೆಗಳಲ್ಲಿ ಕಂಡುಬರುವುದಿಲ್ಲ. ಭಾಷೆಯೊಂದೇ ಇವುಗಳನ್ನು ಪ್ರಾದೇಶಿಕವಾಗಿ ಪ್ರತ್ಯೇಕಿಸುವ ಸೂತ್ರವಾಗಿದೆ. ಅರೆಮಲೆನಾಡು ಪ್ರದೇಶವಾಗಿ ಶಿವಮೊಗ್ಗ ತಾಲ್ಲೂಕಿನ ವಕ್ತೃಗಳ ಭಾಷೆ. ಇದು ದಾವಣಗೆರೆ ಕನ್ನಡ ಉಪಭಾಷೆಗೆ ಹತ್ತಿರವಾಗಿದೆ. ಅಚ್ಚ ಮಲೆನಾಡಾದ ತೀರ್ಥಹಳ್ಳಿ ತಾಲ್ಲೂಕಿನ ವಕ್ತೃಗಳ ಭಾಷೆಗಿಂತ ಭಿನ್ನವಾಗಿದೆ. ಭಾಷಾ ವಿಜ್ಞಾನದ ದೃಷ್ಟಿಯಿಂದ ಅಧ್ಯಯನ ಮಾಡಬಯಸುವವರಿಗೆ ಇಲ್ಲಿ ಸರಕು ಸಮೃದ್ಧವಾಗಿದೆ. ಸಾಧ್ಯವಾದಷ್ಟು ಕಥೆಗಳನ್ನು ಹೇಳಿದವರ ಭಾಷೆಯಲ್ಲೇ ಅಚ್ಚಿಸಲು ಯತ್ನಿಸಲಾಗಿದೆ." ಎಂಬ ಸಂಪಾದಕರ ಅಭಿಪ್ರಾಯಕ್ಕೆ ಕೃತಿಯಲ್ಲಿನ ಕಥೆಗಳು ಪುಷ್ಟಿ ನೀಡುತ್ತವೆ.

ಇಲ್ಲಿನ ಕಥೆಗಳನ್ನು ಜಾನಪದರ ಬಾಯಿಂದ ಕೇಳಿ ಕೃತಿಗಿಳಿಸಿರುವ ಸಂಪಾದಕರು ಲೇಖಕರೂ ಹೌದು. ಈ ಕಥೆಗಳಲ್ಲಿ ಪ್ರಾದೇಶಿಕ ಬನಿ ಮಡುಗಟ್ಟಿದೆ. ಕೃತಿಯ ಕೊನೆಯಲ್ಲಿ ನೀಡಿರುವ ಅನುಬಂಧ, ವಿಷಯ ಸೂಚಿ, ಅರ್ಥಕೋಶ ಮುಂತಾದುವು ಕೃತಿಯನ್ನು ಹೆಚ್ಚು ಅರ್ಥೈಸಿಕೊಳ್ಳಲು ಸಹಕಾರಿಯಾಗಿದೆ. 'ಮಲೆಸೀಮೆಯ ಕಥೆಗಳು' ಈ ಕ್ಷೇತ್ರದಲ್ಲಿನ ಅಧ್ಯಯನಾಸಕ್ತರಿಗೆ ಒಂದು ಪರಾಮರ್ಶನ ಕೃತಿಯಾಗಿದೆ.

* * *

ನೀತ್ಯುಳ್ಳ ಜ್ಯೋತೀ ನಡೆ ಮುಂದೆ:

ಮಲೆನಾಡಿನಲ್ಲಿ ಪ್ರಚಲಿತದಲ್ಲಿರುವ ಅಂಟಿಗೆ ಪಂಟಿಗೆ ಪದಗಳ ಸಂಗ್ರಹ ಕೃತಿ 'ನೀತ್ಯುಳ್ಳ ಜ್ಯೋತೀ ನಡೆಮುಂದೆ.' ವಿಶೇಷವಾಗಿ ದೀಪಾವಳಿ ಸಂದರ್ಭದಲ್ಲಿ ಮನೆಮನೆಗೆ ಜ್ಯೋತಿಯನ್ನು ಹೊತ್ತೊಯ್ದು ತಂಡ ಮನೆ ಬಾಗಿಲಲ್ಲಿ ನಿಂತು ಹಾಡಿ ಹರಸಿ ಪ್ರತಿಯಾಗಿ ಧನ ಧಾನ್ಯ ಸಂಗ್ರಹಿಸುವುದು ಅಂಟಿಗೆ ಪಂಟಿಗೆಯ ಜಾನಪದ ಸಂಪ್ರದಾಯ.

ಈ ಕೃತಿಯು ಪ್ರಮುಖವಾಗಿ ಸಂಪ್ರದಾಯದ ಪದಗಳು, ಸಾಂದರ್ಭಿಕ ಹಾಡುಗಳು, ಜಾತಿ ಬೆಡಗುಗಳು ಮತ್ತು ಕಥನ ಗೀತೆಗಳು ಎಂಬ ನಾಲ್ಕು ವಿಭಾಗಗಳಲ್ಲಿ ಹಂಚಿಕೊಂಡಿದೆ. ವಿಸ್ತಾರ ಮತ್ತು ವೈವಿಧ್ಯಮಯವಾದ ಜಾನಪದ ಕ್ಷೇತ್ರದಲ್ಲಿ ಜ್ಯೋತಿ ಮೆರವಣಿಗೆಗೆ ವಿಶಿಷ್ಟ ಅರ್ಥ ಇದೆ. ಜ್ಯೋತಿಯು ಮನೆಯ ಕತ್ತಲನ್ನು ನಿವಾರಿಸಿದರೆ ಈ ಸಂದರ್ಭದಲ್ಲಿ ಹೇಳುವ ಪದಗಳು ಮನದ ಕತ್ತಲನ್ನು (ಅನಕ್ಷರತೆ) ನಿವಾರಿಸಿ, ಅಕ್ಷರ ಜ್ಞಾನ ನೀಡುತ್ತದೆ.

ಮಲೆನಾಡಿನ ಪ್ರದೇಶಗಳಲ್ಲಿ ವರ್ಷಕ್ಕೊಮ್ಮೆ ಅಂಟಿಗೆ ಪಂಟಿಗೆ ತಂಡದವರು ಮನೆಗೆ ಬಂದಾಗ ಇವರಿಂದ ಪದ ಹೇಳಿಸಿ ಕೃತಾರ್ಥರಾಗುವ ಜಾನಪದರು ಈಗಲೂ ಇದ್ದು, ಅನೌಪಚಾರಿಕ ಶಿಕ್ಷಣ ಪ್ರಸಾರದ ಈ ಪದ್ಧತಿಯು ಇಂದಿಗೂ ಜೀವಂತವಾಗಿದೆ.

'ಸಂಪ್ರದಾಯದ ಪದಗಳ' ವಿಭಾಗದಲ್ಲಿ ಜ್ಯೋತಿಯನ್ನು ಹಚ್ಚಿಕೊಂಡು ಮನೆಮನೆಗೆ ಮೆರವಣಿಗೆ ಹೋಗಿ ಪದಗಳನ್ನು ಹಾಡಿ, ಧನಧಾನ್ಯ ಸಂಗ್ರಹಿಸಿ ಕೊನೆಗೆ ಜ್ಯೋತಿಯನ್ನು ಬೀಳ್ಕೊಡುವವರೆಗಿನ ಸಂದರ್ಭಗಳನ್ನು ಚಿತ್ರಿಸಲಾಗಿದೆ.

'ಸಾಂದರ್ಭಿಕ ಹಾಡುಗಳಲ್ಲಿ' ವಿಘ್ನನಿವಾರಕ ಗಣಪತಿ ಸ್ತುತಿ, ಮದುವೆಯ ವಿವಿಧ ಸಂದರ್ಭಗಳ ಚಿತ್ರಣ, ಮಲೆನಾಡು ಒಕ್ಕಲಿಗರ ಆರಾಧ್ಯ ದೈವ ತಿರುಪತಿ ತಿಮ್ಮಪ್ಪನ ಕುರಿತ ತಿರುಪತಿ ಯಾತ್ರೆ, ಬಸವನ ಪದ, ಮಲೆನಾಡಿನ ಅವಿಭಾಜ್ಯ ಅಂಗವಾದ ಬೇಟೆ ಮುಂತಾದುವುಗಳನ್ನು ಕುರಿತ ಪದಗಳು ಸೇರ್ಪಡೆಯಾಗಿವೆ.

'ಜಾತಿ ಬೆಡಗುಗಳು' ವಿಭಾಗದಲ್ಲಿರುವ ಪದಗಳನ್ನು ಆಯಾಯಾ ಜಾತಿಯವರ ಮನೆಗಳಿಗೆ ತಂಡದವರು ಹೋಗಿ ಹಾಡುವ ಪದ್ಧತಿ ಇದ್ದು, ಈ ಪದಗಳನ್ನು ಜಾತೀಯತೆಯ ಸೋಂಕಿಲ್ಲದೆ ವಿವಿಧ ಜಾತಿಗಳನ್ನು ಒಂದಾಗಿ ಬೆಸೆಯುವ ಹಾಸ್ಯ ಲೇಪನದೊಂದಿಗೆ ಸಮಾಜದ ವಾಸ್ತವತೆಗೆ ಸಾಕ್ಷಿಯಾದ ಪದಗಳಾಗಿವೆ.

ಕೊನೆಯದಾದ' ಕಥನ ಗೀತೆಗಳು, ಇಲ್ಲಿ ಗಣಪನ ಪಾರ್ಥನೆ, ರೈತನ ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಗೋವಿನ ಬಗೆ

ಇರುವ ಪದಗಳು ವಿಶಿಷ್ಟವಾಗಿವೆ. ಅಂತೆಯೇ ಮಲೆನಾಡು ಪ್ರದೇಶದಲ್ಲಿ ಜನಪ್ರಿಯತೆಗಳಿಸಿ ಕೊಂಡಿರುವ ಅರ್ಜುನ ಸ್ವಾಮಿ ಹಾಡು ಈ ಹಿಂದಿನ ಸಂಗ್ರಹಗಳಿಗಿಂತ ಭಿನ್ನವಾಗಿರುವುದು ವಿಶೇಷ ಅಂಶವಾಗಿದೆ.

ಕೃತಿ ಕೊನೆಯಲ್ಲಿರುವ ಹಾಡು ಹೇಳಿದ ವರ ವಿವರ, ಪ್ರತಿ ಪದ (ಹಾಡು)ಗಳಿಗೆ ಕೊಟ್ಟಿರುವ ಟಿಪ್ಪಣಿಗಳು, ಅರ್ಥಕೋಶ ಮುಂತಾದವು ಅಧ್ಯಯನಾಸ್ತಕರಿಗೆ ಸಹ ಕಾರಿಯಾಗಿದೆ. ಮುಖಚಿತ್ರ ಅರ್ಥಪೂರ್ಣ ವಾಗಿದ್ದು, ಮುದ್ರಣ ಅಂದವಾಗಿದೆ.

ಕೃತಿಯನ್ನು ಕುರಿತು 'ಸಾಹಿತ್ಯದ ಸೊಗಸು, ಅಭಿವ್ಯಕ್ತಿಯ ವೈಶಿಷ್ಟ್ಯ, ಸಂಪ್ರದಾಯದ ಸ್ವೋಪಜ್ಞ ಶೀಲ ನಿರೂಪಣೆ ಗಳಿಂದ ಈ ಕೃತಿ ಮಲೆನಾಡಿನ ಸಾಂಸ್ಕೃತಿಕ ಜಗತ್ತಿಗೆ ಒಂದು ಕಿರುಗನ್ನಡಿಯಾಗಿದೆ" ಎಂದಿರುವ ಪ್ರೊ|| ಹೆಚ್. ಜೆ. ಲಕ್ಕಪ್ಪ ಗೌಡರ ಮೆಚ್ಚಿಕೆ ನುಡಿಗೆ ಓದುಗರೂ ದನಿಗೂಡಿಸಬಹುದು.

ಚಂದ್ರಶೇಖರಾರಾಧ್ಯ
೧೪೫, 'ಇಂಚರ', ಎಂ. ಬ್ಲಾಕ್
೨ ನೆಯ ಹಂತ, ಕುವೆಂಪುನಗರ, ಮೈಸೂರು-೨೩

ಓದುಗರ ಅನಿಸಿಕೆ

ಮಾನ್ಯರೇ,

ಸಂಚಿಕೆ೧೧-೧೨ ರಲ್ಲಿ ಪ್ರಕಟವಾಗಿರುವ ಮೇಜರ್ ಜರ್ನಲ್ ಎಸ್. ಜೆ. ಒಂಬತ್ತುಕೆರೆ (ನಿ) ಅವರ 'ಬೈಜಿಕ ಸಮರದ ಪರಿಣಾಮಗಳು' ಅಣು ಸಮರದ ಘೋರ ದೃಶ್ಯವನ್ನು ಭಯಾನಕವಾಗಿ ಚಿತ್ರಿಸಿದೆ. ಲೇಖನದ ಕೊನೆಯಲ್ಲಿರುವ "ಮೂರನೆಯ ಪ್ರಪಂಚ ಯುದ್ಧ ಯಾವ ತೆರನಾಗಿ ಕಾದಾಡಲ್ಪಟ್ಟೀತೆಂದು ನನಗೆ ತಿಳಿದಿಲ್ಲ. ಆದರೆ ನಾಲ್ಕನೆಯದರಲ್ಲಿ ಅವರು ಏನು ಬಳಸುವರೆಂಬುದು ಗೊತ್ತಿದೆ. ಕಲ್ಲುಗಳು" ಎಂದಿರುವ ಆಲ್ಬರ್ಟ್ ಐನ್‌ಸ್ಟೈನ್ ಅವರ ಉಕ್ತಿ ಮಾರ್ಮಿಕವಾಗಿದೆ.

ಗುಡಿಬಂಡೆ — ಆನಂದಮೂರ್ತಿ

ಕೋಲಾರ ಜಿಲ್ಲೆ

ಮಾನ್ಯ ಸಂಪಾದಕರೇ,

ಅಕ್ಟೋಬರ್ ೯೮ ನೇ ಪುಸ್ತಕ ಪ್ರಪಂಚ ಸಂಚಿಕೆ ತುಂಬಾ ಅರ್ಥಪೂರ್ಣವಾಗಿ ಬಂದಿದೆ. ಪ್ರೊ|| ದೇಜಗೌ ಅವರ ಅಂಕಣಗಳು ಔಚಿತ್ಯವಾಗಿದ್ದು, ಸಂಚಿಕೆಯು ಈ ಮಾಹೆಯಲ್ಲಿ ಸ್ಮರಿಸಬಹುದಾದ ಗಾಂಧೀ ವಿಚಾರಧಾರೆ, ಮಹಾತ್ಮರ ನೆರಳಿನಂತಿದ್ದ ಕಸ್ತೂರಿಬಾರವರ ನೆನಪು. ಸಾಂಸ್ಕೃತಿಕ ಬದುಕಿಗೆ, ಭಾರತೀಯ ತತ್ತ್ವಶಾಸ್ತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ ಶ್ರೀ ಜಯಚಾಮ ರಾಜ ಒಡೆಯರ್ ರವರ ಸ್ಮರಣೆಯನ್ನು ಮಾಡಿರುವುದಕ್ಕೆ ಲೇಖಕ ಬಂಧುಗಳಿಗೂ, ಸಂಪಾದಕ ಮಂಡಳಿಗೂ ಅಭಿನಂದನೆಗಳು.

ವಿದ್ಯಾಪೀಠ — ಎ. ಡಿ. ನಂಜುಂಡಸ್ವಾಮಿ

ನಂಜನಗೂಡು

Reg. No. KRNN-29 / WPP 6

LICENCE No. 21
LICENCED TO POST WITH PAYMENT



೧೯೦೬-೧೯೯೮

Editeed by Chandrashekhararadhya Printed by Papanna
Printed & Published by Karnataka State Adult Education Council
5/1, Vinoba Road, Manasa Gangothri, Mysore-570 006.